ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 3 ಸಂಚಿಕೆ 47

ರೂ. 5/-

ನವೆಂಬರ್ 22, 2009

ಕನ್ನಡ ವಾರಪತ್ರಿಕೆ



ಗಣಿ ಮಾಫಿಯಾ ಬ್ಲಾಕ್‌ಮೇಲ್
ಅಡ್ಡಬಿದ್ದ ಬಿಜೆಪಿ



ನೆರೆ ಹಾವಳಿ : ರೈತರ ಆತ್ಮಹತ್ಯೆ ಹೆಚ್ಚಳ

ಹಾಸ್ಟೆಲ್ ವಿದ್ಯಾರ್ಥಿಗಳನ್ನೂ ಕಾಡುವ ಹಸಿವು

ಕರೆಂಟ್ ಕಣ್ಣಾಮುಚ್ಚಾಲೆ ಕೋಲಾರ ಬಂದ್



ಅಸಂಘಟಿತ ಕಾರ್ಮಿಕರು ಮತ್ತು ನಿಕೃಷ್ಟ ವೇತನ

ಭೂಪಾಲ್ ಅನಿಲ ದುರಂತ : ಇನ್ನೂ ಸಿಗದ ನ್ಯಾಯ

ಜನಶಕ್ತಿ ಕನ್ನಡ ವಾರಪತ್ರಿಕೆ

ನವೆಂಬರ್ 22, 2



ಕರ್ನಾಟಕದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪಿ.ಡಿ. ದಿನಕರನ್ ಹೊಂದಿರುವ ಅಕ್ರಮ ಆಸ್ತಿಯ ಪ್ರಶ್ನೆಯ ಮುಂಚೂಣಿಗೆ ಬಂದು ನಿಂತಿದೆ. ತಮಿಳುನಾಡಿನಲ್ಲಿ ಈ ಸಂಬಂಧ ಹೋರಾಟ ತೀವ್ರ ಸ್ವರೂಪ ಪಡೆದಿದೆ. ಈ ಚಳುವಳಿಯ ನೇತೃತ್ವ ವಹಿಸಿರುವ ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ದ ಪ್ರಧಾನ ಕಾರ್ಯದರ್ಶಿ ಕಾಂ.ಕೆ.ವರದರಾಜನ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿದ್ದಾಗ ನಡೆಸಲಾದ ಕಿರು ಸಂದರ್ಶನ.

ಪಿ.ಡಿ. ದಿನಕರನ್ ಅಕ್ರಮ ಭೂಮಿ ಕಬಳಿಕೆ ಪ್ರಕರಣ

‘ಭೂಹೀನ ದಲಿತರಿಗೆ ಭೂಮಿ ಹಂಚಿ

ಚಳುವಳಿಯ ಆಗ್ರಹ - ಭೂಮಿ ಕಬ್ಜಾ ಹೋರಾಟ

ಸಂದರ್ಶನ

ಜನಶಕ್ತಿ : ಪಿ.ಡಿ. ದಿನಕರನ್ ಹೊಂದಿರುವ ಅಕ್ರಮ ಆಸ್ತಿಯ ಕುರಿತು ಎಐಕೆಎಸ್ ಮತ್ತು ಚಳುವಳಿಕಾರರ ಬಳಿ ಏನು ಮಾಹಿತಿ ಇದೆ.

ಕೆ.ವರದರಾಜನ್ : ತಿರುವಳ್ಳೂರು ಜಿಲ್ಲೆಯ ತಿರುಟ್ಟನಿ ತಾಲ್ಲೂಕಿನ ಕಾವೇರಿ ರಾಜಪುರಂ ಎಂಬ ಹಳ್ಳಿಯಲ್ಲಿ ಪಿ.ಡಿ. ದಿನಕರನ್ ಅವರು ಬಾರಿ ಪ್ರಮಾಣದ ಅಕ್ರಮ ಭೂಮಿ ಹೊಂದಿದ್ದಾರೆ. ಸುಮಾರು 400 ಎಕರೆಗಿಂತ ಹೆಚ್ಚು ಭೂಮಿ ದಿನಕರನ್ ಅವರ ಹೆಸರಿನಲ್ಲಿ ಮತ್ತು ಬೇನಾಮಿ ಹೆಸರಿನಲ್ಲಿದೆ. ತಮಿಳುನಾಡಿನ ಭೂಮಿತಿ ಕಾಯ್ದೆಯಂತೆ ಒಂದು ಕುಟುಂಬ 15 ಎಕರೆ ಗುಣಮಟ್ಟದ ಭೂಮಿಗಿಂತ ಹೆಚ್ಚು ಭೂಮಿ ಹೊಂದಿರುವಂತಿಲ್ಲ. ಈ ಪ್ರಕರಣದಲ್ಲಿ ಭೂಮಿತಿ ಕಾಯ್ದೆ ಜಾರಿಯಾಗಿಲ್ಲ. ರಾಜ್ಯದ ಇತರ ಭಾಗಗಳಲ್ಲಿಯೂ ಈ ಕಾಯ್ದೆ ಸಮರ್ಪಕವಾಗಿ ಜಾರಿಯಾಗಿಲ್ಲ. ಇಲ್ಲಿ ಇದಲ್ಲದೆ ಸುಮಾರು 225 ಎಕರೆಯಷ್ಟು ಸರ್ಕಾರಿ ಭೂಮಿಯನ್ನು ದಿನಕರನ್ ಅಕ್ರಮವಾಗಿ ಕಬಳಿಸಿದ್ದಾರೆ. ಕೆರೆಬಯಲು, ಗೋಮಾಳ, ಸರ್ಕಾರಿ ಜಮೀನು ಹೀಗೆ ವಿವಿಧ ಬಗೆಯ ಜಮೀನನ್ನು ಅಕ್ರಮವಾಗಿ ಕಬ್ಜ ಮಾಡಲಾಗಿದೆ. ಇಲ್ಲಿದ್ದ ಸ್ಥಳೀಯರನ್ನು ಓಡಿಸಲಾಗಿದೆ. ಈ ಪ್ರದೇಶದಲ್ಲಿ ರಸ್ತೆಗೂ ದಿನಕರನ್ ಹೆಸರಿಡಲಾಗಿದೆ. ಅಕ್ರಮವಾಗಿ ಈ ಜಮೀನಿಗೆ ಬೇಲಿ ಹಾಕಿಕೊಳ್ಳಲಾಗಿದೆ. ಈ ಅಕ್ರಮ ನಡೆಸುವವರಿಗೆ ಇಲ್ಲಿ ಬೇರೆಯೇ ಕಾನೂನು ಜಾರಿಯಲ್ಲಿದೆ.

ದೇಶದ ಸುಪ್ರಿಂ ಕೋರ್ಟ್ ಈ ಕುರಿತು ಜಿಲ್ಲಾಧಿಕಾರಿಗಳಿಂದ ವರದಿ ಕೇಳಿತ್ತು. ಜಿಲ್ಲಾಧಿಕಾರಿ ವರದಿ ಕೊಟ್ಟಿದ್ದಾರೆ. ಆ ವರದಿಯಲ್ಲಿ ಅಕ್ರಮ ಭೂಕಬಳಿಕೆಯನ್ನು ಗುರುತಿಸಲಾಗಿದೆ. ಆದರೆ ಆ ವರದಿ ಆಧರಿಸಿ ಕ್ರಮ ಕೈಗೊಳ್ಳಲು ರಾಜ್ಯದ ಡಿಎಂಕೆ ಸರ್ಕಾರ ತಯಾರಿಲ್ಲ. ಸಾರ್ವಜನಿಕರಿಗೆ ತಪ್ಪು ಮಾಹಿತಿ ಕೊಟ್ಟು ಮೋಸ ಮಾಡುತ್ತಿದೆ. ದಲಿತರು, ದಲಿತೇತರರು ಎಂಬ ಪ್ರಶ್ನೆಯನ್ನು ಈ ಪ್ರಕರಣದಲ್ಲಿ ಬಳಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಸಿಪಿಐ(ಎಂ) ಪಕ್ಷ ದಲಿತರ ಹಕ್ಕುಗಳಿಗಾಗಿ ತಮಿಳುನಾಡಿನಲ್ಲಿ ತೀವ್ರ ಆಂದೋಲನವನ್ನೇ ಹಮ್ಮಿಕೊಂಡಿದೆ. ರಾಜ್ಯದಲ್ಲಿ ಸುಮಾರು 7000 ಹಳ್ಳಿಗಳಲ್ಲಿ ಈಗಲೂ ಅಸ್ಪೃಶ್ಯತೆ ಆಚರಣೆಯಲ್ಲಿದೆ ಎಂದು ಗುರುತಿಸಲಾಗಿದೆ. ಈ ಮಾಹಿತಿಯನ್ನು ರಾಜ್ಯದ ವಿಧಾನಸಭೆಯಲ್ಲಿ ಸ್ವತ: ಕರಿಣಾನಿಧಿಯವರೇ ಒಪ್ಪಿದ್ದಾರೆ.

ದಲಿತರು ಚಪ್ಪಲಿ ಹಾಕುವಂತಿಲ್ಲ, ಸೈಕಲ್ ಬಳಸುವಂತಿಲ್ಲ, ಕೆರೆ ಹಾಗೂ ಕುಡಿಯುವ ನೀರಿನ ಟ್ಯಾಂಕ್‌ಗಳಿಂದ ನೀರು ತೆಗೆದುಕೊಳ್ಳುವಂತಿಲ್ಲ. ದೇವಸ್ಥಾನಕ್ಕೆ ಪ್ರವೇಶವಿಲ್ಲ. ಇಂತಹ ನಿರ್ಬಂಧಗಳ ವಿರುದ್ಧ ಊತ್ತುಪುರಂ ಸೇರಿದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ಚಳುವಳಿ ನಡೆಸಲಾಗುತ್ತಿದೆ. ಇತ್ತೀಚಿಗೆ ಚಿಟ್ಟಿಪುಲಂನಲ್ಲಿ ನಡೆದ ದೇವಸ್ಥಾನ ಪ್ರವೇಶ ಚಳುವಳಿಯಲ್ಲಿ ಎಐಕೆಎಸ್ ನ ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಸೇರಿದಂತೆ 105 ಜನ ಚಳುವಳಿಕಾರರು ಜೈಲುವಾಸ ಅನುಭವಿಸಿ ಇತ್ತೀಚಿಗೆ ತಾನೆ ಬಿಡುಗಡೆಯಾಗಿದ್ದಾರೆ. ದಿನಕರನ್ ಪ್ರಕರಣದಲ್ಲಿ ಕ್ರಮ ಕೈಗೊಂಡರೆ, ಇದರ ಹಿಂದೆಯೇ, ನೂರಾರು ಕೋಟಿ ರೂಪಾಯಿಗಳ (ಸ್ಪೆಕ್ಟ್ರಂ) ಹಗರಣದ ರೂವಾರಿ ಡಿಎಂಕೆಯ ಡಿ.ರಾಜಾ ಅವರ ಮೇಲೆ ಕ್ರಮ ವಹಿಸಬೇಕಾಗಿ ಬರುತ್ತದೆಂಬುದು ಡಿಎಂಕೆಯ ಭಯವಾಗಿದೆ.


ಜನಶಕ್ತಿ : ಈ ಹೋರಾಟದ ಪ್ರಮುಖ ಬೇಡಿಕೆ, ಗುರಿ ಏನು? ಸರ್ಕಾರದ ಪ್ರತಿಕ್ರಿಯೆ ಏನು?

ವರದರಾಜನ್ : ಎಐಕೆಎಸ್ ಮತ್ತು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘಗಳು ಈಗಾಗಲೇ ಬಹಿರಂಗವಾಗಿ ಘೋಷಿಸಿವೆ. ಅಕ್ರಮವಾಗಿ ಕಬಳಿಸಿರುವ ಭೂಮಿಯನ್ನು ದಲಿತರು, ಭೂಹೀನ ಕೂಲಿಕಾರರಿಗೆ ವಿತರಿಸಬೇಕು. ಈ ವಿಷಯದಲ್ಲಿ ಕರುಣಾ ನಿಧಿ ಭೂಮಾಲಿಕ ದಲಿತರ ಪರ ಇದ್ದಾರೆ. ನಾವು ಭೂಹೀನ ದಲಿತರ ಪರ ಇದ್ದೇವೆ.

ನವೆಂಬರ್ 9, 2009 ರಂದು ಅಕ್ರಮ ಭೂಮಿ ಕಬಳಿಕೆ ವಿರುದ್ಧದ ಭೂಮಿ ಕಬ್ಜಾ ಹೋರಾಟದಲ್ಲಿ ಸ್ವತ: ನಾನು ಪಾಲ್ಗೊಂಡಿದ್ದೆ. ಪ್ರತಿಭಟನೆಯ ಸ್ಥಳದಲ್ಲಿ 6000 ಜನ ಪೊಲೀಸರನ್ನು ನಿಯೋಜಿಸಲಾಗಿತ್ತು.



ಒಬ್ಬರು ಐ.ಜಿ. ಮೂವರು ಡಿಐಜಿಗಳು, ಹಲವಾರು ಜನ ಹಿರಿಯ ಪೊಲೀಸ್ ಅಧಿಕಾರಿಗಳನ್ನು ನಿಯೋಜಿಸಲಾಗಿತ್ತು. ಕಾವೇರಿ ರಾಜಪುರಂನ ಪ್ರತಿ ಮನೆಗೂ ಒಬ್ಬರು ಅಥವಾ ಇಬ್ಬರು ಪೊಲೀಸರನ್ನು ಕಾವಲು ಹಾಕಲಾಗಿತ್ತು. ಕುಟುಂಬದ ಸದಸ್ಯರು ಹೊರಗೆ ಬಯಲಿಗೆ (ಮಲಮೂತ್ರ ವಿಸರ್ಜನೆಗೆ) ಹೋಗುತ್ತೇನೆಂದರೂ ಜೊತೆಗೆ ನಾವು ಬರುತ್ತೇವೆ ಎಂದು ಪೊಲೀಸರು ಗಂಟುಬಿದ್ದಿದ್ದರು. ಒಟ್ಟು



ಪ್ರಕರಣದಲ್ಲಿ ನೂರಾರು ಎಕರೆ ಭೂಮಿಯ ಪ್ರಶ್ನೆಯಿದೆ. ಆದರೆ ಪ್ರತಿಭಟನೆಗೆ ಕೆಲವೇ ದಿನ ಮೊದಲು ನವೆಂಬರ್ 7 ರಂದು ಕೆಲವು ಸ್ಥಳೀಯರಾದ ಹಿಂದುಳಿದ ಸಮುದಾಯದ ಜನರು ಪಿ.ಡಿ. ದಿನಕರನ್ ಪರವಾಗಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿ ಸಂಬಂಧ ನ್ಯಾಯಾಲಯ ಸರ್ಕಾರಕ್ಕೆ ‘ಇರುವ ಪರಿಸ್ಥಿತಿಯನ್ನು ಹಾಗೇ ಕಾಪಾಡಿ’ಎಂಬ ಅಂದರೆ ‘ಮೈಂಟೇನ್ ಸ್ಟೇಟಸ್ಕೋ’ ಎಂಬ ಆದೇಶ ನೀಡಿದೆ. ಈ ಆದೇಶ ಅನ್ವಯವಾಗುವುದು ಕೇವಲ 27 ಎಕರೆ ವಿಚಾರಕ್ಕೆ ಮಾತ್ರ. ಆದರೆ ಸರ್ಕಾರ ಅದನ್ನೇ ಬಳಸಿಕೊಂಡು ಇಡೀ ಪ್ರಧೇಶದಲ್ಲಿ ಪೊಲೀಸ್ ರಾಜ್ ನಿರ್ಮಿಸಿತು.

ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ) ಮತ್ತೊಂದು ಇತಿಹಾಸ ನಿರ್ಮಿಸಿದರು. ಅವರು ಚಳುವಳಿಗೆ ಮುಂಚೆ ಪ್ರತಿಭಟನಾಕಾರರನ್ನು ಮಾತುಕತೆಗೆ ಕರೆದರು. ಮುಖಂಡರಾದ ಷಣ್ಮುಗಂ, ತುಳಸೀದಾಸ್, ಇತರರು ಮಾತುಕತೆಗೆ ತೆರಳಿದರು. ಸಂಪೂರ್ಣ ಶಾಂತಿಯುತ ಮಾತುಕತೆಯಲ್ಲಿ ಪಾಲ್ಗೊಂಡ ಈ ಮುಖಂಡರನ್ನು ಕೊನೆಯಲ್ಲಿ ಬಂಧಿಸಲಾಯಿತು!! ತೀವ್ರ ಪ್ರತಿಭಟನೆಯ ನಂತರ ಅವರನ್ನು ಮರುದಿನ ಬೆಳಿಗ್ಗೆ ಬಿಡು
ಮಾಡಲಾಯಿತು. ಪ್ರತಿಭಟನೆ ಯಲ್ಲಿ ಪಾಲ್ಗೊ
ಅವರನ್ನು ಮತ್ತೆ ಬಂಧಿಸಲಾಯಿತು. ಇಷ್ಟೇ
ದಬ್ಬಾಳಿಕೆಯ ನಡುವೆಯೂ ಸುಮಾರು 10
ಜನರು ಪ್ರತಿ ಭಟನೆಯಲ್ಲಿ ಪಾಲ್ಗೊಂಡಿದ್ದ
ಕಾವೇರಿ ರಾಜಪುರಂ ಪೊಲೀಸ್ ಕೋಟೆಯ
ಬೇಧಿಸಿ ತಪ್ಪಿಸಿಕೊಂಡು ಬಂದ ಸ್ಥಳೀಯ
ಹಾಗೂ ಸುತ್ತಮುತ್ತಲ ಹಳ್ಳಿಗಳ ಜನ
ಪಾಲ್ಗೊಂಡಿದ್ದರು. ಪ್ರತಿಭಟನೆಗೆ 2 ದ
ಮೊದಲೇ ತಾಲ್ಲೂಕಿನಾದ್ಯಂತ 144 ಸೆಕ್ಷ
ಪ್ರಕಾರ ನಿಷೇದಾಜ್ಞೆ ಜಾರಿ ಮಾಡಿದ್ದರೂ ಕೂ
ಪ್ರತಿಭಟನೆಯನ್ನು ನಿಲ್ಲಿಸಲು ಸರ್ಕಾರಕ್ಕೆ ಆಗಲಿ
ಪ್ರತಿಭಟನೆಯಲ್ಲಿ ಮಹಿಳೆಯರು, ಪುರುಷ
ವಿದ್ಯಾರ್ಥಿಗಳು ವಿವಿಧ ವಿಭಾಗದ ಜನ
ಪಾಲ್ಗೊಂಡಿದ್ದರು.

ನವೆಂಬರ್ 9ರಂದು ತಿರುವಳ್ಳವರ್‌ನಿಂ
ನಡಿಗೆ ಆರಂಭವಾಯಿತು. 2000 ಕ್ಕಿಂತ ಹೆಚ
ಪೊಲೀಸರು ಸ್ವತ: ಡಿ.ಐ.ಜಿ. ನೇತೃತ್ವದ
ಚಳುವಳಿಕಾರರನ್ನು ತಡೆದರು. ಪ್ರತಿಭಟನಾಕಾರ
ಬಂಧನಕ್ಕೊಳಗಾಗಲು ನಿರಾಕರಿಸಿ ಕಾಮರಾ
ಪ್ರತಿಮೆ ಮುಂದೆ ಧರಣ ಕುಳಿತರು. ಎರಡೂವ
ಗಂಟೆಗಳ ತಿಕ್ಕಾಟ ನಡೆಯಿತು. ನಂತರ ಆರ್.ಡಿ
ಬಂದರು. ಪಿಕೆಟಿಂಗ್ ನಡೆಸಲಾಯಿತು. 4
ಜನರನ್ನು ಬಂಧಿಸಿ ಕರೆದೊಯ್ಯಲಾಯಿತು.
ಪೊಲೀಸ್‌ರಾಜ್ ವಿರುದ್ಧ ಬೇರೆ ಬೇರೆ ಪಕ್ಷಗ
ಸಹ ಪ್ರತಿಭಟನೆ ನಡೆಸಿದವು. ಪ್ರತಿಭಟನಾಕಾರರ
10 ರ ಸಂಜೆ ಬಿಡುಗಡೆ ಮಾಡಲಾಯಿತು.

ಜನಶಕ್ತಿ : ಚಳುವಳಿಯ ಮುಂದಿನ ಹಂತ ಏನು

ವರದರಾಜನ್ : ಅಕ್ರಮವಾಗಿ ಕಬಳಿಸಲಾ
ಭೂಮಿಯ ಹೆಚ್ಚುವರಿ ಭೂಮಿ ಭೂಹೀನ ದಲಿತ
ಹಂಚಿಕೆಯಾಗಬೇಕೆಂದು ಒತ್ತಾಯಿಸಿ ಚಳುವ
ಮುಂದುವರೆಸಲಾಗುವುದು. ಡಿಸೆಂಬರ್ ತಿಂಗಳಿನ
ಭೂಮಿ ಕಬ್ಜಾ ಅಂದರೆ ಭೂ ಆಕ್ರಮಣ ಚಳುವ
ನಡೆಸಲಾಗುವುದು.

ಸಂದರ್ಶಿಸಿದವರು : **ಆರ್. ರಾಮಕೃ**

ಸಂಪಾದಕೀಯ

ನ್ಯಾಯಾಂಗದ್ದೇ ಪ್ರಧಾನ ಹೊಣೆ

ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಪಿ.ಡಿ. ದಿನಕರನ್‌ರವರು ಕಲಾಪದಲ್ಲಿ ಭಾಗವಹಿಸುವುದನ್ನು ವಿರೋಧಿಸಿ ನ್ಯಾಯಾಲಯ ಕಲಾಪ ಬಹಿಷ್ಕರಿಸಿದ್ದ ವಕೀಲರು ಸೋಮವಾರ ನಡೆದ ಘಟನೆಗಳು ಆತಂಕಕಾರಿಯಾದುದು. ಸುಪ್ರಿಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕದ ಪ್ರಕ್ರಿಯೆಯಲ್ಲಿರುವ ನ್ಯಾಯಮೂರ್ತಿ ದಿನಕರನ್‌ರವರ ಮೇಲಿನ ಆರೋಪಗಳು ತನಿಖೆಯಾಗಲೇಬೇಕು. ಸತ್ಯ ಹೊರಬಂದು ಅಗತ್ಯ ಕ್ರಮ ವಹಿಸಬೇಕೆಂಬುದು ಸರಿಯಾದದ್ದೇ. ಆದರೆ ಇದಕ್ಕೊಂದು ವಿಧಾನವಿದೆ. ತನ್ನದೇ ವ್ಯವಸ್ಥೆ ಇದೆ. ಆದರಲ್ಲೂ ನ್ಯಾಯಾಂಗದಲ್ಲಿ ಕಾರ್ಯ ನಿರ್ವಹಿಸುವವರು ಅದನ್ನು ಗಮನಿಸಬೇಕಾಗುತ್ತದೆ.

ಅಂದು ನಡೆದದ್ದು ಕೇವಲ ಪ್ರತಿಭಟನೆಯಲ್ಲ. ನ್ಯಾಯಮೂರ್ತಿಗಳ ಮೇಲೆ ಧಾಳಿಯ ಯತ್ನವೂ ನಡೆದಿದೆ. ಪೀಠದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನ್ಯಾಯಮೂರ್ತಿ ವಿ.ಗೋಪಾಲಗೌಡರ ಹಾಗೂ ನ್ಯಾ.ನಾಗರತ್ನರವರ ಮೇಲೆ ಕಾನೂನು ಪುಸ್ತಕಗಳನ್ನು ಎಸೆದದ್ದಲ್ಲದೆ, ದೈಹಿಕ ಹಲ್ಲೆಗೂ ಯತ್ನಿಸಿದ ವರದಿಗಳಿವೆ. ಅವರನ್ನು ಅವಾಚ್ಯವಾಗಿ ...ದಿಸಲಾಗಿದೆ. ರಾಷ್ಟ್ರಗೀತೆಯನ್ನು ಮನಸ್ಸಿಗೆ ಬಂದಂತೆ ಬಳಸಲಾಗಿದೆ. ಮಾಧ್ಯಮದವರನ್ನೂ ಹೊಡೆಯಲಾಗಿದೆ. ಇದು ಪ್ರಜಾಸತ್ತಾತ್ಮಕ ಮೌಲ್ಯ, ಸಂವಿಧಾನವನ್ನು ರಕ್ಷಿಸಬೇಕಾದವರು ಮಾಡುವ ಕೃತ್ಯವಂತೂ ಖಂಡಿತ ಅಲ್ಲ. ಪ್ರಜಾಪ್ರಭುತ್ವದ ಹಕ್ಕುಗಳನ್ನು ರಕ್ಷಿಸಬೇಕಾದ ವಕೀಲರ ಸಂಘಟನೆಯಿಂದ ಇಂತಹದ್ದನ್ನು ಯಾರೂ ನಿರೀಕ್ಷಿಸುವುದಿಲ್ಲ.

ಈ ಬೇಡಿಕೆ, ಪ್ರತಿಭಟನೆ ಕುರಿತಾದಂತೆ ಭಿನ್ನ ಅಭಿಪ್ರಾಯಗಳಿವೆ. ಸೋಮವಾರದ ಪ್ರತಿಭಟನೆಯು ಆ ಸ್ವರೂಪಕ್ಕೆ ತಿರುಗುವಲ್ಲಿ ವ್ಯಕ್ತಿಗತ ಅಂಶಗಳ ಪರಿಗಣನೆಯೂ ಇರುವುದು ವರದಿಯಾಗಿದೆ. ಇದು ವಸ್ತುನಿಷ್ಠ ನಿಲುವು ತಾಳಲು ಅಡ್ಡಿಯಾದ ಅಂಶ. ಇತ್ತೀಚಿಗೆ ಕೆಲವು ಕಡೆಗಳಲ್ಲಿ 'ವಕೀಲರ ಸಂಘ' ವಕೀಲರು ತೆಗೆದುಕೊಳ್ಳುವ ನಿಲುವುಗಳೂ ಸಹ ನಾಗರೀಕರ ಹಕ್ಕು ಸಂರಕ್ಷಣೆಯ ದಿಕ್ಕಿನಲ್ಲಿ ಇರದಿರುವುದು ಕಂಡಿದೆ. ಹಿಂದೆ ಹಿರಿಯ ಕಮ್ಯೂನಿಸ್ಟ್ ನಾಯಕ, ರೈತ ಮುಖಂಡ ಕಾಂ.ಭೀಮಶಿ ಕಲಾದಗಿಯವರ ಮೇಲಿನ ಮೊಕದ್ದಮೆ ಒಂದರಲ್ಲಿ ಅವರ ಪರವಾಗಿ ಯಾರೂ ವಕಾಲತ್ತು ವಹಿಸಬಾರದೆಂದು ವಿಜಾಪುರ ವಕೀಲರ ಸಂಘ ನಿರ್ಧರಿಸಿತ್ತು. ಇದು ಸಂವಿಧಾನಕ್ಕೆ ವಿರುದ್ಧವಾದುದು. ಈ ಸಂಘದ ಪ್ರಭಾವೀ ಮುಖಂಡ ವಕೀಲರೊಬ್ಬರ ಅಕ್ರಮಗಳಿಂದ ನೊಂದ ಮಹಿಳೆಗಾದ ಅನ್ಯಾಯದ ವಿರುದ್ಧ ಭೀಮಶಿ ಮತ್ತು ಸಂಗಾತಿಗಳು ಹೋರಾಟ ...ಡೆಸಿದ್ದರು. ಇದಕ್ಕೆ ಸಂಬಂಧವಿದ್ದ ವಕೀಲರೊಬ್ಬರ ಸೇಡಿನಿಂದ ಅಂತಹ ತೀರ್ಮಾನ ಹೊರಬಂದಿದ್ದರಲ್ಲಿ ಅನುಮಾನವಿರಲಿಲ್ಲ. ಹಾಗೇ ಹುಬ್ಬಳ್ಳಿ, ದಕ್ಷಿಣ ಕನ್ನಡ, ಮುಂತಾದೆಡೆ ಶಂಕಿತ ಮುಸ್ಲಿಂ ಉಗ್ರಗಾಮಿ ಎಂದು ಪೂರ್ವ ನಿರ್ಧರಿಸಿಕೊಂಡು ಸಂಘ ಪರಿವಾರದ ಮುತುವರ್ಜಿಯಿಂದ ಯಾರೂ ವಕಾಲತ್ತು ವಹಿಸಬಾರದೆಂದು ಬಹಿಷ್ಕಾರ ಹಾಕಿದ ಘಟನೆಗಳೂ ಇವೆ. ಇಂತಹ ಒಟ್ಟು ಸಂದರ್ಭದಲ್ಲಿ ಮುಖ್ಯವಾಗಿ ತೆಗೆದುಕೊಳ್ಳಬೇಕಾದ ನಿರ್ಧಾರ ಕ್ರಮಗಳು ಸತ್ಯಹೊರಬರಲು ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಚ್ಯುತಿಬಾರದಂತೆ ವಸ್ತುನಿಷ್ಠ ನಿರ್ಣಯದ ಅಗತ್ಯವಿದೆ. ಇಲ್ಲದೆ ಹೋದಲ್ಲಿ ಹೈಕೋರ್ಟ್ ವಕೀಲರ ದಾಂಧಲೆ ವರ್ತನೆಗಳು ಆರೋಪಿತ ನ್ಯಾಯವಾದಿ ದಿನಕರನ್ನರಿಗೆ ಬಲ ತಂದುಕೊಡುತ್ತವೆ ಎಂಬುದನ್ನು ನೆನಪಿಡಬೇಕು.

ಇಲ್ಲೊಂದು ಪ್ರಮುಖವಾದ ಅಂಶವಿದೆ. ಇಷ್ಟೆಲ್ಲಾ ಅವಾಂತರಗಳು ಸೃಷ್ಟಿಯಾಗುವುದರಲ್ಲಿ ಇಡೀ ನ್ಯಾಯಾಂಗವು ಮುಖ್ಯ ಹೊಣೆ ಹೊರಬೇಕಾಗಿದೆ. ಯಾಕೆಂದರೆ ಮುಖ್ಯ ನ್ಯಾಯಮೂರ್ತಿ ದಿನಕರನ್‌ರವರ ಮೇಲೆ ಆರೋಪಗಳು ಬಂದ ನಂತರ ವಿಚಾರಣೆ ನಡೆಸಿ ಕ್ರಮಗಳನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕಿತ್ತು. ವಿಚಾರಣೆ ಪ್ರಕ್ರಿಯೆ ಎಂಬುದು ಕಾಲಹರಣದ ಸ್ವರೂಪವನ್ನು ಪಡೆಯುತ್ತಿರುವಂತೆ ಭಾಸವಾಗುತ್ತಿದೆ. ಮೇಲ್ನೋಟಕ್ಕೆ ಆರೋಪಗಳಲ್ಲಿ ಸತ್ವ ಇದೆಯೆಂದು ಅವಲೋಕಿಸಿರುವ ರಾಷ್ಟ್ರ ನ್ಯಾಯಾಂಗವು, ಕನಿಷ್ಠ ನ್ಯಾ. ದಿನಕರನ್‌ರವರಿಗೆ ಒಂದು ಸೂಚನೆಯನ್ನು ನೀಡಬಹುದಿತ್ತು. ಹಾಗೆಯೇ ಅತ್ಯಂತ ಪ್ರಮುಖ ಆರೋಪ ಎದುರಿಸುತ್ತಿರುವ ನ್ಯಾ. ದಿನಕರನ್‌ರವರಾಗಲೀ ಸೂಕ್ಷ್ಮ ಸಂವೇದನೆಯಿಂದ ಆರೋಪ ಮುಕ್ತರಾಗುವವರೆಗೂ ಸ್ವಯಂ ದೂರ ಉಳಿಯುವ ನಿರ್ಧಾರ ಕೈಗೊಳ್ಳಬಹುದಿತ್ತು. ಅಂತಹ ಬೇಡಿಕೆ ಬರುವ ಮೊದಲೇ ಅಥವಾ ನಂತರವೂ ಸ್ಪಂದಿಸಬಹುದಿತ್ತು. ಹಾಗಾಗಲಿಲ್ಲ. ರಾಜ್ಯದ


ಪುಟ 4 ಕ್ಕೆ

ಗಣಿ ಮಾಫಿಯಾ ಬ್ಲಾಕ್‌ಮೇಲ್ ಅಡ್ಡಬಿದ್ದ ಬಿಜೆಪಿ!

ಕಳೆದೆರಡು ವಾರಗಳಲ್ಲಿ ತಾರಕಕ್ಕೇರಿದ್ದ ಬಿಜೆಪಿಯೊಳಗಿನ ಕಿತ್ತಾಟದ ಬಿಸಿ ಇಳಿದಿದೆ. 'ಬಾಯಿಗೆ ಬಾಯಿ, ಕೈಗೆ ಕೈ, ಎಂದವರು ಈಗ 'ಭಾಯಿ ಭಾಯಿ' ಎಂದ್ಹೇಳಿ ಬಾಯಿಗೆ ಸಿಹಿ ತುರುಕಿದ್ದಾರೆ. ಈಗಿನ ರಾಜೀ ಸಂಧಾನದ ಒಪ್ಪಂದಗಳು, ನಂತರದ ಬಿಸಿಬಿಸಿ-ಮುಸಿಮುಸಿ ಬೆಳವಣಿಗೆಗಳನ್ನು ಗಮನಿಸಿದರೆ ಇದು ತಾತ್ಕಾಲಿಕ ಶಮನ.

ಇಷ್ಟಾರ್ಥ ಸಿದ್ಧಿ ರಸ್ತು!

ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಮುಂದುವರಿಯಲು 'ಜೀವದಾನ' ಪಡೆದಿದ್ದಾರೆ. ರೆಡ್ಡಿ ಬಣ ಗೆದ್ದ ಮದದಲ್ಲಿ ಮೀಸೆ ತಿರುವುತ್ತಿದೆ. ಇಲ್ಲಿ ಮಣ್ಣು ಪಾಲಾದದ್ದು ರಾಜ್ಯದ ಹಿತ, ಜನತೆಯ ಹಿತಾಸಕ್ತಿ, ಘನತೆ. ವಿವಿಧ ಕಾರಣಗಳಿಗಾಗಿ ಅತೃಪ್ತಿಯಿಂದಿದ್ದ ಶಾಸಕರನ್ನು ರೆಡ್ಡಿಗಳು ಬಳಸಿಕೊಂಡರು. ಕದನ ಘೋಷಿಸಿ 'ಕಂಸ ವಧೆ'ಯ ಕಹಳೆ ಊದಿದ್ದ ಗಣಿಗಳ್ಳರ ಬ್ಲಾಕ್‌ಮೇಲ್‌ಗೆ ಮಣಿ ಹಾಕಿದ್ದು ಬಿಜೆಪಿಯ ಹೈಕಮಾಂಡ್. ಮುಖ್ಯಮಂತ್ರಿ ಸ್ಥಾನ ಬದಲಾವಣೆಯನ್ನು ಕೈಬಿಟ್ಟು, ಉಳಿದಂತೆ ರೆಡ್ಡಿ ಬಣದ ಎಲ್ಲಾ ಹೇಳಿಕೆಗಳಿಗೆ 'ಇಷ್ಟಾರ್ಥ ಸಿದ್ಧಿರಸ್ತು' ಎಂದು ಹರಸಿ ಬೀಳ್ಕೊಟ್ಟಿದೆ. ಹೈಕಮಾಂಡ್ ಆದರಂತೆ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದಶಿ ವಿ.ಪಿ.ಬಳಿಗಾರರ ಎತ್ತಂಗಡಿ ಆಗಿದೆ. ವರ್ಗಾವಣೆಗೊಂಡಿದ್ದ ರೆಡ್ಡಿ ನಿಷ್ಠ ಅಧಿಕಾರಿಗಳು ಗದಗ್, ಬಳ್ಳಾರಿಗಳಲ್ಲಿ ಪುನರ್‌ಸ್ಥಾಪಿತ ಗೊಂಡಿದ್ದಾರೆ. ಇನ್ನು ಹಲವರ ನೇಮಕಗಳೂ ಆಗಲಿವೆ. ಗಣಿಲಾರಿಗೆ ವಿಧಿಸಿದ್ದ ರೂ.1,000 ಶುಲ್ಕ ಹಿಂತೆಗೆಯಲಾಗಿದೆ. ಯಡಿಯೂರಪ್ಪನವರ ಆತ್ಮೀಯೆ ಶೋಭಾ ಕರಂದ್ಲಾಜೆ ರಾಜೀನಾಮೆ ನೀಡಿ ಸಚಿವೆ ಸ್ಥಾನ ಖಾಲಿ ಮಾಡಿದ್ದಾರೆ. ಸ್ಪೀಕರ್ ಜಗದೀಶ ಶೆಟ್ಟರ್ ಸ್ಥಾನಕ್ಕೆ ರಾಜೀನಾಮೆ ನೀಡಿ (16 ರಂದು) ಸಚಿವರಾಗಲು ಸಿದ್ಧತೆ ನಡೆದಿವೆ. ಒಟ್ಟು ಆರು ಜನ ರೆಡ್ಡಿ ಬಣದೊಂದಿಗೆ ಇದ್ದ ಹಾಗೂ ಅವರು ಸೂಚಿಸಿದವರಿಗೆ ಸಚಿವ ಸ್ಥಾನ ಕೊಡಬೇಕಿದೆ. ಅಂದರೆ ಕೇಳಿದ ಖಾತೆಗಳು ಹಾಗೂ ಜಿಲ್ಲಾ ಉಸ್ತುವಾರಿಗಳ ಪುನರ್ ಹಂಚಿಕೆ ಆಗಲಿದೆ! ಮುಖ್ಯವಾಗಿ ಈ ಸರ್ಕಾರವನ್ನು ನಿಯಂತ್ರಿಸುವ, ನಿಗಾವಹಿಸುವುದಕ್ಕೆ ಹೈಕಮಾಂಡ್ ಹಾಗೂ ಆರ್.ಎಸ್.ಎಸ್ ಪ್ರಾಧಾನ್ಯತೆಯ ಸಮನ್ವಯ ಸಮಿತಿಯೊಂದು ರಚನೆಯಾಗಿದೆ.





ಹೈಕಮಾಂಡ್ ಮಿಲಾಖತ್


ಇವು ಹೊರ ಆವರಣದ ಬೇಡಿಕೆಗಳು, ಬದಲಾವಣೆಗಳು, ಪ್ರಧಾನವಾಗಿ ಅಕ್ರಮ ಗಣಿಗಾರಿಕೆ, ಭೂಗಳ್ಳತನದ ತಮ್ಮ ಲೂಟಿ ದಂಧೆ ನಿರಾತಂಕವಾಗಿ ಸಾಗಲು ಮತ್ತು ಅದು ವಿಸ್ತರಣೆಗೊಳ್ಳಲು ಇಡೀ ಸರ್ಕಾರವನ್ನೇ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಹಂಚಿಕೆಯೇ ಗಣಿ ಹಾಗೂ ಭೂ ಮಾಫಿಯಾಗಳ ಉದ್ದೇಶ. ಇದು ಸಂಘ ಪರಿವಾರಕ್ಕೂ ಬಿಜೆಪಿಯ ಹೈಕಮಾಂಡ್‌ಗೂ ಗೊತ್ತಿಲ್ಲದ ಸಂಗತಿಯೇನಲ್ಲ. ಬಿಜೆಪಿ ಸರ್ಕಾರ ಗಣಿ ಹಾಗೂ ಭೂಮಾಫಿಯಾಗಳ ಸರ್ಕಾರವೆಂಬುದು ಮತ್ತೆ, ಮತ್ತೆ ಸಾಬೀತಾಗುತ್ತಾ ಬಂದಿದೆ. ಈಗ ಮತ್ತೆ ಅದು ಜಗಜ್ಜಾಹೀರಾಗಿದೆ. ದೇಶಭಕ್ತಿ, ದೇಶೋದ್ಧಾರ, ಅಭಿವೃದ್ಧಿಯಂತಹ ಅಣಿ ಮುತ್ತು ಉದುರಿಸುವ ಆರ್.ಎಸ್.ಎಸ್.ಗಾಗಲೀ ಬಿಜೆಪಿಗಾಗಲೀ ಈ ಮಾಫಿಯಾಗಳು ಅಸಹನೀಯವಲ್ಲ, ಅಸಹ್ಯವೂ ಇಲ್ಲ. ಮಾತ್ರವಲ್ಲ ಹೈಕಮಾಂಡ್‌ಗೂ ಈ ಮಾಫಿಯಾಗಳೊಂದಿಗೆ ನಂಟು ಇದೆ. ಹಣಕಾಸು, ವ್ಯವಹಾರಗಳಂತಹ ಭ್ರಷ್ಟ, ಅನೈತಿಕ ಸಂಬಂಧಗಳಿವೆ ಮತ್ತು ಅದು ಪ್ರತಿಪಾದಿಸುವ 'ಹಿಂದುತ್ವ'ಕ್ಕೆ ಸರಿಹೊಂದುತ್ತದೆ.

ಒಂದು ವೇಳೆ ಗಣಿ ಮಾಫಿಯಾಗಳ ಈ 'ರಾಜಕೀಯ'ದ ಬಗ್ಗೆ ವಿರೋಧವಿದ್ದರೆ ಬಿಜೆಪಿ ಹೈಕಮಾಂಡ್ ಒಳಗೊಂಡು ಸಂಘ ಪರಿವಾರವೂ ಸ್ಪಷ್ಟವಾಗಿ ಅದನ್ನು ವಿರೋಧಿಸುತ್ತಿತ್ತು. ಬಹುಮತವಿಲ್ಲದೇ ಹೋದರೆ ಪುನ: ಜನಾದೇಶವನ್ನು ಬಯಸುತ್ತಿತ್ತು. ಕನಿಷ್ಟ ಮುಖ್ಯಮಂತ್ರಿಗಳ ಕಾರ್ಯವೈಖರಿ ಬದಲಾಯಿಸಿಕೊಳ್ಳಲು ಹೇಳಿ ಬೇಸತ್ತಿದ್ದ ಅತೃಪ್ತ ಶಾಸಕರನ್ನು ಸರಿದಾರಿಗೆ ತರಲು ಬಿಗಿಯಾದ ಸ್ಪಷ್ಟ ನಿರ್ದೇಶನ ನೀಡುತ್ತಿತ್ತು. ಇಲ್ಲವೇ ಚುನಾವಣೆ ಎದುರಿಸಲು ಹೇಳಬಹುದಿತ್ತು. ಬಹುತೇಕ ಯಾವ ಶಾಸಕರನ್ನೂ 5 ವರುಷಗಳ ಅವಧಿಗೆ ಮುನ್ನಾ ಚುನಾವಣೆಗೆ ಹೋಗುವ ಸ್ಥಿತಿಯಲ್ಲಿ ಇಲ್ಲದಿರುವುದನ್ನೇ ಬಳಸಬಹುದಿತ್ತು. ಆದರೆ ಹಾಗೆ ಮಾಡದ ಹೈಕಮಾಂಡ್ ಗಣಿ, ಭೂಮಾಫಿಯಾಗಳ ಕುಕೃತ್ಯ, ಬ್ಲಾಕ್‌ಮೇಲ್ ರಾಜಕಾರಣಕ್ಕೆ ಬೆಂಬಲವಾಗಿ ನಿಂತಿದೆ.

ಪ್ರಜಾಪ್ರಭುತ್ವದ ಮೇಲೆ ಹಲ್ಲೆ

ಬಿಜೆಪಿಯ ಇಂತಹ ಕ್ರಮಗಳು ರಾಜ್ಯದ ಜನತೆಯ ಮೇಲೆ ಎಂತಹ ಪರಿಣಾಮ ಬೀರುತ್ತವೆ. ಸ್ವಹಿತ ಕಾಯಲು ಅಧಿಕಾರಿಗಳ ಬೇಕಾಬಿಟ್ಟಿ ರಾಜಕೀಯ ವರ್ಗಾವಣೆ, ಕೆಲಸದಲ್ಲಿ ವಿಪರೀತ ಮಧ್ಯಪ್ರವೇಶ, ಬದಲಾಗುವ ಆದೇಶಗಳು, ಅರ್ಥಹೀನ ನಿಯಂತ್ರಣಗಳು ಆಡಳಿತ ಯಂತ್ರದ ಆತ್ಮಸ್ಥೈರ್ಯವನ್ನೇ ಕಳೆಯುವಂತೆ ಮಾಡಿವೆ. ಸ್ವತಃ ಮುಖ್ಯಮಂತ್ರಿಯೇ ವಿವೇಚನೆಯ, ನಿಷ್ಠುರ ನಿಲುವು ತಾಳಲಾರದ 'ರಿಮೋಟ್ ಕಂಟ್ರೋಲ್' ಕೈಗೊಂಬೆಯಾಗಿ ವರ್ತಿಸುವಂತಹ ಸ್ಥಿತಿ ತಂದಿಟ್ಟಿಲ್ಲವೇ? ಇದನ್ನು, ಪ್ರಜಾಪ್ರಭುತ್ವಕ್ಕೆ ಜನತೆಗೆ ಮಾಡಿದ ಹಲ್ಲೆ, ಅವಮಾನ.

ಪುಟ 13 ಕ್ಕೆ



ಡಾ. ಆರ್.ವಿ. ನೆನಪಿನ 'ಸಹಯಾನ'

ವಿಚಾರವಂತರು ಸೈದ್ಧಾಂತಿಕ ನೆಲೆಯಲ್ಲಿ ಹೋರಾಡಬೇಕು

■ ನ್ಯಾಯಮೂರ್ತಿ ನಾಗಮೋಹನ ದಾಸ್

'ದೇಶವನ್ನು ಕಾಡುತ್ತಿರುವ ಭಯೋತ್ಪಾದಕತೆ, ಕೋಮುವಾದ, ಭ್ರಷ್ಟಾಚಾರ, ಅಪರಾಧೀಕರಣ, ಸಾಂಸ್ಕೃತಿಕ ದಿವಾಳಿತನ, ಮಾನವೀಯ ಮೌಲ್ಯಗಳ ವ್ಯಾಪಾರೀಕರಣಗಳ ವಿರುದ್ಧ ವಿಚಾರವಂತರೆಲ್ಲ ಸಂಘಟಿತರಾಗಿ ಸೈದ್ಧಾಂತಿಕ ನೆಲೆಯಲ್ಲಿ ಹೋರಾಟ ನಡೆಸಬೇಕು. ಇಲ್ಲವಾದಲ್ಲಿ ಈ ದೇಶಕ್ಕೆ ಅಪಾಯ ಕಾದಿದೆ' ಎಂದು ರಾಜ್ಯ ಉಚ್ಚನ್ಯಾಯಾಲಯದ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಹೇಳಿದರು.

ಶಿಕ್ಷಕರಾಗಿ, ಲೇಖಕರಾಗಿ, ಸೈದ್ಧಾಂತಿಕ ಹೋರಾಟಗಳಿಂದ ಇತರರಿಗೆ ಬೆಳಕು ನೀಡುತ್ತ ಜೀವನ ಸವೆಸಿದ್ದ ದಿವಂಗತ ಡಾ.ಆರ್.ವಿ.ಭಂಡಾರಿಯವರು ನಮ್ಮನ್ನಗಲಿ ಒಂದು ವರ್ಷವಾದ ನೆನಪಿಗೆ ಏರ್ಪಡಿಸಲಾದ ಸಮಾರಂಭದಲ್ಲಿ ಅವರ ಮನೆಯನ್ನು 'ಸಹಯಾನ' ಆರ್.ವಿ ನೆನಪಿನ ಸಂಸ್ಕೃತಿ' ಅಧ್ಯಯನ ಕೇಂದ್ರವಾಗಿಸುವ ಸಮರ್ಪಣಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

'ಕ್ರಿಯಾಶೀಲತೆ ಬೆಂಕಿಯಾಗಿ ಬರಬಹುದು ಅಥವಾ ಬೆಳಕಾಗಿ ಬರಬಹುದು. ಬೆಂಕಿಯಾಗದೇ ಬೆಳಕಾಗಿ ಹೋರಾಟದಲ್ಲಿ ತಮ್ಮ ಪಾತ್ರವಹಿಸಿದ್ದ ಆರ್.ವಿ.ಭಂಡಾರಿಯವರು ಬಾಯಿಲ್ಲದ ಸಮುದಾಯಕ್ಕೆ ಬಾಯಾದವರು;ಕೊನೆಯವರೆಗೂ ಅವರಿಗಾಗಿ ಬದುಕಿದರು,ಬರೆದರು. ಅವರ ಆಲೋಚನೆಯ ಮುಂದುವರಿಕೆಯ ಭಾಗವಾಗಿ ಅವರ ಕುಟುಂಬದವರು ಮನೆಯನ್ನು ಸಂಸ್ಕೃತಿ-ಸಿದ್ಧಾಂತದ ಅಧ್ಯಯನಕ್ಕೆ ಬಿಟ್ಟು ಕೊಡುತ್ತಿರುವುದು ಹೆಮ್ಮೆಯೆನಿಸುತ್ತಿದೆ. ಆರ್.ವಿ. ಯವರ ಆದರ್ಶಗಳು ಈ ಕೇಂದ್ರದಲ್ಲಿ ಮುಂದುವರಿದು ದೇಶದ ಮುಂದಿರುವ ಸಮಸ್ಯೆಗಳನ್ನು ಸವಾಲುಗಳನ್ನು ಎದುರಿಸಲು ಜನ ಸ್ಫೂರ್ತಿಪಡೆಯಲಿ'ಎಂದರು.

'ಎಲ್ಲ ಸಮುದಾಯಕ್ಕಾಗಿ ಹುಟ್ಟಿಕೊಂಡ ಧರ್ಮದಲ್ಲಿ ರಾಜಕೀಯ ಬೆರೆತು ಕೋಮುವಾದವಾಗಿದೆ.ಧರ್ಮ ಗುರುಗಳು ಧರ್ಮವನ್ನು ಅಪ್ರಜಾಸತ್ತಾತ್ಮಕಗೊಳಿಸುತ್ತಿದ್ದಾರೆ. ಧರ್ಮವೊಂದು ಅಪ್ರಜಾಸತ್ತಾತ್ಮಕಗೊಂಡಾಗ ಜನ ವಿರೋಧಿಯಾಗುತ್ತದೆ.ಇದು ಸೌಹಾರ್ದ ಪರಂಪರೆಗೆ ಅಪಾಯಕಾರಿಯಾದದ್ದು. ಸ್ವಾರ್ಥಮನೋಭಾವದಿಂದ ಎಲ್ಲ ರಂಗದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ನ್ಯಾಯಕ್ಕೆ ಬೆಲೆ ಇಲ್ಲದಂತಾಗಿ ಅಪರಾಧೀಕರಣ ಹೆಚ್ಚಿದೆ. ಶ್ರಮ ಶಕ್ತಿಗೆ ಬೆಲೆ ಬರಬೇಕಾದರೆ ಭ್ರಷ್ಟಾಚಾರ ತೊಲಗಬೇಕು ಎಂದು ಹೇಳುತ್ತಾ ನಾಡಿನಲ್ಲಿರುವ ಸಾಂಸ್ಕೃತಿಕ ದಿವಾಳಿಕೋರತನದ ಬಗ್ಗೆ ಗಮನ ಸೆಳೆದು ಸೈದ್ಧಾಂತಿಕ ನೆಲೆಗಟ್ಟಿಲ್ಲದ ಕಲೆ,ಸಾಹಿತ್ಯ ಸಿನೆಮಾ, ಸಾಂಸ್ಕೃತಿಕ ಅಸಂಗತಗಳಿಂದಾಗಿ,ಕೆಲವು ಅವಕಾಶವಾದಿ ಕಲಾವಿದ,ಲೇಖಕರಿಂದಾಗಿ ಸಾಂಸ್ಕೃತಿಕ ದಿವಾಳಿತನ ತಲೆದೋರಿದೆ' ಎಂದರು.

'ಸಾಮಾಜಿಕ ಭದ್ರತೆಯಿಲ್ಲದ ವಾತಾವರಣ ದೇಶದ ನೆಮ್ಮದಿ ಕೆಡಿಸಿದೆ. ಆದ್ದರಿಂದ ಸೈದ್ಧಾಂತಿಕ ಹೋರಾಟ ಮಾತ್ರ ದೇಶವನ್ನು ಉಳಿಸ ಬಲ್ಲದು. ಜನ ಸಾಮಾನ್ಯರ ನೋವಿಗೆ ಸ್ಪಂದಿಸುವ ಸೈದ್ಧಾಂತಿಕ ಚರ್ಚೆ-ಹೋರಾಟ ಈ ಕೇಂದ್ರದ ಮುಖ್ಯ ಆಶಯವಾಗುತ್ತದೆ ಎನ್ನುವ ಬಲವಾದ ನಂಬಿಕೆಯಿಂದ 'ಸಹಯಾನ'ವನ್ನು ಲೋಕಾರ್ಪಣ ಮಾಡುತ್ತಿದ್ದೇನೆ' ಎಂದರು.



ಸಾಹಿತಿ ಶಾಂತಾರಾಮ ನಾಯಕ ಹಿಚ್ಕಡ, ಡಾ. ಆರ್.ವಿ. ಯವರೊಂದಿಗಿನ ತಮ್ಮ ಸಂಬಂಧವನ್ನು ಮೆಲುಕು ಹಾಕುತ್ತಾ ಲೇಖಕರಾಗಿ, ಸಂಘಟಕರಾಗಿ ಈ ನಾಡಿಗೆ ಅವರು ಕೊಟ್ಟ ಕೊಡುಗೆಯನ್ನು ವಿವರಿಸಿದರು. ಪತ್ರಕರ್ತ ಜಿ.ಯು.ಭಟ್ಟ ಆರ್.ವಿ.ಭಂಡಾರಿಯವರ ವ್ಯಕ್ತಿತ್ವ ಸಾಧನೆ ಕುರಿತು ಮಾತನಾಡಿ ಈ ಕೇಂದ್ರವನ್ನು ಬೆಳೆಸುವುದು ಅಗತ್ಯವಾಗಿದೆ ಎಂದರು. ಡಾ. ಎನ್.ಆರ್.ನಾಯಕ ಅವರು ಅಧ್ಯಕ್ಷತೆ ವಹಿಸಿದ್ದರು.

ಆರ್.ವಿ.ಭಂಡಾರಿಯವರ ಪತ್ನಿ ಶ್ರೀಮತಿ ಸುಬ್ಬಿ, ಮಗಳು ಇಂದಿರಾ, ಮಾಧವಿ, ಮಗ ವಿಠ್ಠಲ, ಸೊಸೆ ಯಮುನಾ, ಅಳಿಯ ಕಮಲಾಕರ ಹಾಗೂ ಮೊಮ್ಮಕ್ಕಳಾದ ಛಾಯಾ, ಅನಿಲ ಮನೆಯೊಳಗಿನಿಂದ ಜ್ಯೋತಿಯನ್ನು ತಂದು ನ್ಯಾಯಮೂರ್ತಿಗಳಿಗೆ ಹಸ್ತಾಂತರಿಸಿದರು. ಈ ಜ್ಯೋತಿಯನ್ನು ನ್ಯಾಯಮೂರ್ತಿಗಳು ವೇದಿಕೆಯಲ್ಲಿ ಬೆಳಗಿ ಮನೆಯನ್ನು 'ಸಹಯಾನ' ಕೇಂದ್ರಕ್ಕೆ ಸಮರ್ಪಿಸಿದರು. ಡಾ.ವಿಠ್ಠಲ ಭಂಡಾರಿ ಸ್ವಾಗತಿಸಿದರು, ಡಾ.ಶ್ರೀಪಾದ ಭಟ್ ಪ್ರಾಸ್ತಾವಿಕ ಮಾತನಾಡಿದರು. ಯಮುನಾ ವಂದಿಸಿದರು. ನಾಗರಾಜ ಧಾರೇಶ್ವರ ಕಾರ್ಯಕ್ರ... ನಿರೂಪಿಸಿದರು.

ಮಧ್ಯಾಹ್ನ ನಡೆದ 'ಹಸಿವು' ಕುರಿತ ಕವಿ ಗೋಷ್ಠಿಯಲ್ಲಿ ಕೃಷ್ಣ ನಾಯಕ ಹಿಚ್ಕಡ, ಎನ್.ಆರ್.ಗಜು, ಜಗನ್ನಾಥ ಮೊಗೇರ, ತಮ್ಮಣ್ಣ ಬೀಗಾರ, ಡಾ.ಅನುಪಮಾ, ಶ್ರೀದೇ... ಕೆರೆಮನೆ, ಡಾ.ರಾಜು ಹೆಗಡೆ, ಕೃಷ್ಣಮೂರ್ತಿ ಹಬ್ಬಾರ, ಮಾಸ್ತಿ ಗೌಡ, ಮಾಧವಿ ಭಂಡಾರಿ ಕೆರೆಕೋಣ, ರಾಮಮೂರ್ತಿ ನಾಯಕ ಕವಿತೆ ವಾಚಿಸಿದರು. ಅರವಿಂದ ಕರ್ಕಿಕೋಡಿ ಆಶಯ... ಮಾತುಗಳನ್ನಾಡಿದರು. ರೋಹಿದಾಸ ನಾಯಕ... ಅವರು ಅತಿಥಿಯಾಗಿ ಡಾ.ಬಿ.ಎ.ಸನದಿಯವ... ಅಧ್ಯಕ್ಷರಾಗಿ ಪಾಲ್ಗೊಂಡಿದ್ದರು. ಮಾಧವಿ ಭಂಡಾರಿ ಕೆರೆಕೋಣ ಕಾರ್ಯಕ್ರಮ ನಿರೂಪಿಸಿದ...



ಸಂಜೆ ನಡೆದ ಕರ್ಣ ಪರ್ವ ತಾಳಮದ್ದಲೆಯಲ್ಲಿ ಗಪ್ಪು ಭಟ್ಟ,ಕೊಂತಪಾಲ... ಎಂ.ಜಿ.ಹೆಗಡೆ, ಶ್ರೀಪಾದ ಭಟ್, ಗಣೇಶ ಭಂಡಾರಿ, ಗಜಾನನ ಭಂಡಾರಿ, ಮಾಬ್ಲ ನಾಯಕ, ವಿಟ್ಠಲ ಭಂಡಾರಿ ಅರ್ಥಧಾರಿಗಳಾ... ಪಾಲ್ಗೊಂಡಿದ್ದರು. ಹಿಮ್ಮೇಳದಲ್ಲಿ ಕೃಷ್ಣ ಭಂಡಾ... ಮಂಜ ಕರ್ಕಿ, ಅನಿಲ ಪಾಲ್ಗೊಂಡಿದ್ದರು. ಡಾ... ಆರ್.ಜಿ.ಗುಂದಿ ತಾಳಮದ್ದಲೆಯನ್ನು ಉದ್ಘಾ... ಮಾತನಾಡಿದರು.

'ಹಸಿವು-ಅಸ್ಪೃಶ್ಯತೆ' ಕುರಿತು ರಾಜೇಶ ದೇಸಾಯಿ ಹಲವು ಚಿತ್ರಗಳನ್ನು ಬಿಡಿಸುವ ಮೂಲಕ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು.

ನ್ಯಾಯಾಂಗವೇ ಪ್ರಧಾನ ಹೊಣೆ



ಪುಟ 3 ರಿಂದ

ನ್ಯಾಯಮೂರ್ತಿಗಳೂ ಸಹ ಇಷ್ಟೊಂದು ಬಹಿರಂಗ ಬೆಂಬಲಕ್ಕೆ ನಿಂತುದು, ಇನ್ನೊಂದು ಬಗೆಯಲ್ಲಿ ಮುಖ್ಯ ನ್ಯಾಯಮೂರ್ತಿಗಲ ಸಮರ್ಥನೆಗೆ ಬಲವನ್ನು ಒದಗಿಸಿತ್ತು. ಹೀಗಾಗಿ ನ್ಯಾಯಾಂಗ-ವಕೀಲರ ಸಂಘದ ನಡುವೆ ಸಂಘರ್ಷ ತೀವ್ರತರದೆಡೆಗೆ ಕೊಂಡೊಯ್ಯುವಂತಾಯ್ತು. ಆರಂಭದಲ್ಲಿಯೇ ರಾಷ್ಟ್ರ, ರಾಜ್ಯದ ಉನ್ನತ ನ್ಯಾಯಾಂಗ ಸೂಕ್ತ ಕ್ರಮ ಅನುಸರಿಸಿದ್ದರೆ ಇದನ್ನು ತಪಿಸುವುದಿತ್ತು. ನ್ಯಾಯಾಂಗದ ಘನತೆಯೂ ಉಳಿಯುತ್ತಿತ್ತು.

ಅತ್ತ ತಮಿಳುನಾಡಿನಲ್ಲಿ ಅಕ್ರಮ ಭೂ ಕಬಳಿಕೆ, ಕಾನೂನು ಉಲ್ಲಂಘಿಸಿ ಭೂಮಿ ವಶಪಡಿಸಿ ಕೊಂಡಿರುವುದನ್ನು ಭೂಹೀನರಿಗೆ ಹಂಚಬೇಕೆಂಬ ಚಳುವಳಿ ತೀವ್ರಗೊಂಡಿದೆ. ಅಲ್ಲಿನ ದಾಖಲೆಗಳು ಸ್ಪಷ್ಟವಾಗಿವೆ. ಆದರೆ ತಮಿಳುನಾಡು ಸರ್ಕಾರ... ಕಾವೇರಿ ರಾಜಪುರಂನಲ್ಲಿ ಇಂತಹ ಹಲವು ದೊಡ್ಡ... ಮೇಲೆ ಕ್ರಮ ಕೈಗೊಳ್ಳಲು ಹಿಂದೇಟು ಹಾಕುತ್ತಿ...

ಕೊನೆಯದಾಗಿ ಇಷ್ಟೆಲ್ಲಾ ಅವಾಂತರ... ನಂತರವಾದರೂ ತ್ವರಿತವಾಗಿ ನ್ಯಾಯಾ... ಸ್ಪಂದಿಸುವುದೇ ಎಂದು ಕಾದು ನೋಡಬೇಕಿದೆ. ಅ... ನಿರ್ಧಾರ ಸ್ವತ: ನ್ಯಾಯಾಂಗದ ಘನತೆಯ... ರಕ್ಷಿಸುವುದಾಗಿದೆ.

ರಾಜ್ಯದ ಅಣೆಕಟ್ಟುಗಳೆಲ್ಲಾ ಭರ್ತಿಯಾಗಿವೆ. ಆದರೆ ರಾಜ್ಯದಲ್ಲಿ ವಿದ್ಯುತ್ ನಿಲುಗಡೆ. ಕೋಲಾರ - ಚಿಕ್ಕಬಳ್ಳಾಪುರ ಜಿಲ್ಲೆಗಳ ಪರಿಸ್ಥಿತಿಯಂತು ಕೇಳುವುದೇ ಬೇಡ. ಜನ ರೋಸಿ ಹೋಗಿದ್ದಾರೆ. ಇದರಲ್ಲಿ ಬಿಜೆಪಿ ಶಾಸಕರಿರುವ ಕ್ಷೇತ್ರಕ್ಕೊಂದು-ಉಳಿದವಕ್ಕೊಂದು ನೀತಿ. ಜನ ಕೇಳುತ್ತಾರಾ?

ಸರಕಾರಿ ಕಚೇರಿಗಳು 'ನಿರ್ಜೀವ' ವಾಗಿ ಕಾರ್ಯ ನಿರ್ವಹಿಸಿದ್ದನ್ನು ಬಿಟ್ಟರೆ ಉಳಿದಂತೆ ನಗರದ ಚಟುವಟಿಕೆ ಸ್ತಬ್ಧಗೊಂಡಿತ್ತು. ಅಂಗಡಿ ಮುಂಗಟ್ಟುಗಳು ಮುಚ್ಚಿದವು. ಶಾಲೆ, ಕಾಲೇಜುಗಳು ಕಾರ್ಯ ನಿರ್ವಹಿಸಲಿಲ್ಲ. ಬಸ್‌ಗಳು ಸಂಚರಿಸಲಿಲ್ಲ. ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಬಿಕೋ ಎನ್ನುತ್ತಿತ್ತು.

ಕರೆಂಟ್ ಕಣ್ಣುಮುಚ್ಚಾಲೆ - ಸಿಡಿದೆದ್ದ ಜನತೆ ಯಶ ಕಂಡ ಕೋಲಾರ ಬಂದ್

ವಿಶ್ರುತ್

ಎಂದೆಡೆ ಬರ. ಅದರ ಮೇಲೆ; ಗಾಯದ ಮೇಲೆ ಎಂಬಂತೆ ವಿದ್ಯುತ್ ಸಮಸ್ಯೆಯ ಆಘಾತ. ಅವಿಭಜಿತ ಕೋಲಾರ (ಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳು) ಜಿಲ್ಲೆಯ ರ ಪರಿಸ್ಥಿತಿ.

ರ್ಧಕ್ಕರ್ಧ ರಾಜ್ಯ ಪ್ರವಾಹ ಪರಿಸ್ಥಿತಿಯಿಂದ ಲಾಡುತ್ತಿದ್ದು ಉತ್ತಮ ಮಳೆಯಿಂದಾಗಿ ತ್ ಉತ್ಪಾದನೆ ಸ್ಥಿತಿ ಸುಧಾರಿಸಿದ್ದರೂ ತೀಯ 'ಜಗಳಾ' ಪಕ್ಷದ ಹಾದಿ, ಬೀದಿ ದಿಂದಾಗಿ ಆಡಳಿತ ವ್ಯವಸ್ಥೆ ದಿಕ್ಕೆಟ್ಟು ಹೋದ ಾಮವಾಗಿ ವಿದ್ಯುತ್ ರಂಗವನ್ನೂ ಸೂಕ್ತವಾಗಿ ಯಿಸಲು ಆಗುತ್ತಿಲ್ಲ. ಕೋಲಾರ-ಚಿಕ್ಕಬಳ್ಳಾಪುರ ಗಳ ಮೇಲೆ ಇದರ ಕರಿನೆರಳು ದಟ್ಟವಾಗಿ ದೆ.

ಷಿಗೂ ಕುಡಿಯುವ ನೀರಿಗೂ ಪಾತಾಳ ಿರುವ ಅಂತರ್ಜಲವನ್ನೇ ಹೆಚ್ಚಾಗಿ ನೆಚ್ಚಿರುವ ಜಿಲ್ಲೆಗಳ ಜನಜೀವನ ಇತ್ತೀಚಿನ ದಿನಗಳಲ್ಲಿ ತ್ ಕಣ್ಣು ಚ್ಚಾಟದಿಂದಾಗಿ-ಅಸ್ತವ್ಯಸ್ತಗೊಂಡಿತ್ತು. ವವಾಗಿ ಬರಗಾಲ ಹಾಗೂ ಅಂತರ್ಜಲ ದ ತೀವ್ರ ಕುಸಿತದ ಕಟುವಾಸ್ತವದ ಹಿನ್ನೆಲೆಯಲ್ಲಿ ಪ್ರದೇಶಕ್ಕೆ ವಿಶೇಷ ವಿದ್ಯುತ್ ನೀತಿಯನ್ನೇ ಿಸಬೇಕಾದ ಜರೂರು ಇರುವಂತಹ ೇಶದಲ್ಲಿ ನೀಡಬೇಕಾದ ವಿದ್ಯುತ್ತನ್ನೇ ಸಮರ್ಪಕ ಯಲ್ಲಿ ಪೂರೈಸದ ಸರಕಾರದ್ದು ಭಂಡತನದ ಯಲ್ಲದೇ ಇನ್ನೇನು?


ರೆಂಕಿಯಿಂದ ಬಾಣಲೆಗೆ ಬಿದ್ದ ಅನುಭವ ಪಡೆದ ಯ ಜನರು ಆಕ್ರೋಶಿತರಾಗಿ ಪ್ರತಿಭಟನೆಯ ತುಳಿದಿದ್ದು ನವೆಂಬರ್ 6 ರಂದು ಕೋಲಾರ ್ ನಡೆಸುವ ಮೂಲಕ ತಮ್ಮ ಸಿಟ್ಟನ್ನು ಡಿಕೊಂಡರು.

ತಮ್ಮ

ರಡೂ ಜಿಲ್ಲೆಗಳಲ್ಲಿ ಕಾಂಗ್ರೆಸ್ ಮತ್ತು ತೀತ ಜನತಾದಳ ಶಾಸಕರೇ ಹೆಚ್ಚಿದ್ದು ಬಹುತೇಕ ಗಳಲ್ಲಿ 'ಕಮಲ' ಅರಳದಿರುವುದೇ ಉಭಯ ಳಲ್ಲಿ ವಿದ್ಯುತ್ ಸಮಸ್ಯೆ ಬಿಗಡಾಯಿಸಲು ಎಂಬುದು ಮೇಲ್ನೋಟಕ್ಕೇ ಕಂಡುಬರುತ್ತದೆ. ಜಿಗೆ ಬೆಂಬಲ ನೀಡದಿರುವುದಕ್ಕೆ ಸರಕಾರ ನ್ನು 'ಶಿಕ್ಷಿಸುತ್ತಿರುವುದಕ್ಕೆ' ಒಂದು ಸಣ್ಣ ಾಹರಣೆ ಗಮನಿಸಿ.

ೋಲಾರ, ಶ್ರೀನಿವಾಸಪುರ, ಾರಪೇಟೆ ತಾಲ್ಲೂಕುಗಳು ಹಾಗೂ ಾಮಣಿಯ ಕೆಲವು ಭಾಗಗಳನ್ನು ಗೊಂಡ ಕೋಲಾರ ವೃತ್ತ ದೈನಂದಿನ ತ್ ಬೇಡಿಕೆ 150 ಮೆಗಾವ್ಯಾಟ್ ೂ ಪೂರೈಕೆ ಆಗುತ್ತಿದ್ದದ್ದು 50 ರಿಂದ 60 ವ್ಯಾಟ್ ಮಾತ್ರ. ಆದರೆ ಸೀಮಿತ ಯನ್ನು ಹೊಂದಿದ ಮಾಲೂರು ವೃತ್ತಕ್ಕೆ ಮೆಗಾ ವ್ಯಾಟ್ ಪೂರೈಕೆ. ಕಾರಣ ಸ್ಪಷ್ಟ. ಅದು ಪತಿ ಲಡ್ಡು', 'ಗಂಗಾಜಲ' (ಕು)ಖ್ಯಾತಿಯ .ಎನ್. ಕೃಷ್ಣಯ್ಯ ಶೆಟ್ಟಿಯವರನ್ನು ಆಯ್ಕೆ ಿದ ಕ್ಷೇತ್ರ.

ಟ್ಟಾರೆಯಾಗಿ, ಕಡಿಮೆ ಪ್ರಮಾಣದ ಪೂರೈಕೆ ಹಾಗೂ ಬೇಕಾಬಿಟ್ಟಿ ವಿದ್ಯುತ್ ಕಡಿತದಿಂದಾಗಿ ಉಭಯ ಜಿಲ್ಲೆಗಳ ಜನರು ಹಗಲಲ್ಲಿ ಸರಿಯಾಗಿ



ಕೃಷಿ ಮತ್ತಿತರ ಚಟುವಟಿಕೆಗಳನ್ನು ನಡೆಸಲಾಗದೆ ರಾತ್ರಿ ಹೊತ್ತು ವಿದ್ಯಾರ್ಥಿಗಳು ಅಧ್ಯಯನ ಮಾಡಲಾಗದೆ, ನಾಗರಿಕರು ರಾತ್ರಿಯನ್ನು ಕಗ್ಗತ್ತಲಿನಲ್ಲಿ ಕಳೆಯಬೇಕಾದ ಪ್ರಮೇಯ ಬಂದೊದಗಿತ್ತು/

ರೈತರು ಮೋಟರ್ ಆನ್ ಮಾಡಿದರೆ 100 ರಿಂದ 1200 ಅಡಿ ಆಳದಿಂದ ನೀರು ಮೇಲೆ ಬರುವುದರೊಳಗಾಗಿ ವಿದ್ಯುತ್ ಸ್ಥಗಿತವಾಗಿ ಪಾಡುಪಡುತ್ತಿದ್ದಾರೆಂದರೆ ಬೆಸ್ಕಾಂ ಯಾವ ರೀತಿಯಲ್ಲಿ ಬೇಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತಿದೆ



ಕೋಲಾರ ಬಂದ್

ಎನ್ನುವುದಕ್ಕೆ ದೃಷ್ಟಾಂತವಾಗಿದೆ. ಬೇಕಾಬಿಟ್ಟಿ ವಿದ್ಯುತ್ ಪೂರೈಕೆಯಿಂದಾಗಿ ಅನೇಕ ಪಂಪ್‌ಸೆಟ್‌ಗಳು ಹಾಳಾದ ಪ್ರಕರಣಗಳೂ ಇವೆ. ಸಮಸ್ಯೆಗಳನ್ನು ಹೇಳಿಕೊಳ್ಳಲು ಬೆಸ್ಕಾಂ ಅಧಿಕಾರಿಗಳಿಗೆ ಫೋನ್ ಮಾಡಿದಾಗ ಫೋನ್ ರಿಸೀವ್ ಮಾಡುವ ಸೌಜನ್ಯವನ್ನು ತೋರದ ಹಾಗೂ ಕಚೇರಿಗೇ ತೆರಳಿದರೆ ಅಲ್ಲಿ ದರ್ಪ ತೋರುವ ಅಧಿಕಾರಿಗಳ ವರ್ತನೆ ಜನರ ಆಕ್ರೋಶವನ್ನು ಇಮ್ಮಡಿಗೊಳಿಸಿದೆ.

ವೇಳಾಪಟ್ಟಿಯಿಲ್ಲದೆ ಬೇಕಾಬಿಟ್ಟಿಯಾಗಿ ದಿನದ ಬಹುತೇಕ ಭಾಗ ಕರೆಂಟ್ ಕಟ್ ಮಾಡುವುದರಿಂದ ಬೇಸತ್ತ ಜನರು ಜಿಲ್ಲೆಯ ನಾನಾ ಭಾಗಗಳಲ್ಲಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಬೆಸ್ಕಾಂ ಕಛೇರಿಗಳಿಗೆ ಮುತ್ತಿಗೆ, ಧರಣಿ, ರಸ್ತೆ ತಡೆ ಮೊದಲಾದ ಚಳುವಳಿಗಳನ್ನು ನಡೆಸಿದರು. ಬಂಗಾರಪೇಟೆಯ ಜನರು ಸ್ಥಳೀಯ ಶಾಸಕ ಎಂ.ನಾರಾಯಣಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಬೆಸ್ಕಾಂ ಕೇಂದ್ರ ಕಚೇರಿಯ ಮುಂದೆ ಧರಣಿ ನಡೆಸಿದ್ದು ಒಂದು ಮಹತ್ವದ ಬೆಳವಣಿಗೆ. ಇಷ್ಟೆಲ್ಲಾ ಆದರೂ ಎಚ್ಚೆತ್ತುಕೊಳ್ಳದ ಸರ್ಕಾರಕ್ಕೆ ಬಿಸಿ ಮುಟ್ಟಿಸಲು ನಿರ್ಧರಿಸಿದ ಕೋಲಾರದ ಜನರು 'ವಿದ್ಯುತ್ ಗ್ರಾಹಕರ ಹಿತರಕ್ಷಣಾ ವೇದಿಕೆ ರಚಿಸಿಕೊಂಡು ತೀವ್ರ ಸಂಘರ್ಷಕ್ಕೆ ಸಜ್ಜಾದರು. ಮಾಜಿ ಸಚಿವ ಕೆ.ಶ್ರೀನಿವಾಸ ಗೌಡರ ನೇತೃತ್ವದ ವೇದಿಕೆ ನವೆಂಬರ್ 6 ರಂದು ಕೋಲಾರ ಬಂದ್ ನಡೆಸಲು ನೀಡಿದ ಕರೆಗೆ ಭಾರೀ ಪ್ರತಿಕ್ರಿಯೆ ಕಂಡುಬಂದಿತು. ಜಿಲ್ಲಾ ಕೃಷಿಕ ಸಮಾಜ, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ). ಜನವಾದಿ ಮಹಿಳಾ ಸಂಘಟನೆ, ಡಿವೈಎಫ್‌ಐ ಮೊದಲಾದ ಸಂಘ ಸಂಸ್ಥೆಗಳೂ ರಾಜಕೀಯ ಪಕ್ಷಗಳೂ ಬೆಂಬಲ ನೀಡಿದ್ದರಿಂದ 'ಕೋಲಾರ ಬಂದ್' ಅಭೂತಪೂರ್ವ ಯಶಸ್ಸನ್ನು ಕಂಡಿತು.

ಹೋರಾಟದ ಭಾಗವಾಗಿ ಬೆಸ್ಕಾಂ ಕಚೇರಿ ಮುಂದೆ ವೇದಿಕೆ ಕಾರ್ಯಕರ್ತರು ಧರಣಿ ಆರಂಭಿಸಿದರು. ನವೆಂಬರ್ 7 ರಂದು ಧರಣಿ ಎರಡನೇ ದಿನ ಪ್ರವೇಶಿಸಿದಾಗ ಬೆಸ್ಕಾಂ ಆಡಳಿತ ನಿರ್ದೇಶಕರ ತುಷಾರ್ ಗಿರಿನಾಥ ಕೋಲಾರಕ್ಕೆ ಧಾವಿಸಿ ಚಳುವಳಿ ನಿರತರೊಡನೆ ಮಾತುಕತೆ ನಡೆಸಿದರು.

ಜಿಲ್ಲೆಯ ಗ್ರಾಮಾಂತರ ಪ್ರದೇಶಕ್ಕೆ ತಲಾ ಆರು ಗಂಟೆ ಕಾಲ ನಿರಂತರ ತ್ರೀ ಫೇಸ್ ಮತ್ತು ಸಿಂಗಲ್ ಫೇಸ್ ವಿದ್ಯುತ್ ಪೂರೈಸುವುದಾಗಿಯೂ, ನಗರ ಪ್ರದೇಶಕ್ಕೆ 20 ಗಂಟೆ ವಿದ್ಯುತ್ ಪೂರೈಸುವುದಾಗಿ ಭರವಸೆ ನೀಡಿದ್ದರಿಂದ ಚಳುವಳಿಯನ್ನು ಹಿಂತೆಗೆಯಲಾಯಿತು. ಈ ಭರವಸೆ ನೀಡಿದ ಮಾರನೇ ದಿನ ಭಾನುವಾರವೂ ವಿದ್ಯುತ್ ಕಣ್ಣುಮುಚ್ಚಾಟ ಯಥಾ ಪ್ರಕಾರ ಮುಂದುವರಿದಿತ್ತು. ನೀಡಿದ್ದ ಆಶ್ವಾಸನೆ ಈಡೇರಿಸದಿದ್ದರೆ ಚಳುವಳಿಯನ್ನು ತೀವ್ರಗೊಳಿಸಬೇಕಾದೀತೆಂದು ಎಚ್ಚರಿಸಲಾಗಿದೆ.


ಬಾಲಿಶ ವರ್ತನೆ

ಕ್ಷೇತ್ರದ ಜನತೆ ಕರೆಂಟ್ ಕಾಟದಿಂದ ಕಂಗೆಟ್ಟಿದ್ದರೂ ಆ ಬಗ್ಗೆ ಚಕಾರ ಎತ್ತದೆ, ಹಣದ ಮದದಿಂದ 'ರಾಜಕೀಯ ವ್ಯಭಿಚಾರ' ನಡೆಸುತ್ತಿರುವ ಗಣಿಧಣಿಗಳಿಗೆ ಬೆಂಬಲ ಕೊಟ್ಟು ಮಂತ್ರಿಯಾಗುವ ಕನಸು ಕಾಣುತ್ತಿರುವ ಕೋಲಾರ ಶಾಸಕ ವರ್ತೂರು ಪ್ರಕಾಶ್ 'ಕೋಲಾರ ಬಂದ್' ದಿನ ಹಠಾತ್ತನೆ ಪ್ರತ್ಯಕ್ಷರಾಗಿ ಕೋಲಾರದಲ್ಲಿ ಸುದ್ದಿಗೋಷ್ಠಿ ನಡೆಸಿದರು.

'ಪ್ರಚಾರಕ್ಕಾಗಿ ಬಂದ್ ನಡೆಸಲಾಗುತ್ತಿದೆ' ಎಂದು ಒಮ್ಮೆ ಹೇಳಿದರೆ, 'ಬಂದ್‌ಗೆ ನನ್ನ ಬೆಂಬಲವಿದೆ' ಎಂದು ಇನ್ನೊಮ್ಮೆ ಹೇಳಿ, 'ಬೆಂಬಲವಿದೆಯಾದರೂ ಬಂದ್‌ನಲ್ಲಿ ನಾನು ಭಾಗವಹಿಸುವುದಿಲ್ಲ' ಎನ್ನುತ್ತಾ ತಮ್ಮ ಅಸ್ಪಷ್ಟ ನಿಲುವಿನ ಬಾಲಿಶ ಹೇಳಿಕೆಗಳಿಂದಾಗಿ ಶಾಸಕ ಪ್ರಕಾಶ್ ನಗೆಪಾಟಲಿಗೆ ಈಡಾದರು. ವಿದ್ಯುತ್ ಸಮಸ್ಯೆಗೆ ಬೆಸ್ಕಾಂ ಹೊಣೆ ಎಂದು ಹೇಳಿ, ಸರಕಾರವನ್ನು ಓಲೈಸುವಲ್ಲಿ ಅವರು ನಿರತರಾಗಿದ್ದು ಸ್ಪಷ್ಟವಾಗಿತ್ತು. ಶಾಸಕರಾಗಿ, ಅದರಲ್ಲೂ ಜಿಲ್ಲಾ ಕೇಂದ್ರದ ಜನಪ್ರತಿನಿಧಿಯಾಗಿ ತಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳಲು ವರ್ತೂರು ಪ್ರಕಾಶ್ ಸರ್ಕಸ್ ನಡೆಸಿದರು ಎಂದು ತಿಳಿದುಬಂದಿದೆ. ○

ಕೋಟೆಕಾರು ಸರ್ಕಲ್ ರೈತ ಸಂಘದ ಸಮಾವೇಶ

ಉದ್ಯೋಗ ಖಾತ್ರಿ ಯೋಜನೆಯಲ್ಲಿ 200 ದಿನ ಕೆಲಸಕ್ಕೆ ಒತ್ತಾಯ



ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಲ್ಲಿ ವಾರ್ಷಿಕ 200 ದಿನ ಕೆಲಸ ಕೊಡಬೇಕು. ಮತ್ತು ಉದ್ಯೋಗ ಖಾತ್ರಿ ಯೋಜನೆಯ ಸಂಬಳನ್ನು 150 ರೂಪಾಯಿಗೆ ಏರಿಸಬೇಕು. ಮತ್ತು ಉದ್ಯೋಗದ ಹಣವನ್ನು ಪ್ರತಿ ವಾರಕ್ಕೊಮ್ಮೆ ಕಡ್ಡಾಯ ಕೊಡಬೇಕೆಂದು ಒತ್ತಾಯಿಸಲು ಅಕ್ಟೋಬರ್ 18, 2009 ರಂದು ನಡೆವ ಕರ್ನಾಟಕ ಪ್ರಾಂತ ರೈತ ಸಂಘದ, ಕೋಟೆಕಾರು ಸರ್ಕಲ್ ರೈತ ಸಮಾವೇಶವು ಸರ್ಕಾರವನ್ನು ಒತ್ತಾಯಿಸಿತು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮುಖಂಡರಾದ ಕಾ. ಕೆ.ಆರ್.ಶ್ರೀಯಾನ್ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ರೈತ ಈ ದೇಶದ ಬೆನ್ನೆಲುಬು, ರೈತ ಕೈಕಟ್ಟಿ ಕುಳಿತರೆ ಈ ದೇಶಕ್ಕೆ ಅಧೋಗತಿ ಬರಬಹುದು. ರೈತರಬೇಡಿಕೆಗಳಿಗೆ ಸರ್ಕಾರಗಳು ಸಕಾರಾತ್ಮಕವಾಗಿ ಸ್ಪಂದಿಸದಿದ್ದಲ್ಲಿ, ರೈತ ಸಂಘವು ತೀವ್ರ ರೀತಿಯ ಚಳುವಳಿಗಳನ್ನು ನಡೆಸುತ್ತದೆ. ಈ ನಿಟ್ಟಿನಲ್ಲಿ ರೈತರಿಗೆ ಪೂರಕವಾದ ಉದ್ಯೋಗಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮಗಳಲ್ಲಿ ಸಮರ್ಪಕವಾಗಿ ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ದ.ಕ. ಜಿಲ್ಲಾ ರೈತ ಸಂಘದ ಉಪಾಧ್ಯಕ್ಷರಾದ ಕಾಂ. ಹರಿದಾಸ್ ಭಟ್ ಬೆಳ್ತಂಗಡಿ ಮಾತನಾಡಿ, ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟದ ಫಲವಾಗಿ, ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಬರಲು ಸಾಧ್ಯವಾಗಿದೆ. ಇದನ್ನು ಸಮರ್ಪಕವಾಗಿ ಜಾರಿ ಗೊಳಿಸಲು ಸರ್ಕಾರಗಳು ಮೀನಮೇಷ ನಡೆಸುತ್ತದೆ ಎಂದು ಆರೋಪಿಸಿದರು. ಆದುದರಿಂದ ಸರ್ಕಾರಗಳು ಯಾವುದೇ ಒತ್ತಡಕ್ಕೆ ಮಣಿಯದೆ ಉದ್ಯೋಗ ಖಾತ್ರಿಯೋಜನೆ ಜಾರಿಗೆ ಕಾರ್ಯಕ್ರಮ ಹಾಕಬೇಕು ಎಂದು ಒತ್ತಾಯಿಸಿದರು.

ಮುನ್ನೂರು ಗ್ರಾಮದ ಹಿರಿಯ ರೈತ ಹೋರಾಟಗಾರರಾಗಿದ್ದ ಕಾಂ. ದೋಗು ಸಪಲ್ಯರವರು ಸಮಾವೇಶದ ಧ್ವಜಾರೋಹಣ ನೆರವೇರಿಸಿದರು.



ಸಮಾವೇಶದ ಪ್ರಾರಂಭದಲ್ಲಿ ದ.ಕ. ಜಿಲ್ಲೆಯಲ್ಲಿ ರೈತ ಸಂಘವನ್ನು ಕಟ್ಟಿಬೆಳೆಸಲು ನಿರಂತರವಾಗಿ ದುಡಿದ ಕಾಂ. ರಾಮಚಂದ್ರ ಉಚ್ಚಿಲ್‌ರವರಿಗೆ ಮತ್ತು ದಿ. ಕೆ.ಮಂಜಪ್ಪರವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಕೋಟೆಕಾರು ಸರ್ಕಲ್ ಬೀಡಿ ಲೇಬ… ಯೂನಿಯನ್‌ನ ಅಧ್ಯಕ್ಷೆ ಶ್ರೀಮತಿ ಪದ್ಮಾ… ಎಸ್.ಶೆಟ್ಟಿ, ಡಿವೈಎಫ್‌ಐ ಉಳ್ಳಾಲ ವಲ… ಸಮಿತಿ ಕಾರ್ಯದರ್ಶಿ ಅಶೋಕ … ಜನವಾದಿ ಮಹಿಳಾ ಸಂಘಟನೆ… ಉಳ್ಳಾಲ ವಲಯ ಸಮಿತಿ ಅಧ್ಯಕ್ಷ… ನಳಿನಾಕ್ಷಿ ಜಿ.ಎಸ್., ಸಿಪಿಐ(… ಉಳ್ಳಾಲ ವಲಯ ಸಮಿತಿ ಕಾರ್ಯದ… ಕಾಂ. ಕೃಷ್ಣಪ್ಪ ಸಾಲ್ಯಾನ್ ಸಮಾವೇ… ಶುಭಕೋರಿ ಮಾತನಾಡಿದರು.

ಕರ್ನಾಟಕ ಪ್ರಾಂತ ರೈತ ಸಂ… ದ.ಕ. ಜಿಲ್ಲಾ ಸಮಿತಿಯ ಕಾರ್ಯದ… ಕೆ.ಯಾದವಶೆಟ್ಟಿ ಸಮಾರೋ… ಸಮಾರಂಭದಲ್ಲಿ ಭಾಗವಹಿಸಿ ಮಾತ… ಈ ಜಿಲ್ಲೆಯಲ್ಲಿ ಬಲಿಷ್ಟ ರೈತ ಸಂಘಟನೆಯನ್ನು … ಪ್ರಬಲವಾದ ಹೋರಾಟ ಮತ್ತು ಚಳುವಳಿಗ… ನಡೆಸಿ, ರೈತರ ಮೂಲಭೂತ ಸಮಸ್ಯೆಗ… ಈಡೇರಿಸಲು, ಸರ್ಕಾರವನ್ನು ಎಚ್ಚರಿಸಲು … ಕಾರ್ಮಿಕರು ಒಗ್ಗೂಡಿ ಕೆಲಸ ಮಾಡಬೇಕೆಂದ… ಈ ನಿಟ್ಟಿನಲ್ಲಿ ಎಲ್ಲಾ ಗ್ರಾಮಗಳಲ್ಲಿ ಉದ್ಯೋಗ … ಯೋಜನೆಯನ್ನು ಜಾರಿಗೊಳಿಸಲು ಸಾಧ್ಯವಿದೆ ಎ… ಹೇಳಿದರು.

ಸಮಾವೇಶದ ಅಧ್ಯಕ್ಷತೆಯನ್ನು ರೈತ ಸಂ… ಅಧ್ಯಕ್ಷರಾದ ಸಂಜೀವ ಪಿಲಾರ್ ವಹಿಸಿದ್ದರು …

ತಾಲ್ಲೂಕು ಪಂಚಾಯತ್ ಸದಸ್ಯರಾದ ಶಾ… ಎಸ್.ಪೂಜಾರಿ, ರೈತ ಸಂಘದ ಹಿರಿ… ಮುಖಂಡರಾದ ಕಾಂ. ಪರಮೇಶ್ವರ ಶೆಟ್ಟಿ, ಬಿ.ಭಾ… ಪೂಜಾರಿ, ವಿಶ್ವನಾಥ ತೇವುಲ, ಕೆ.ವಿ… ಶ್ರೀಯಾನ್, ದುಗ್ಗಪ್ಪ ಪಾವೂರು, ಸಂತೋ… ಕುಮಾರ್ ಶೆಟ್ಟಿ, ಅಬ್ದುಲ್ ರಹಿಮಾನ್ ಕೋಟೆಕಾ… ಕೃಷ್ಣಶೆಟ್ಟಿ ಕೋಟೆಕಾರು ಮುಂತಾದವ… ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಕಾರ್ಯದ… ಶ್ರೀನಿವಾಸ ಆಳ್ವ ಸ್ವಾಗತಿಸಿ, ಕೊನೆಯಲ್ಲಿ ಲೋಕ… ಪನೀರು ಧನ್ಯವಾದವಿತ್ತರು.

ಹಂಚು ಕಾರ್ಮಿಕರ ವಾರ್ಷಿಕ ಮಹಾಸಭೆ - ಕನಿಷ್ಟ ಕೂಲಿ ಹೆಚ್ಚಳಕ್ಕೆ ಆಗ್ರಹ

ನವೆಂಬರ್ 1, 2009 ರಂದು ಉಡುಪಿ ಜಿಲ್ಲಾ ಹಂಚು ಕಾರ್ಮಿಕರ ಸಂಘದ 9ನೇ ಮಹಾಸಭೆಯು ಸಂಘದ ಅಧ್ಯಕ್ಷರಾದ ವಿ.ನರಸಿಂಹರವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ರಾಜೀವಶೆಟ್ಟಿಯವರು ಸ್ವಾಗತ ಮಾಡಿದರು.

ಪ್ರಧಾನ ಕಾರ್ಯದರ್ಶಿಯವರಾದ ಕೆ.ಶಂಕರ್‌ರವರು ಕಳೆದ ಒಂದು ವರ್ಷದ ಚಟುವಟಿಕೆಗಳ ಲಿಖಿತ ವರದಿಯನ್ನು ಮಂಡಿಸಿದರು. ಕೋಶಾಧಿಕಾರಿಯವರಾದ ಎಚ್.ನರಸಿಂಹರವರು ಲೆಕ್ಕಪತ್ರದ ವರದಿಯನ್ನು ಮಂಡಿಸಿದರು. ವರದಿಯ ಮೇಲೆ ಚರ್ಚೆ ನಡೆದು ಅಂಗೀಕರಿಸಲಾಯಿತು.



ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಐಟಿಯುವಿನ ಜಿಲ್ಲಾ ಉಪಾಧ್ಯಕ್ಷರಾದ ಎ.ಎಸ್.ಆಚಾರ್ಯರವರು ಮಾತನಾಡಿ ಹಂಚು ಕಾರ್ಮಿಕರು ಒಗ್ಗಟ್ಟಾಗಿ ಅವರ ಆರ್ಥಿಕ ಬೇಡಿಕೆಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ಹೋರಾಟ ಮಾಡುತ್ತಾ, ಇತರ ಸಹೋದರ ಸಂಘಟನೆಗಳ ಕಾರ್ಮಿಕರಿಗೂ ಸೌಹಾರ್ದ ಬೆಂಬಲ ನೀಡುತ್ತಾ ಬಂದಿರುತ್ತಾರೆ. ರೈತ-ಕೃಷಿ ಕೂಲಿಕಾರ ಸಂಘಟನೆ ಮಾಡುವಲ್ಲಿ ಹಂಚು ಕಾರ್ಮಿಕರು ಒಗ್ಗಟ್ಟಾಗಿ ಅವರ ಆರ್ಥಿಕ ಬೇಡಿಕೆಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ಹೋರಾಟ ಮಾಡುತ್ತಾ, ಇತರ ಸಹೋದರ ಸಂಘಟನೆಗಳ ಕಾರ್ಮಿಕರಿಗೂ ಸೌಹಾರ್ದ ಬೆಂಬಲ ನೀಡುತ್ತಾ ಬಂದಿರುತ್ತಾರೆ. ರೈತ-ಕೃಷಿ ಕೂಲಿಕಾರರ ಸಂಘಟನೆ ಮಾಡುವಲ್ಲಿ ಹಂಚು ಕಾರ್ಮಿಕರು ಶ್ರಮವಹಿಸುತ್ತಾರೆ. ಅದನ್ನು ಮುಂದುವರಿಸಬೇಕಾಗಿ ಕೇಳಿಕೊಂಡು ಮುಂದೆ ಬರಲಿರುವ ಆಹಾರ ಚಳುವಳಿಯಲ್ಲಿ ಮುಂಚೂಣಿಯಲ್ಲಿ ನಿಲ್ಲಬೇಕೆಂದು ಹೇಳಿದರು.

ರೈತ-ಕೃಷಿಕೂಲಿಕಾರರ ಸಂಘಟನೆಗಳ ಮುಖಂಡ ದಾಸಭಂಡಾರಿ, ಡಿವೈಎಫ್‌ಐ ತಾಲ್ಲೂಕು ಅಧ್ಯಕ್ಷರಾದ ಸುಬ್ರಹ್ಮಣ್ಯ ಆಚಾರಿ, ಕಟ್ಟಡ ಕಾರ್ಮಿಕ ಸಂಘದ ಮುಖಂಡರಾದ ವೆಂಕಟೇಶ ಕೋಣೆಯವರು ಶುಭಕೋರಿ ಮಾತನಾಡಿ ಸಂಘಟನೆಯನ್ನು ಬಲಗೊಳಿಸಲು ಹೇಳಿದರು.

'ಆಹಾರದ ಹಕ್ಕು', ಬೆಲೆ ಏರಿಕೆ ನಿಯಂತ್ರಣ'ಕ್ಕಾಗಿ ನಡೆಯುವ ಪ್ರಚಾರ ಚಳುವಳಿಯನ್ನು ಯಶಸ್ವಿಗೊಳಿಸಲು, ಎಲ್ಲಾ ರಸ್ತೆಗಳನ್ನು ತುರ್ತು ಸಂಪೂರ್ಣ ದುರಸ್ತಿ ಮಾಡಿ, ಡಾಂಬರೀಕರಣ ಮಾಡಲು ಮತ್ತು ಇ.ಎಸ್.ಐ. ವ್ಯವಸ್ಥೆ ಉತ್ತಮಗೊಳಿಸಲು ಕಂಡ್ಲೂರಿನಲ್ಲಿ ಡಿಸ್ಪೆನ್ಸರಿ ತೆರೆಯಲು ಒತ್ತಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಮುಂದಿನ ವರ್ಷಕ್ಕೆ ಸಂಘ 9 ಮಂದಿ ಪದಾಧಿಕಾರಿಗಳನ್ನು ಹಾಗೂ 62 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಯಿತು. ಸಂಘದ ಅಧ್ಯಕ್ಷರಾಗಿ ವಿ.ನರಸಿಂಹ, ಪ್ರಧಾನ ಕಾರ್ಯದರ್ಶಿಯಾಗಿ ಕೆ.ಶಂಕರ, ಉಪಾಧ್ಯಕ್ಷರಾಗಿ ಪಿ.ವಿಶ್ವನಾಥ ರೈ, ಗೋಪಾಲ ಕುಲಾಲ ಮತ್ತು ಮಹಾಬಲ ವಡೇರಹೋಬಳಿಯವರನ್ನು, ..ರ್ಯದರ್ಶಿಗಳಾಗಿ ರಾಜೀವ ಶೆಟ್ಟಿ, ಕುಂಬಾಶಿ ಗಣೇಶ ಮತ್ತು ಡಿ.ಲಕ್ಷ್ಮಣ ಇವರನ್ನು ಹಾಗೂ ಕೋಶಾಧಿಕಾರಿಯಾಗಿ ಎಚ್.ನರಸಿಂಹರವರನ್ನು ಆಯ್ಕೆ ಮಾಡಲಾಯಿತು.

ನವೆಂಬರ್ 15,16 ರಂದು ನಡೆಯುವ ಸಿಐಟಿಯು ಜಿಲ್ಲಾ ಸಮ್ಮೇಳನಕ್ಕೆ 34 ಪ್ರತಿನಿಧಿಗಳನ್ನು ಆರಿಸಲಾಯಿತು. ಅಧ್ಯಕ್ಷತೆ ವಹಿಸಿದ ವಿ.ನರಸಿಂಹರವರು ಮಾತನಾಡಿ ಕಾರ್ಮಿಕರು ಮುಂಚಿಗಿಂತ ಹೆಚ್ಚು ಸಂಘಟನೆಯನ್ನು ಬಲಗೊಳಿಸಲು ಶಿಸ್ತಿನ ಹೋರಾಟ, ಕಾರ್ಖಾನೆಗಳಲ್ಲಿ ಬರುವ ವಿವಾದಗಳ ಇತ್ಯರ್ಥಕ್ಕಾಗಿ ಹಾಗೂ ಸಿಐಟಿಯು ನ ಎಲ್ಲಾ ಹೋರಾಟದ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ನಿಂತು ನೇತೃತ್ವ ಕೊಡಬೇಕೆಂದರು.

ಕೊನೆಯಲ್ಲಿ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕುಂಭಾಶಿ ಗಣೇಶ್ ಇವರು ಎಲ್ಲರಿಗೂ ಧನ್ಯವಾದವನ್ನು ಅರ್ಪಿಸಿದರು.

ಾಂ

ಸೂರ

ನಿತ್ಯ ನುಡಿವನು ಬಲುಸೂರ
ಭರವಸೆಯ ಮಹಾಪೂರ
ಸಿಗಲಿಲ್ಲ ಇನ್ನು ತುತ್ತು
ಕಾಯುವುದು ಇನ್ನೆಷ್ಟು ಹೊತ್ತು

ಸಿಗಲಿಲ್ಲ ನಮಗೆ ಸೂರು
ಸರ್ಕಾರದ್ದು ಬರೀ ಕಾರುಬಾರು
ಇನ್ನಾದರೂ ನಿಲ್ಲಿಸಿ ಜನರ ಗೋಳ
ಇಲ್ಲದಿದ್ದರೆ ಏರಿಸುವರು ಜನರು ತೋಳ

■ ಎನ್.ಎಲ್.ಭರತ್‌ರಾಜ್

ಪ್ರವಾಹದ ಪರಿಣಾಮ : 'ಋಣಬಾಧೆ ರೈತರ ಆತ್ಮಹತ್ಯೆಯನ್ನು ಹೆಚ್ಚಿಸಿದೆ'

ರೆ ಹಾವಳಿಯಿಂದ ಬದುಕನ್ನು ಕಳೆದುಕೊಂಡ ರೈತರಿಗೆ ಸಮರ್ಪಕ ಪರಿಹಾರ ೂರೆಯದೆ ಹತಾಶರಾಗಿ ಆತ್ಮಹತ್ಯೆ ಹಾದಿ ಹಿಡಿದ ಸಂದರ್ಭದಲ್ಲಿ ತರಲ್ಲಿ ಆತ್ಮಸ್ಥೈರ್ಯ ತುಂಬುವ ಹಿನ್ನೆಲೆಯಲ್ಲಿ ಬಳ್ಳಾರಿ ಲ್ಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ಪಾದಯಾತ್ರೆ ಡೆಸಲಾಯಿತು. ಈ ಸಂದರ್ಭಧಲ್ಲಿ ರೈತಸಂಘದ ುಖಂಡರಾದ ಯು.ವಸವರಾಜ್ ರವರನ್ನು ನಶಕ್ತಿ'ಗಾಗಿ ಸಂದರ್ಶನ ಮಾಡಲಾಯಿತು.



ಯು.ಬಸವರಾಜು

ಶಕ್ತಿ : ರೈತರ ಪಾದಯಾತ್ರೆಯನ್ನು ವುದಕ್ಕೋಸ್ಕರ ಮಾಡಬೇಕಾಗಿದೆ.

ಯು.ಬಸವರಾಜ್ : ನೆರೆ ಹಾವಳಿ ಮತ್ತು ಾಹದಿಂದ ಜನ ನಲುಗಿಹೋಗಿದ್ದಾರೆ. ುಗಡೆಯಾದ ಗ್ರಾಮಸ್ಥರಿಗೆ ರಾಜ್ಯದ ಜನರಿಂದ ಪ್ರಮಾಣದಲ್ಲಿ ಸಹಾಯ ದೊರೆಯಿತು. ಇದು ಸ್ಥರಲ್ಲಿ ಆತ್ಮಸ್ಥೈರ್ಯ ಮೂಡಿಸಿತು. ಆದರೆ ಸರಕಾರ ಂಡ ಪರಿಹಾರದ ಕ್ರಮಗಳು ಸಮರ್ಪಕವಾಗಿ ತ್ರಸ್ಥರನ್ನು ತಲುಪಲಿಲ್ಲ. ಸಂತ್ರಸ್ಥರು ಕಳೆದುಕೊಂಡ ುಕಿಗೆ ಭರವಸೆ ಮೂಡಿಸಲಿಲ್ಲ. ದೊಡ್ಡ ಮಾಣದಲ್ಲಿ ಬೆಳೆ ನಾಶವಾಗಿದ್ದು, ಪರಿಹಾರ ುರೆಯಲಿಲ್ಲ. ಸರ್ಕಾರದ ಮೇಲೆ ಜನರಿಗೆ ವಿಶ್ವಾಸವೇ ಇಲ್ಲದಂತಾಯಿತು. ಜನರು ಪುನ: ಾಶರಾದರು. ಈ ಕಾರಣದಿಂದ ಬಳ್ಳಾರಿ ್ಲೆಯಲ್ಲಿ ಆರು ಜನ ರೈತರು ಆತ್ಮಹತ್ಯೆ ಾಡಿಕೊಂಡಿದ್ದಾರೆ. ಆತ್ಮಹತ್ಯೆ ಡಿಕೊಂಡವರೆಲ್ಲವರೂ ಗೇಣಿದಾರರಾಗಿದ್ದಾರೆ. ರೂ ಈ ಬಗ್ಗೆ ಸರ್ಕಾರ ಗಂಭೀರವಾಗಿ ೋಚಿಸುತ್ತಿಲ್ಲ. ರಾಜ್ಯದಲ್ಲಿ ಪ್ರವಾಹದ ನಂತರ ಪಕವಾಗಿ ಜನ ರೈತರು ಆತ್ಮಹತ್ಯೆ ಡಿಕೊಂಡಿದ್ದಾರೆ. ಈ ಪ್ರಶ್ನೆಯನ್ನು ಎತ್ತಿಕೊಂಡು ಾರದ ಗಮನ ಸೆಳೆಯುವುದು ಹಾಗೂ ಆತ್ಮಸ್ಥೈರ್ಯ ಬಿ ಹೋರಾಟಕ್ಕೆ ಅಣಿನೆರೆಸುವ ಸಂದೇಶ ಹೊತ್ತು ಜಾಥಾವನ್ನು ನಡೆಸಲಾಗುತ್ತಿದೆ.

ಶಕ್ತಿ : ಪಾದಯಾತ್ರೆ ಎಲ್ಲಿಂದ ಂಭವಾಗಿ ಎಲ್ಲಿಗೆ ಮುಕ್ತಾಯವಾಯಿತು. ದಯಾತ್ರೆಯ ಅನುಭವಗಳೇನು?

.ಬಸವರಾಜ್ : ಕರ್ನಾಟಕ ಪ್ರಾಂತ ರೈತ ಘದ ಬಳ್ಳಾರಿ ಜಿಲ್ಲಾ, ಸಮಿತಿ ಮತ್ತು ಸಿರುಗುಪ್ಪ ತಾಲ್ಲೂಕು ಸಮಿತಿಗಳ ನೇತೃತ್ವದಲ್ಲಿ ಪಾದಯಾತ್ರೆಯನ್ನು ನಡೆಸಲಾಯಿತು. ಆತ್ಮಹತ್ಯೆ ಮಾಡಿಕೊಂಡ ಅರಳಿಗನೂರಿನ ದಲಿತ ಗೇಣಿದಾರ ವೀರೇಶಪ್ಪನ ಮನೆಯಿಂದ ಆರಂಭವಾಗಿ ಸಿರುಗುಪ್ಪ ಕೋಳೂರು ಮಾರ್ಗವಾಗಿ ಎರಡು ದಿನಗಳ ಕಾಲ ಜಾಥಾ ನಡೆಯಿತು. ದಾರಿಯುದ್ದಕ್ಕೂ ಕಂಡದ್ದೇನೆಂದರೆ, ಹಾಳಾದ ಬೆಳೆ, ಬಿದ್ದುಹೋದ ಮನೆ, ಬಾಡಿಹೋದ ರೈತರ ಮುಖಗಳು, ಹಲವಾರು ಗ್ರಾಮಗಳಲ್ಲಿ ಬಹಿರಂಗ ಸಭೆ ನಡೆಸಿ, ಸಾಲಮನ್ನಾ (ಖಾಸಗಿ ಸಾಲ ಸಹ) ಮಾಡಬೇಕು ಎಂದು ಹೇಳಿದಾಗ ರೈತರ ಮುಖದಲ್ಲಿ ಹೊಸ ಮಂದಹಾಸ ಮೂಡುತ್ತಿತ್ತು. ಎಲ್ಲರ ಅಭಿಪ್ರಾಯವೂ ಇದೇ ಆಗಿತ್ತು. ಭಾರೀ ಚಪ್ಪಾಳೆ ಮೂಲಕ ಸಮ್ಮತಿ ಸೂಚಿತವಾಗುತ್ತಿತ್ತು. ಅದು ರೈತರ ಅಭಿಪ್ರಾಯವೂ ಆಗಿತ್ತು. ಹೊಸ ಬದುಕನ್ನು ಕಟ್ಟಿ ಕೊಡುವ ಬೇಡಿಕೆ ಇದಾಗಿದ್ದು. ಒಳ್ಳೆಯ ಸ್ಪಂದನವೂ ದೊರೆಯಿತು. ಆರಂಭದಲ್ಲಿ 65 ಜನ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದು, ದಾರಿಯುದ್ದಕ್ಕೂ ಜನ ಸೇರಿಕೊಳ್ಳುತ್ತಿದ್ದರು. ಬಳ್ಳಾರಿ ತಲುಪಿದಾಗ 400 ಜನರಾಗಿದ್ದರು. ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಜಾಥಾದಲ್ಲಿ ಭಾಗವಹಿಸಿ ಜನರಿಗೆ ಸ್ಫೂರ್ತಿ ನೀಡಿದರು. ಬೇಡಿಕೆಯ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಯಿತು.

ಜನಶಕ್ತಿ : ಗೇಣಿದಾರರೇ ಯಾಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಯು.ಬಸವರಾಜ : ಜಾಗತೀಕರಣದ ಭಾಗವಾಗಿ ಭಾರತದ ಕೃಷಿ ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ. ಯಂತ್ರಗಳ ಬಳಕೆಯಿಂದ ಕೂಲಿಯ ಸಮಸ್ಯೆ ಎದುರಾಗಿದೆ. ಈ ಹಿಂದೆ ಬೇಸಿಗೆ ಕಾಲದಲ್ಲಿ ಮಾತ್ರ ಗುಳೇ ಹೋಗುತ್ತಿದ್ದವರು ಈಗ ವರ್ಷದ ಹನ್ನೆರಡು ತಿಂಗಳೂ ಗುಳೇ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಿಂದೆ ಮಳೆಯಾಧಾರಿತ ಪ್ರದೇಶದಿಂದ ನೀರಾವರಿ ಪ್ರದೇಶಕ್ಕೆ ಅಥವಾ ಕಾಫಿ ಸೀಮೆಗೆ ಗುಳೇ ಹೋಗುತ್ತಿದ್ದರು. ಆದರೆ, ಇಂದು ಯಂತ್ರಗಳ ಬಳಕೆಯಿಂದ ನೀರಾವರಿ ಪ್ರದೇಶದಲ್ಲಿಯೂ ಕೂಲಿ ದೊರೆಯುತ್ತಿಲ್ಲ. ಕಾಫಿ ಸೀಮೆ ಮತ್ತು ಬೆಂಗಳೂರಿನಂತಹ ಬೃಹತ್ ನಗರಗಳಲ್ಲಿಯೂ



ಕೂಲಿಕಾರರಿಗೆ ಕೂಲಿ ದೊರೆಯುತ್ತಿಲ್ಲ. ಹಾಗಾಗಿ ಬಹಳಷ್ಟು ಜನ ಕೂಲಿಕಾರರು ಗೇಣಿದಾರರಾಗಿ ಪರಿವರ್ತನೆಯಾಗಿದ್ದಾರೆ. ಲಾಭವಿಲ್ಲ ತಮ್ಮ ಕುಟುಂಬಕ್ಕೆ ಕನಿಷ್ಠ ಕೂಲಿಯಾದರೂ ದೊರೆಯುತ್ತಿದೆ ಎಂಬ ಕಾರಣಕ್ಕೆ ಗೇಣಿದಾರರಾಗಿ ದುಡಿಯುತ್ತಿದ್ದಾರೆ. ಗೇಣಿದಾರರು ಎದುರಿಸುತ್ತಿರುವ ಮುಖ್ಯ ಸಮಸ್ಯೆ ಏನೆಂದರೆ ಈ ಮೊದಲು ಭೂಮಾಲಿಕರು ಅಗತ್ಯವಿರುವ ಬೀಜ, ಗೊಬ್ಬರ ಕೊಡಿಸುತ್ತಿದ್ದರು, ಸಾಲವನ್ನು ಸಹ ಕೊಡಿಸುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಗೇಣಿದಾರರು ಹೊರಗಿನಿಂದ ಸಾಲ ತರಬೇಕಾಗಿದೆ. ಮೊದಲು ಬೆಳೆ ಸಾಲಕ್ಕೆ ಹೋದರೆ ಎರಡನೇ ಬೆಳೆಯಲ್ಲಿ ಅಲ್ಪಸ್ವಲ್ಪ ಲಾಭ (ಕೂಲಿ) ಗೇಣಿದಾರನಿಗೆ ಉಳಿಯುತ್ತದೆ. ಆದರೆ ಈ ಬಾರಿ ಬರಬಿದ್ದು ಮುಂಗಾರು ಬೆಳೆ ಹಾಳಾಗಿದ್ದರೆ ನೆರೆಹಾವಳಿಯಿಂದ ಎರಡನೇ ಬೆಳೆಯೂ ಕೊಚ್ಚಿ ಹೋಗಿದ್ದು ಗೇಣಿದಾರರು ಸಂಪೂರ್ಣ ನಷ್ಟ ಅನುಭವಿಸುತ್ತಿದ್ದಾರೆ. ಹೀಗಾಗಿ ಹತಾಶರಾದ ಗೇಣಿದಾರರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಜಾಗತೀಕರಣದ ನೀತಿಗಳಿಂದಾಗಿ ಮಧ್ಯಮ ರೈತರು ಕೂಡಾ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಜನಶಕ್ತಿ : ಖಾಸಗಿ ಸಾಲ ಮನ್ನಾ ಮಾಡುವುದು ಹೇಗೆ?

ಯು.ಬಸವರಾಜ್ : ಕೇರಳದಲ್ಲಿ ಈ ಹಿಂದೆ ಕಾಂಗ್ರೆ ನೇತೃತ್ವದ ಯು.ಡಿ.ಎಫ್. ಸರ್ಕಾರ ಅಧಿಕಾರದಲ್ಲಿದ್ದಾಗ ಅದರ ಜನವಿರೋಧಿ ನೀತಿಯಿಂದಾಗಿ ದೊಡ್ಡ ಪ್ರಮಾಣದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರು. ಆಗ ದೊಡ್ಡ ಪ್ರಮಾಣದಲ್ಲಿ ರೈತ ಹೋರಾಟಗಳು ಸಹ ನಡೆದವು ನಂತರ ಅಧಿಕಾರಕ್ಕೆ ಬಂದ ಎಲ್.ಡಿ.ಎಫ್ ಸರ್ಕಾರ ಋಣಮುಕ್ತ ಕಾಯ್ದೆಯನ್ನು ಜಾರಿಗೊಳಿಸಿತು. ಇದಕ್ಕಾಗಿ ಇದನ್ನು ಅನುಷ್ಠಾನಗೊಳಿಸಲು ಆಯೋಗ ಒಂದನ್ನು ಸಹ ನೇಮಿಸಿತು. ಖಾಸಗೀ ಸಾಲದಿಂದ ಸಂಕಷ್ಟಕ್ಕೀಡಾದ ರೈತರು ಈ ಆಯೋಗಕ್ಕೆ ಮನವಿ ಸಲ್ಲಿಸುವ ಅವಕಾಶ ಪಡೆದರು. ರೈತರ ಇಂತಹ ಮನವಿಗಳನ್ನು ಸ್ವೀಕರಿಸಿದ ಆಯೋಗ ಪರಿಶೀಲನೆ ನಡೆಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ಸರ್ಕಾರ ಹಣ ಬಿಡುಗಡೆ ಮಾಡುವ ವ್ಯವಸ್ಥೆ ಕೇರಳದಲ್ಲಿ ಚಾಲ್ತಿಯಲ್ಲಿದೆ. ಕೇರಳ ಮಾದರಿಯ ಈ ಋಣಮುಕ್ತ ಕಾಯ್ದೆಯನ್ನು ಕರ್ನಾಟಕ ಸರ್ಕಾರವೂ ಸಹ ಜಾರಿಗೊಳಿಸಬೇಕೆಂದು ಪ್ರಾಂತ ರೈತ ಸಂಘ ಸರ್ಕಾರವನ್ನು ಒತ್ತಾಯಿಸುತ್ತಿದೆ. ಈ ಮೂಲಕ ರೈತರ ಖಾಸಗೀ ಸಾಲವನ್ನು ಮನ್ನಾ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕೆಂದು ಆಗ್ರಹಿಸುತ್ತದೆ.

ಸಂದರ್ಶಕರು : **ಚನ್ನಬಸಪ್ಪ**



ನೆರೆ ಸಂತ್ರಸ್ತರಿಗೆ ಸಹಾಯ

ಇತ್ತೀಚೆಗೆ ರಾಯಚೂರು ತಾಲೂಕಿ ನೆರೆ ಪೀಡಿತ ಸಂತ್ರಸ್ತರಿಗೆ ವಿಪ್ರೋ ಕಾರ್ಮಿಕ ಸಂಘ ಸಿಐಟಿಯು ಸಂಯೋಜಿತ ಬೆಂಗಳೂರು ಮತ್ತು ಕರ್ನಾಟಕ ಪ್ರಾಂತ ರೈತ ಸಂಘ, ರಾಯಚೂರು ತಾಲ್ಲೂಕು ಸಮಿತಿ ಆಶ್ರಯದಲ್ಲಿ ಹೆಗಸಹಳ್ಳಿ ಗ್ರಾಮ ನೆರೆ ಪೀಡಿತ ಸಂತ್ರಸ್ತರಿಗೆ 300 ಕುಟುಂಬಗಳಿಗೆ 1ಸೀರೆ, ಕುಬುಸ, ಲುಂಗಿ ಮತ್ತು ಟವಲ್ ಒಳಗೊಂಡಂತೆ ಬಟ್ಟೆಗಳನ್ನು ಹಂಚಲಾಗಿದೆ. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಕಾಂ. ಮಾರುತಿಮಾನ್ಪಡೆ, ವಿಪ್ರೊ ಕಾರ್ಮಿಕ ಸಂಘದ ಅಧ್ಯಕ್ಷರಾದ ಟಿ.ಜಡಾರ್, ಉಪಾಧ್ಯಕ್ಷರಾದ ಮುನಿರಾಜ್ ಮತ್ತು ಸಹ ಕಾರ್ಯದರ್ಶಿಗಳಾದ ಶಶಿಕುಮಾರ, ರಾಯಚೂರಿನ ರೈತ ಸಂಘದ ತಾಲ್ಲೂಕು ಸಂಚಾಲಕರಾದ ಕೆ.ಜಿ.ವಿರೇಶ, ಡಿ.ಎಸ್.ಶರಣಬಸವ, ಎಐಐಇಎ ರಾಯಚೂರು ವಿಭಾಗೀಯ ಅಧ್ಯಕ್ಷರಾದ ಎಂ.ಶರಣಗೌಡ, ಸಿಐಟಿಯು ಮುಖಂಡರಾದ ಹೆಚ್.ಪದ್ಮಾ ಜಿ.ಎಸ್.ವೀರಭದ್ರ, ಟಿ.ಲಕ್ಷ್ಮೀರೆಡ್ಡಿ, ನಾಗೇಂದ್ರ ಶಾಖವಾದಿ, ಜಿ.ವಿ.ಗೋಪಾಲ ನಾಯಕ, ಕಲ್ಯಾಣಿ, ಪಾರ್ವತಿ ಮುಂತಾದವರು ಭಾಗವಹಿಸಿದರು.

ಆಹಾರದ ಹಕ್ಕಿಗಾಗಿ ಆಂದೋಲನ

ದಲಿತ ಹಾಸ್ಟೆಲ್ ವಿದ್ಯಾರ್ಥಿಗಳು ಮತ್ತು ಕಾಡುವ ಹಸಿವು

ಬಿ.ರಾಜಶೇಖರಮೂರ್ತಿ

ದಲಿತರು - ದಲಿತ ವಿದ್ಯಾರ್ಥಿಗಳ ಅಭಿವೃದ್ಧಿಯೇ ನಮ್ಮ ಮೂಲಮಂತ್ರವೆಂದು ದೀರ್ಘ ಅಧಿಕಾರ ಅನುಭವಿಸಿದ ಕಾಂಗ್ರೆಸ್ ದಲಿತರಿಗೆ ಸಾಮಾಜಿಕ ಭದ್ರತೆ ಒದಗಿಸುವುದೇ ನಮ್ಮ ಧ್ಯೇಯ ಎಂದಿದ್ದ ಜಾತ್ಯಾತೀತ ಜನತಾದಳ ಹಾಗೂ ದಲಿತರ ಭವಿಷ್ಯವನ್ನು ಪುರಾತನ ಕಾಲದಿಂದಲೂ ವರ್ಣಭೇದದ, ಶ್ರೇಣೀಕೃತವಾದದ ಮುಖಾಂತರ ಭಗ್ನಗೊಳಿಸುತ್ತಿರುವ ಪಟ್ಟಭದ್ರರ ರಕ್ಷಣೆಗೆ ನಿಂತಿರುವ ಬಿಜೆಪಿಯಾಗಲೀ ದಲಿತರ ಉದ್ದಾರಕ್ಕೆಂದು ಮತಗಳಿಸಲೆಂದೇ ಯೋಜಿಸುವ ಯೋಜನೆಗಳು ಸಹ ದಲಿತರಿಗೆ ಎಟುಕದಂತೆ ನೋಡಿಕೊಂಡು ಬಂದಿರುವುದಕ್ಕೆ ದಲಿತ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಪಡೆಯಲು ಪಡುವ ಬವಣೆಯೇ ಸಾಕ್ಷಿಯಾಗಿದೆ.

ಹೆಚ್ಚದ ವಿದ್ಯಾರ್ಥಿ ವೇತನ

1970 ರ ಅಸುಪಾಸಿನಲ್ಲಿ ದಲಿತರ ಏಳ್ಗೆಗಾಗಿ ದಲಿತ - ಹಿಂದುಳಿದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆಂದು ವಿದ್ಯಾರ್ಥಿನಿಲಯಗಳ ಹೆಚ್ಚಳ ಹಾಗೂ ಎಲ್ಲಾ ಹಂತದಲ್ಲೂ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಚಳುವಳಿಯ ಒತ್ತಡದಿಂದ ಆಗಿನ ಸರ್ಕಾರ ಮುಂದಾಗಿತ್ತು. ಅಂದು 1ನೇ ತರಗತಿಯಿಂದ 7ನೇ ತರಗತಿಯವರಿಗೆ ರೂ. 75 ನಿಗದಿಯಾಗಿತ್ತು. ಹೈಸ್ಕೂಲ್ ವಿದ್ಯಾರ್ಥಿಗಳಿಗೆ ರೂ. 100 ಪದವಿಪೂರ್ವ ವಿದ್ಯಾರ್ಥಿಗಳಿಗೆ ರೂ. 750. ಈಗ ಪದವಿ ವಿದ್ಯಾರ್ಥಿಗಳಿಗೆ ರೂ. 1850 ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ. 3,600 ರೂಪಾಯಿ ವಿದ್ಯಾರ್ಥಿ ವೇತನ ಇದೆ. ವರ್ಷಗಳಿಂದೀಚೆಗೆ ಕೇವಲ ಪ್ರಾಥಮಿಕ-ಮಾಧ್ಯಮ ಮತ್ತು ಹೈಸ್ಕೂಲ್ ವಿದ್ಯಾರ್ಥಿನಿಯರಿಗೆ ತಲಾ 250 ಹಾಗೂ ರೂ. 500 ಕ್ಕೆ ಏರಿಸಲಾಗಿದೆ ಹೊರತು ಉಳಿದಂತೆ ದಲಿತ ವಿದ್ಯಾರ್ಥಿಗಳ ವೇತನ ಹೆಚ್ಚಿಸಿಲ್ಲ. ಬದಲಾಗಿ ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ವಿದ್ಯಾರ್ಥಿ ವೇತನ ನೀಡುತ್ತಿಲ್ಲ. ಬಹುತೇಕ ವಿದ್ಯಾರ್ಥಿಗಳಿಗೆ ನಮ್ಮ ವಿದ್ಯಾರ್ಥಿ ವೇತನವೆಷ್ಟು ಎಂಬ ಅರಿವೇ ಇಲ್ಲದಂತೆ ನೋಡಿಕೊಳ್ಳಲಾಗುತ್ತಿದೆ. ಸರ್ಕಾರಿ ಖಾಸಗಿ ಶಾಲೆ-ಕಾಲೇಜುಗಳಲ್ಲಿ ಬದುಕುತ್ತಿರುವ ದಲಿತ - ಹಿಂದುಳಿದ ವಿದ್ಯಾರ್ಥಿಗಳ ದಾಖಲಾತಿಗೆ ಅನುಗುಣವಾಗಿ ಪ್ರತಿ ಶೈಕ್ಷಣಿಕ ವರ್ಷದಲ್ಲೇ ವಿದ್ಯಾರ್ಥಿ - ವೇತನವನ್ನು ಬಿಡುಗಡೆ ಮಾಡುವುದಿಲ್ಲವೆಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ - ವೃತ್ತಿಪರ ಕೋರ್ಸುಗಳಿಗೆ ಸರ್ಕಾರಿ ಕೋಟಾದ ಸೀಟುಗಳನ್ನು ಪಡೆದು ಖಾಸಗಿ ಕಾಲೇಜುಗಳಲ್ಲಿ ವೈದ್ಯಕೀಯ - ಇಂಜಿನಿಯರ್ ಅಭ್ಯಾಸ ಮಾಡುತ್ತಿರುವರಿಗೆ 3-4 ವರ್ಷದ ವಿದ್ಯಾರ್ಥಿವೇತನವನ್ನು ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ. ಇನ್ನೂ ಪ್ರೈಮರಿಯಿಂದ ಸ್ನಾತಕೋತ್ತರ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನ ಕೈಗೆಟುಕುವುದು ಅಳಿದುಳಿದ ಹಣ ದಾಖಲಾತಿಗಳಿಗೆ ಸಹಿ ಮಾಡಿಕೊಳ್ಳಲು ಮಾತ್ರ.

ಬೆಲೆ ಏರಿಕೆ ಬಾಧೆ

ಇಂದು ಶಿಕ್ಷಣ ವ್ಯಾಪಾರ ಮಾಡುತ್ತಿರುವ ಸಂದರ್ಭದಲ್ಲಿ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲೂ ಶುಲ್ಕ

ದಲಿತ - ಹಿಂದುಳಿದ ಅವಕಾಶ ವಂಚಿತ ವಿದ್ಯಾರ್ಥಿ ವಿಭಾಗಗಳ ಹಸಿವು ಶಿಕ್ಷಣಕ್ಕೆ ಅಡ್ಡಿಯಾಗಬಾರದೆಂಬ ಉದ್ದೇಶದೊಂದಿಗೆ ಆರಂಭಿಸಲಾಗಿದೆ ಎನ್ನಲಾಗುವ ಹಾಸ್ಟೆಲ್‌ಗಳಲ್ಲೂ ವಿದ್ಯಾರ್ಥಿಗಳನ್ನು ಹಸಿವು ಕಾಡುತ್ತದೆ. ಇದು ಜಾಗತೀಕರಣದ ಯುಗದಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ಅಪ್ಪಿಕೊಂಡ ನೀತಿಯ ಫಲ.

ಏರಿಕೆ, ಡೊನೇಷನ್ ಹಾವಳಿ, ಪಠ್ಯಗಳ ಬೆಲೆ ಏರಿಕೆ, ನೋಟ್ಸ್ ಪುಸ್ತಕ 100 ಪೇಜಿಗೆ ಕನಿಷ್ಟ 20-25 ರೂಪಾಯಿ ಆಗಿದೆ. ಕನಿಷ್ಟ ಗುಣಮಟ್ಟದ ಪೆನ್ ಆಗಲಿ, ಪೆನ್‌ಸಿಲ್ ಆಗಲೀ ಕನಿಷ್ಟ ರೂ. 10 ಕೊಟ್ಟು ಕೊಟ್ಟಬೇಕಿದೆ. ಇಂತಹ ಸಂದರ್ಭದಲ್ಲಿ ದಲಿತ ಪ್ರೈಮರಿ ವಿದ್ಯಾರ್ಥಿಗಳಿಗೆ ರೂ.75 ವಿದ್ಯಾರ್ಥಿ ವೇತನ ಸಾಲುತ್ತದೆಯೇ? ಮುಖ್ಯವಾಗಿ ಈ ಹಣ ಬಡ ದಲಿತ ನಿರ್ಗತಿಕರಿಗೆ ತಲುಪುತ್ತದೆಯೇ ಎಂದು ಐದಾರು ಶಾಲೆಗಳ ಬಡ ದಲಿತ ವಿದ್ಯಾರ್ಥಿಗಳ ಸ್ಥಿತಿ



ಪರಿಶೀಲಿಸಿದಾಗ ನಮಗೆ ಯಾವುದೇ ರೀತಿಯ ವಿದ್ಯಾರ್ಥಿ ವೇತನವನ್ನು ನಮ್ಮ ಮೇಷ್ಟ್ರು ನೀಡುತ್ತಿಲ್ಲವೆಂದೇ ಮಕ್ಕಳು ಹೇಳುತ್ತಾರೆ. ಇನ್ನೂ ಪದವಿಪೂರ್ವ ಮತ್ತು ಪದವಿ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನು ನಿಮ್ಮ ಪ್ರವೇಶ ಶುಲ್ಕಕ್ಕೆ, ನಿಮ್ಮ ಪರೀಕ್ಷಾ ಶುಲ್ಕಕ್ಕೆ ಜಮಾ ಆಗಿದೆ. ಉಳಿದಿದ್ದು 500-600 ಬೇಕಾದರೆ ಪಡೆಯಿರಿಎಂದು ಶೈಕ್ಷಣಿಕ ವರ್ಷ ಮುಗಿದು ಮುಂದಿನ ಅಭ್ಯಾಸಕ್ಕೋ ಅಥವಾ ಓದಲಾಗದೆ ಕೈಬಿಟ್ಟ ಸಂದರ್ಭದಲ್ಲಿ ಕೇಳಿದರೆ ಮಾತ್ರ ನೀಡುವ ಪ್ರವೃತ್ತಿ ಇಡೀ ರಾಜ್ಯದ ಸರ್ಕಾರಿ-ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಪಕವಾಗಿದೆ.

ಅರೆಹೊಟ್ಟೆಗೂ ಅನ್ನ ನೀಡದವರು

ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಊಟದ ಭತ್ಯೆ ಎಂದು ನೀಡುವ ಹಣ ತೀರಾ ಕಡಿಮೆ. ಆದರೆ ಹಿಂದೆ ಈ ಹಾಸ್ಟೆಲ್‌ಗಳಿಗೆ ಆಹಾರವನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಬಿಪಿಎಲ್ ಕಾರ್ಡ್‌ಗೆ ನೀಡುವ ದರದಲ್ಲಿ ಖರೀದಿಸಲು ಅವಕಾಶ ಮಾಡಿಕೊಟ್ಟಿದ್ದರಿಂದ ತಕ್ಕಮಟ್ಟಿಗೆ ಆಹಾರ ಖರೀದಿಸಲು ಸಾಧ್ಯವಾಗುತ್ತಿತ್ತು. ನಿಯಮಗಳಲ್ಲಿ ಈಗಲೂ ಅದಕ್ಕೆ ಅವಕಾಶ ಇದೆ. ಆದರೆ ಈಗ ನ್ಯಾಯಬೆಲೆ ಅಂಗಡಿಯಲ್ಲಿ ಆಹಾರ ಖರೀದಿಸಲು ಬಿಡುತ್ತಿಲ್ಲ. ಅದರಿಂದಾಗಿ ಮಾರುಕಟ್ಟೆಯ ಅತಿ ದುಬಾರಿ ಬೆಲೆಯಲ್ಲಿ ಆಹಾರ ಧಾನ್ಯ ಖರೀದಿಸಬೇಕಾಗಿದೆ. ಇದರಿಂದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ದೊಡ್ಡ ವಂಚನೆಯಾಗುತ್ತಿದೆ. ಕೇಂದ್ರ ಸರ್ಕಾರ ಈ ಕೋಟಾಗಳಲ್ಲಿ ಪಡಿತರ ಪೂರೈಸಬೇಕಾದ ರಾಜ್ಯ ಸರ್ಕಾರ ಸಂಬಂಧಿಸಿದ ಇಲಾಖೆಯು ಆಹಾರಧಾನ್ಯ ಅಗತ್ಯಗಳ ಕುರಿತು ಅಂದಾಜು ಪಟ್ಟಿ ಸಲ್ಲಿಸಬೇಕು ಹಾಗೂ ಮಾಡದಿರುವುದರಿಂದ ಸಮಸ್ಯೆ ಎದುರಾಗಿದೆ. ಕೇಂದ್ರ ಸರ್ಕಾರಕ್ಕೂ ಇದೆ ಬೇಕಾಗಿದೆ.

ಮುಂದಾದರೂ ಕೂಡಾ ಪಡಿತರ ಚೀಟಿಯ ಮೂಲಕ ಹಾಸ್ಟೆಲ್‌ಗಳಿಗೆ ಆಹಾರ ಖರೀದಿ ಅವಕಾಶ ಆಗಲೇಬೇಕಾಗಿದೆ.

ಹಾಸ್ಟೆಲ್‌ಗಳಲ್ಲಿ ಉಳಿಯಲು ಅವಕಾಶ ಸಿಗದ ಎಷ್ಟೋ ಜನ ವಿದ್ಯಾರ್ಥಿಗಳು ಹೊರಗೆ ಉಳಿಯುತ್ತಾರೆ. ಬಾಡಿಗೆ ಕೊಠಡಿ ಪಡೆದೋ, ನೆಂಟರಮನೆಯಲ್ಲೋ ಇದ್ದು, ಮನೆಯಿಂದಲೇ ಓಡಾಡಿ ಪಡಿಪಾಟಲು ಪಡುತ್ತಾರೆ. ಅಂತಹ ವಿದ್ಯಾರ್ಥಿಗಳಿಗೆ ಅವರು ಹಾಸ್ಟೆಲ್ ಹೊರಗೆ ಇದ್ದರು ಊಟದ ಭತ್ಯೆಯ ಹಣ ಕೊಡಲು ಅವಕಾಶ ಇದೆ. ಆ ಹಣವೂ ಕೂಡಾ ವಿದ್ಯಾರ್ಥಿಗಳಿಗೆ ಈಗ ದೊರಕುತ್ತಿಲ್ಲ. ಇಂತಹ ನೀತಿಗಳು ದಲಿತ ವಿದ್ಯಾರ್ಥಿಗಳ ಸಂಕಷ್ಟಗಳನ್ನು ಹೆಚ್ಚಿಸಿವೆ.

ಕಳೆದ 3 ವರ್ಷಗಳಿಂದ ಮೆಟ್ರಿಕ್ ಪೂರ್ವ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ತಿಂಗಳಿಗೆ ಊಟದ ಭತ್ಯೆ ಕೇವಲ 400, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 450 ಕೊಟ್ಟು ಅರೆ ಹೊಟ್ಟೆಯಲ್ಲೇ ಇರುವಂತೆ ನೋಡಿಕೊಳ್ಳುತ್ತಿದ್ದವು. ಸರ್ಕಾರಗಳಿಗೆ ವಿದ್ಯಾರ್ಥಿ ಸಂಘಟನೆಗಳ ಬಲಿಷ್ಠ ಚಳುವಳಿಯ ಒತ್ತಡದಿಂದ ಈಗ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ರೂ. 600, ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ. 650 ನೀಡಲಾಗುತ್ತಿದೆ. ರೂ. 600 ರೂಪಾಯಿಯನ್ನು 30 ದಿವಸಗಳಿಗೆ ಹಂಚಿದರೆ ದಿನಕ್ಕೆ ರೂ. 20 ಒಟ್ಟು ವಿದ್ಯಾರ್ಥಿಗೆ ಒಂದು ದಿನದ ಊಟಕ್ಕೆಂದು ಮೀಸಲಾಗುತ್ತಿದೆ.

ನಿರ್ಲಕ್ಷ್ಯ

ಇಂದಿನ ಬೆಲೆ ಏರಿಕೆಯ ಸಂದರ್ಭದಲ್ಲಿ ಬೆಳಗಿನ ತಿಂಡಿ-ಕಾಫಿ, ಮಧ್ಯಾಹ್ನ ಊಟ ಹಾಗೂ ರಾತ್ರಿ ಊಟವನ್ನು ಹೇಗೆ ಈ ರೂ. 20 ರಿಂದ ನಿಭಾಯಿಸುವುದು. 100-200 ಹಾಸ್ಟೆಲ್ ವಿದ್ಯಾರ್ಥಿಗಳು ಒಟ್ಟಾಗಿ ಇರುತ್ತಾರೆ. ಒಂದೆಡೆ ಆಹಾರಧಾನ್ಯಗಳನ್ನು ಸಗಟಾಗಿ ಖರೀದಿಸುವುದರಿಂದ ಸಾಕಾಗುತ್ತದೆಂಬ ವಾದವನ್ನು ಸಮಾಜ-ಕಲ್ಯಾಣ ಅಧಿಕಾರಿ ವರ್ಗ ವಾದಿಸುತ್ತಿದ್ದಾರೆ. ಜಾ ಕಿವುಡರಂತೆ ವರ್ತಿಸುವ ಸಿಬ್ಬಂದಿಗೆ ಇಂದು ಒ ಕಾಫಿಗೆ ಕನಿಷ್ಟ 6-7 ರೂಪಾಯಿ ಬೇಕೆನ್ನುವುದ ಮರೆತಿದ್ದಾರೆಯೇ ಅಥವಾ ದಲಿತ ವಿದ್ಯಾರ್ಥಿಗ ಪೂರ್ತಿ ಊಟವೇಕೆ? ಕಾಫಿ-ತಿಂಡಿಯಾಕೆ ತೀರ್ಮಾನಕ್ಕೆ ಬಂದಿದ್ದಾರೆಯೇ?

ಒಂದು ಹೊತ್ತಿಗೂ ಸಾಲದಂತಹ ರೀತಿಯ ಕೊಡುತ್ತಿರುವ ಈ ರೂ. 20 ರಲ್ಲಿ ಸಮಾಜ ಕಲ್ಯಾ ಸಚಿವರಿಂದ ಹಿಡಿದು ವಿದ್ಯಾರ್ಥಿ ನಿಲಯದಲ್ಲಿ ಅ ಮಾಡಿ ಬಡಿಸುವವರವರೆಗೂ ಹರಿದು ಹ ಉಳಿಯುವುದು ನತದೃಷ್ಟ ದಲಿತ ವಿದ್ಯಾರ್ಥಿ ತಟ್ಟೆಯ ಒಂದು ಮುದ್ದೆ, ತಿಳಿಸಾರು, ಒಂದು ಹಿಡಿ ಅ ಇದು ಕೂಡಾ ಶುಚಿ-ರುಚಿ ಇಲ್ಲದ್ದು. ಹೇಗಿದೆ ನೋ ಸರ್ಕಾರಗಳು ದಲಿತ ವಿದ್ಯಾರ್ಥಿಗಳನ್ನು ಸಾಕುತ್ತಿರ ಪರಿ.

ವಿದ್ಯಾರ್ಥಿ ನಿಲಯಗಳ ನಿರ್ವಹಣೆಗಾ ಸ್ವಚ್ಛತೆಗಾಗಿ, ಕುಡಿಯುವ ನೀರಿಗಾಗಿ, ವಿದ್ಯು ಬಿಲ್ಲಿಗಾಗಿ, ಗ್ರಂಥಾಲಯಕ್ಕಾಗಿ, ಕ್ರೀ ಸಾಮಾಗ್ರಿಗಳಿಗಾಗಿ, ನಿಯತಕಾಲಿಕ ಪತ್ರಿಕೆಗ ಟಿ.ವಿ., ಕಂಪ್ಯೂಟರ್ ಹಾಗೂ ರಾತ್ರಿ ಪಾಠ, ಶಾ ಮಕ್ಕಳಿಗೆ ಬಟ್ಟೆ-ಸೋಪು, ಎಣ್ಣೆ ಮುಂತಾದ ಅ ಸೌಕರ್ಯಗಳ ಜೊತೆಗೆ ಶೈಕ್ಷಣಿಕ ವಾತಾವರಣವ ಕಡ್ಡಾಯವಾಗಿ ಖಾತರಿಗೊಳಿಸಬೇಕೆ ನಿಯಮವಿದ್ದರೂ ಇಡೀ ರಾಜ್ಯಾದ್ಯಂತ ಹುಡುಕಿದ ಕನಿಷ್ಟ ಪ್ರಮಾಣದ ಸೌಲಭ್ಯ ಇರುವ ವಿದ್ಯಾ ನಿಲಯಗಳನ್ನು ಕಾಣಲು ಸಾಧ್ಯವೇ ಇ ಕೋಟಿಗಟ್ಟಲೆ ಹಣ ವೆಚ್ಚ ಮಾಡಿ ಪಾರ್ಕುಗಳ ಸೌಂದರ್ಯಗೊಳಿಸುತ್ತಾರೆ. ಆದರೆ ಓದುವ ದ ಮಕ್ಕಳಿಗೆ ಅನ್ನವೂ ಸಹ ಸಿಗದ ನೋಡಿಕೊಳ್ಳಲಾಗುತ್ತದೆ. ಬೆಂಗಳೂ ...ರ್ಡ ಜಿಲ್ಲೆಯಲ್ಲಿರುವ ವಿದ್ಯಾರ್ಥಿ ನಿಲ ಸೇರಿದಂತೆ 600 ಕ್ಕಿಂತ ಹೆ ಅವಶ್ಯವಿದೆ. ಆದರೆ ಈಗಿರುವ ಸಿಬ್ಬಂದಿ ಮಾತ್ರ. ಅಡುಗೆ ಮಾಡ ಸಹಾಯಕರನ್ನು ಸಹ ಗುತ್ತಿಗೆ ಗಂಟೆಗಳ ಕಾಲ ದುಡಿಸಿಕೊಳ್ಳಲ ಕೇವಲ ರೂ. ತಿಂಗಳಿಗೆ 2500 ವಿದ್ಯಾರ್ಥಿಗಳಿರುವ ನಿಲಯಗಳಿ ನಿಲಯವನ್ನು ಸ್ವಚ್ಛಗೊಳಿಸಲು ಅವರಿಗೆ ತಿಂಗಳಿಗೆ ಸಂಬಳ ರ ಬೆಂ.ವಿ.ವಿ. ಕ್ಯಾಂಪಸ್‌ನಲ್ಲಿರು ದುಡಿಯುತ್ತಿರುವ 260 ಸಿಬ್ಬಂದಿ ...ಳಿಗೆ ರು 1500 ಮಾತ್ರ.

ಇಂತಹ ಅಸಮಾನ - ಅವಮಾನಗಳ ಬೇಕೆಂದೇ ಪೋಷಿಸಿಕೊಂಡು ಬರುತ್ತಿರುವ ಸರ್ಕಾರಗಳ ವಿರುದ್ಧ ಇಂತಹ ವ್ಯವಸ್ಥೆಯ ಬದಲಾವಣೆ ಮಾಡುವ ದಾರಿ ಶೋಷಿತರೆಲ್ಲರ ಸಂಘಟಿತರಾಗುವ ದಾರಿಯೇ ಆಗಿದೆ.

ಉಚಲ್ಯಾ

ಇದು ಮರಾಠಿ ಸಾಹಿತಿ ಲಕ್ಷ್ಮಣ ಗಾಯಕವಾಡ್ ಅವರ ಆತ್ಮಕತೆ 'ಉಚಲ್ಯಾ'ದ ಆಯ್ದ ಭಾಗ. ಅಸಮಾನ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕಳ್ಳತನವನ್ನೇ ವೃತ್ತಿಯನ್ನಾಗಿ ಮಾಡಿಕೊಳ್ಳಬೇಕಾಗಿ ಬಂದ ಸಮುದಾಯಕ್ಕೆ ಸೇರಿದ ಲೇಖಕರು 'ಹಸಿವು' ತಮ್ಮನ್ನು, ತಮ್ಮವರನ್ನು ಕಾಡಿದ ಪರಿಯನ್ನು ಇಲ್ಲಿ ಬಿಡಿಸಿಟ್ಟಿದ್ದಾರೆ.

'ನಮಗೂ ಬಡಿಸ್ರಪ್ಪೋ'

ತಾತ್ಯಾ ಮುದುಕನಾಗಿದ್ದರೂ ಬಹಳ ಚಾಣಾಕ್ಷ. ತನ ಕಳ್ಳತನ ಉಳಿದವರಿಗಿಂತ ಭಿನ್ನ. ಅದು ಳ್ಳತನವೆಂದು ಯಾರಿಗೂ ಅನಿಸುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಇಲಿಗಳದ್ದೇ ಸಾಮ್ರಾಜ್ಯ. ನಾನು, ತಾತ್ಯಾ ಲಿ ಹಿಡಿಯುತ್ತಿದ್ದೆವು. ಈ ಇಲಿಗಳನ್ನು ಬಳಸಿ ತಾತ್ಯಾ ಳ್ಳತನ ಮಾಡುತ್ತಿದ್ದ. ನಾವು ಬಲೆಯಿಟ್ಟು ಇಲಿ ಹಿಡಿಯುತ್ತಿದ್ದೆವು. ತಾತ್ಯಾ ಆ ಇಲಿಗಳನ್ನೆಲ್ಲ ಸನಿಹದ ಗೋಧಿ ಹೊಲಕ್ಕೊಯ್ದು ಬಿಟ್ಟು ಬರುತ್ತಿದ್ದ. ಅವು ತೆನೆ ಕತ್ತರಿಸಿ ಬಿಲದಲ್ಲಿ ಸಂಗ್ರಹಿಸುತ್ತಿದ್ದವು. ಸುಗ್ಗಿ ಬಳಿಕ ನಾನು, ತಾತ್ಯಾ ಬಿಲಗಳನ್ನು ಗುದ್ದಲಿಯಿಂದ ಅಗೆದು ಅಲ್ಲಿದ್ದ ಗೋಧಿಗಳನ್ನೆಲ್ಲ ತರುತ್ತಿದ್ದೆವು. ರೈತ ನಮ್ಮನ್ನು ನೋಡಿದರೂ ಸುಮ್ಮನಿರುತ್ತಿದ್ದ. ಕೊನೇಪಕ್ಷ ನ್ನ ಹೊಲದೊಳಗಿದ್ದ ಇಲಿಗಳ ಂ ಖಿ ್ಯ ಯ ಂ ಾ ದ ಂ ಾ ಡಿಮೆಯಾಯಿತಲ್ಲ ಎಂಬುದು ವರ ಸಮಾಧಾನ. ಹಿಡಿದ ಲಿಗಳನ್ನು ತರಗೆಲೆ ಮೇಲೆ ಸುಟ್ಟು ಹೊಟ್ಟೆ ತುಂಬ ತಿಂದ ಬಳಿಕ ಮಿಕ್ಕದ್ದನ್ನು ಮನೆಗೊಯ್ಯುತ್ತಿದ್ದೆವು. ಈ ರೀತಿ ತಾತ್ಯಾ ನಾಲ್ಕು ಗಡಿಗೆಯಷ್ಟು ಗೋಧಿ ಸಂಗ್ರಹಿಸಿದ್ದ.

ನಮ್ಮ ಊರಲ್ಲಿ ಆಷಾಢ, ಶ್ರಾವಣಗಳಲ್ಲಿ ಹೆಚ್ಚು ಳ್ಳತನ ಮಾಡುತ್ತಿದ್ದರು. ನಮ್ಮಲ್ಲಿ ಕೆಲವರು ಕಳ್ಳತನ ಮಾಡಿದರೆ, ಕೆಲವರು ಬೀಸೋ ಕಲ್ಲಿಗೆ ಚಾಣ ಹೊಡೆಯುವ ಕೆಲಸ ಮಾಡುತ್ತಿದ್ದರು. ಎಲ್ಲರೂ ಕೆಲಸಕ್ಕೆ ಹೋದಾಗ ಇಡೀ ಗಲ್ಲಿ ಭಣಭಣವೆನ್ನುತ್ತಿತ್ತು. ಹಿಂದಿರುಗಿದ ಬಳಿಕ ಎಲ್ಲ ಕಡೆ ಗದ್ದಲ ತುಂಬಿರುತ್ತಿತ್ತು. ...ು, ತುಳಸಿರಾಮ, ಸಂಭಾ ಹರಟೆ ಹೊಡೆಯುತ್ತ ಕುಡ್ರುತ್ತಿದ್ದೆವು. ಅವರು ತಾವು ಹೋದ ಸ್ಥಳ, ಅಲ್ಲಿ ...ನ ಮದುವೆಯ ಊಟ, ಹೋಳಿಗೆ ಬಗ್ಗೆ ಸವತ್ತಾಗಿ ವರ್ಣಿಸುತ್ತಿದ್ದರು. ನನಗೆ ಇದನ್ನೆಲ್ಲ ಕೇಳಿ ಬಾಯಲ್ಲಿ ನೀರೂರುತ್ತಿತ್ತು. ಶಾಲೆ ತಪ್ಪಿಸಿ ನನಗೇ ಅವರೊಂದಿಗೆ ಹೋಗುವ ಮನಸ್ಸಾಗಿತ್ತು.

ನಾನು ತುಳಸೀ, ಸಂಭಾ, ನಾರ್ಯಾ, ತುಕ್ಯಾ ...ರಿ ಸನಿಹದಲ್ಲೆಲ್ಲಾದರೂ ಮದುವೆ, ಸಮಾರಾಧನೆ ...ದ್ದರೆ ಊಟಕ್ಕೆ ಹೋಗುತ್ತಿದ್ದೆವು. ಗಂಡಸರು, ಹೆಂಗಸರು, ಮಕ್ಕಳಾದಿಯಾಗಿ ಎಲ್ಲರೂ ಕೈಯಲ್ಲಿ ಪಾತ್ರೆ ಹಿಡಿದು ಐದಾರು ಕೋಸು ನಡೆದು ಹೋಗುತ್ತಿದ್ದೆವು. ಊಟ ಕಡಿಮೆ ...ಡಬೇಕಾದೀತೆಂಬ ಆತಂಕದಿಂದ ನಾವ್ಯಾರೂ ...ರು ಕುಡಿಯುತ್ತಿರಲಿಲ್ಲ. ಹೊಟ್ಟೆ ಬಿರಿಯುವತನಕ ಉಣ್ಣುತ್ತಿದ್ದೆವು.

ಒಮ್ಮೆ ಭುಸನಿ ಪಾಟೀಲರ ಮನೆಗೆ ಹೋಗಿದ್ದೆವು. ಸುತ್ತಮುತ್ತಲಿನ ಊರುಗಳಿಗೆಲ್ಲ ಊಟದ ಆಮಂತ್ರಣವಿತ್ತು. ಬೂಂದಿಯೂಟವಿತ್ತು. ನಾವೂ ಪಂಕ್ತಿಯಲ್ಲಿ ಕುಳಿತೆವು. ಉಂಟು ಅಲ್ಲಲ್ಲಿ ಸುತ್ತಾಡಿ ...ಡನೇ ಬಾರಿ ಮತ್ತೆ ಕುಳಿತೆವು. ಎಲೆ ಮೇಲೆ ...ಸಿದ ಬೂಂದುಲಾಡು ಮೆಲ್ಲಗೆ ಕಿಸಗೆ ಹಾಕಿ ಊಟದ ಬಳಿಕ ಹೊರಗೆ ನಿಂತ ತುಕ್ಯಾನಿಗೆ ತಂದೊಪ್ಪಿಸುತ್ತಿದ್ದೆವು. ಹೀಗೆ ಮೂರ್ನಾಲ್ಕು ಸಲ ಊಟಕ್ಕೆ ಕುಳಿತಂತೆ ಮಾಡಿ ಸಾಕಷ್ಟು ಲಾಡು ಸಂಗ್ರಹಿಸಿದೆವು. ಅಷ್ಟರಲ್ಲಿ ಒಬ್ಬ ವ್ಯಕ್ತಿಗೆ ಸಂಶಯ ಬಂದು, ನನ್ನ ಮೇಲೆ ಕಣ್ಣಿಟ್ಟ, ನಾನು ಪುನಃ ಊಟಕ್ಕೆ ಕುಳಿತೆ. ಅವನು ತಕ್ಷಣ ಬಂದು ಕಿವಿ ಹಿಡಿದು ಎಬ್ಬಿಸಿ,



ಎಲ್ಲರೆದುರಿಗೇ ಕೆನ್ನೆಗೆ ಬಾರಿಸಿ, "ಏ ಹುಡುಗಾ. ಎಲ್ಲಿಯಂವಾ ನೀ? ನಿಮ್ಮಪ್ಪನ ಮದ್ವಿ ಅಂತ ತಿಳ್ದಿಯೇನು? ಎಷ್ಟು ಸಲ ಪಂಕ್ತ್ಯಾಗ ಕೂಡತಿ?" ಎಂದು ಜಬರಿಸಿ ಹೊರಗೆ ದಬ್ಬಿದ. ನನಗೆ ಹೊಡೆತ ಬಿದ್ದದ್ದು ನೋಡಿ ಉಳಿದವರೆಲ್ಲ ಪರಾರಿಯಾಗಿದ್ದರು. ನಾನು ಓಡುತ್ತ, ಅಳುತ್ತ ಅವರನ್ನು ಸೇರಿಕೊಂಡೆ.

ತುಳಸೀರಾಮ ನನ್ನನ್ನು ನೋಡಿ ಬಯ್ದ. 'ಲಕ್ಷ್ಯಾ ನಿನಗ ಇಟಾದರೂ ಬುದ್ಧಿ ಐತಿಲ್ಲೋ? ಒಂದೇ ಕಡೆ ಯಾರೆರ ಕೂಡ್ರತಾರೇನ. ಬೇರೆ ಬೇರೆ ಕಡೆ ಕೂಡ್ರಾಕ ಏನಾಗಿದ್ದ ನಿನಗ?" ನಾವು ಮನೆ ಸಮೀಪ ಬಂದ ಕೂಡಲೇ ನಮ್ಮ ಪಾಲಿನ ಲಾಡು ಹಂಚಿಕೊಂಡೆವು. ನಾನು ತಂದ ಲಾಡು ನೋಡಿ ನಾಯಿಗಳಂತೆ ಎರಗಿದರು. ಲಾಡು ತುಂಬ ರುಚಿಯಾಗಿತ್ತು. ಯಾರೇ ಬಯ್ಯಲಿ, ಹೊಡೆಯಲಿ ಏನೂ ಅನಿಸುತ್ತಿರಲಿಲ್ಲ. ತಿನ್ನಲು ಸಿಕ್ಕರೆ ಸಾಕೆಂದು ಒದ್ದಾಡುತ್ತಿದ್ದೆ.

ನಮ್ಮ ಧನೇಗಾಂವಿನಲ್ಲಿ ನಡೆದ ಸಮಾರಾಧನೆಗೆ ನಾವು ಹೋಗುತ್ತಿದ್ದೆವು. ವಾಡೇದ ಹೊರಗೆ ನಿಂತು 'ನಮಗೂ ಬಡಿಸ್ರಪೋ' ಎಂದು ಜೋರಾಗಿ ಕಿರುಚುತ್ತಿದ್ದೆವು. ನಮ್ಮ ಪಕ್ಕದಲ್ಲಿ ನಿಂತ ನಾಯಿಗಳೂ ಪತ್ರಾವಳಿಗಾಗಿ ಉಂಡೆಸೆದ ಎಲೆ ಕಚ್ಚಾಡುತ್ತಿದ್ದವು. ಒಂದು ಕಡೆ ನಾಯಿಗಳ ಕಿರುಚಾಟ, ಇನ್ನೊಂದು ಕಡೆ ನಮ್ಮ ಒದರಾಟ. ಉಳಿದವರ ಊಟ ಮುಗಿದ ಬಳಿಕ ನಮ್ಮನ್ನು ಸಾಲಾಗಿ ನಿಲ್ಲಿಸಿ ಹೋಳಿಗೆ ತುಂಡು, ಸಾರು, ಎಂಜಲನ್ನ ತಂದು ಹಾಕುತ್ತಿದ್ದರು. ನಾವು ಎಂಜಲು ತಿಂದು ಮತ್ತೆ ಬೇಡಲು ಹೋಗಿ ಬೈಸಿಕೊಳ್ಳುತ್ತಿದ್ದೆವು. ಮದುವೆಯ ಊಟದ ಬೆನ್ನು ಹತ್ತಿ ಆಗಾಗ ಶಾಲೆ ತಪ್ಪಿಸುತ್ತಿದ್ದೆ. ಗುರೂಜಿ ಬೆತ್ತದಿಂದ ಹೊಡೆಯುತ್ತಿದ್ದರು. ಅಂತೂ ಕೊನೆಗೊಮ್ಮೆ ನಾಲ್ಕನೇ ಕ್ಲಾಸಿನ ಪರೀಕ್ಷೆ ಬಂತು. ಪಾಸಾದರೆ ನೌಕರಿ ಸಿಗುತ್ತದೆ ಎಂಬಾಶೆಯಿಂದ ಹಗಲಿರುಳು ಓದುತ್ತಿದ್ದೆ. ಸೋಪಾನ ಕಿಸೆ ಕತ್ತರಿಸುವುದರಲ್ಲಿ ತುಂಬ ನಿಪುಣ. ಅವನ ನಾಲ್ಕನೆಯ ಹೆಂಡತಿ ಪಕ್ಕಾ ಕಳ್ಳಿ. ಆಕೆಯ ಹೆಸರು ಎಲ್ಲವ್ವಾ. ಸೋಪಾನ ನಮ್ಮ ದೂರದ ಸಂಬಂಧಿಕ. ಗಂಡ, ಹೆಂಡರಿಬ್ಬರೂ ಸೇರಿ ಸಾಕಷ್ಟು ಗಳಿಸುತ್ತಿದ್ದರು. ಸೋಪಾನ ಜರಿ ರುಮ್ಹಾಲು, ಉಂಗುರ ಹಾಕಿ ಭರ್ಜರಿಯಾಗಿ ತಿರುಗಾಡುತ್ತಿದ್ದ. ಎಲ್ಲವ್ವಾ ಹೆಂಗಸರ ಕೊರಳಿನ ಕಂಠಿಸರ, ಬೋರಮಾಳ, ಮಂಗಳಸೂತ್ರ ಕದಿಯುತ್ತಿದ್ದಳು. ಆಕೆ ಹಲ್ಲಿನಿಂದಲೇ ಆಭರಣ ಕಡಿಯುವಷ್ಟು ಚಾಣಾಕ್ಷೆ. ಒಮ್ಮೆ ಕಳ್ಳತನಕ್ಕೆ ಹೊರಟರೆ ಎರಡೆರಡು ತೊಲೆ ಬಂಗಾರ ಸಂಪಾದಿಸುವಷ್ಟು ಚಾಲಾಕು ಹೆಣ್ಣು. ಈ ಕಡೆ ಬಂದಾಗಲೆಲ್ಲ ನಮ್ಮಲ್ಲೇ ಠಿಕಾಣಿ ಹೂಡುತ್ತಿದ್ದಳು. ಕದ್ದ ಮಾಲು ಪೊಲೀಸರಿಗೆ ಗೊತ್ತಾಗದಂತೆ ನಮ್ಮೂರಲ್ಲಿ ಮಾರುತ್ತಿದ್ದಳು.

ನನ್ನ ಪರದಾಟ ಹೇಳುವ ಹಾಗಿಲ್ಲ. ಮನೆಯಲ್ಲಿ ನಾನೊಬ್ಬನೆ. ತಿನ್ನಲು ಏನೂ ಇಲ್ಲ. ಇಂಥ ಸಂದರ್ಭದಲ್ಲಿ ನಾನು ಗೆಡ್ಡೆ, ಗೆಣಸು ಅಗೆದು ತಿನ್ನುತ್ತಿದ್ದೆ. ಹೀಗಿರುವಾಗ ನನಗೆ ಅಂಕುಶನ ಪರಿಚಯವಾಯಿತು. "ಇಂದ ಲಕ್ಷ್ಯಾ ಉಪವಾಸ ಬಂದಾನ ಎಲ್ಲಾರು ಸ್ವಲ್ಪ ಸ್ವಲ್ಪ ರೊಟ್ಟಿ ಕೊಡ್ರಿ" ಎಂದು ರೊಟ್ಟಿ ಸಂಗ್ರಹಿಸಿ ನನಗೆ ತಂದು ಕೊಡುತ್ತಿದ್ದ. ಉಳಿದವರು ಉಣ್ಣುವಾಗ ನಾನು ಪುಸ್ತಕ ಹಿಡಿದು ಮೂಲೆಯಲ್ಲಿ ಕೂತಿರುತ್ತಿದ್ದೆ. ಹೊಟ್ಟೆಯಲ್ಲಿ ಬೆಂಕಿ ಬಿದ್ದಿರುತ್ತಿತ್ತು. ನನ್ನ ಬಡತನ ಕಂಡು ಕೆರಳುತ್ತಿದ್ದೆ. ಹೀಗೆ ಎಷ್ಟೋ ದಿನ ಕಳೆಯಿತು. ಆದರೆ ಹುಡುಗರಾದರೂ ಎಷ್ಟಂತ ಕೊಟ್ಟಾರು? ಹಾದಿಯಲ್ಲಿ ಹೊರಟಾಗ ಹೊಲದಲ್ಲಿ ಬೆಳೆದ ತೆನೆ ಕದ್ದು ಅಂಕುಶನ ಅಕ್ಕನಿಂದ ರೊಟ್ಟಿ ಮಾಡಿಸಿ ತಿನ್ನುತ್ತಿದ್ದೆ. ಶಾಲೆ ಕಲಿಯುವಾಗ ಒಂದು ವರ್ಷ ಗ್ಯಾನಬಾನ ಮನೆಯಲ್ಲಿ ಕೆಲಸ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದೆ. ಇನ್ನೊಬ್ಬ ಜ್ಞಾನೋಬನೆಂಬ ಮಿತ್ರ ತನ್ನಂಗಡಿಯಿಂದ ಉತ್ತತ್ತಿ, ಬಿಸ್ಕೀಟು ಕದ್ದು ತಿನ್ನಲು ಕೊಡುತ್ತಿದ್ದ. ಅವನ ತಾಯಿ ತುಂಬ ಒಳ್ಳೆಯವಳು. ನಾನು ಕೆಲವೊಮ್ಮೆ ಅವರ ಪಾತ್ರೆ ತೊಳೆದು, ಅವರಲ್ಲೇ ಉಂಡು ಅಲ್ಲೇ ಮಲಗುತ್ತಿದ್ದೆ.

ಓದಿನಿಂದ ನನ್ನಲ್ಲಿ ವೈಚಾರಿಕ ಶಕ್ತಿ ಬೆಳೆಯಿತು. ದೇವರು ನನಗೇಕೆ ಈ ಶಿಕ್ಷೆ ಕೊಟ್ಟ? ನನಗಿಂತಲೂ ಭಿಕ್ಷುಕ ಮೇಲಲ್ಲವೇ? ನಾನು ಮಾಡಿದ ಪಾಪವಾದರೂ ಏನು? ಎಂದು ಎಷ್ಟೋ ಸಲ ಅನಿಸುತ್ತಿತ್ತು. ನಾನು ವಿಶೇಷವಾಗಿ ಮಂಗಳವಾರ ಶುಕ್ರವಾರ ಶಾಲೆ ತಪ್ಪಿಸುತ್ತಿದ್ದೆ. ಯಾಕೆಂದರೆ ಭವಾನಿ ಮಂದಿರದಲ್ಲಿ ತಂದೊಡುತ್ತಿದ್ದ ನೈವೇದ್ಯ ತಿನ್ನಲು ಸಿಗುತ್ತಿತ್ತು.

ಮನೆ ಹೆಂಗಸರು ನಾನು ಹಿಡಿದ ಹಾದಿ ಕಂಡು ಬೇಸತ್ತರು. "ಭಜನೆಯ ಭಾನಗಡಿಗೆ ಯಾಕೆ ಬಿದ್ದಿ? ಕಳ್ಳತನ ಮಾಡೋ ಹಾಗಿದ್ರೆ ಮಾತ್ರ ಶಾಲೆಗೆ ಹೋಗು! ಇಲ್ಲದಿದ್ರೆ, ನಿನ್ನ ಸಾಕೋವರಾರು?" ಎಂದು ಕೆರಳುತ್ತಿದ್ದರು. ಒಮ್ಮೊಮ್ಮೆ ರೊಟ್ಟಿ ಕೊಡದೇ ಬರೀ ನುಚ್ಚು ತಿಂದು ಹೋಗೆಂದು ಬಯ್ಯುತ್ತಿದ್ದರು. ಅಣ್ಣಂದಿರಿಗೆ ಹೇಳಿದರೆ ಅವರೂ ಹೊಡೆಯುತ್ತಿದ್ದರು. ಸಿಗುವ ಊಟಕ್ಕೂ ಸಂಚಕಾರ ಉಪವಾಸದ ಅಂಜಿಕೆ.

ಕವಿತೆ

ನಾವು

ಕೂಳಿಲ್ಲದೆ ಕೊರಗುವವರು
ನಾವು ಹಸಿದ ಹುಲಿಗಳು
ಮೇಲಿರುವರ ಸುಳ್ಳು ಸುಲಿದು
ನೆಗೆಯಲಿರುವ ಕಲಿಗಳು

ಕಷ್ಟಪಟ್ಟು ದುಡಿದರೂನೆ
ನಮಗೆ ಕೂಳು ದೊರೆಯದು
ದುಡಿಯದಿರುವ ಯಜಮಾನರ
ಮಜವ ಹೇಳತೀರದು

ದೇವ್ರು ಮತವ ಮುಂದೆ ಮಾಡಿ
ನಮಗೆ ಮೋಸ ನಡೆದಿದೆ
ಅನ್ಯಾಯಕೆ ಅನ್ಯಾಯ
ಮುಯ್ಯಿಗೆ ಮುಯ್ ಮುಂದಿದೆ

ತತ್ವಗಿತ್ವ ಬೇಡ ನಮಗೆ
ಬೇಕು ನಮಗೆ ಅನ್ನವು
ಗುರುವುಗಿರುವು ಬೇಡ ನಮಗೆ ಬೇಕು ವಸತಿ
ವಸನವು
ಭಯಭೀತಿಯ ಬೇರುಸಹಿತ ಕಿತ್ತು ಮುಂದೆ
ನಡೆವೆವು
ವಿಷಜಂತುವ ಹುಡುಕಿ ತಡಕಿ
ಹಿಡಿದು ತಂದು ಕಡಿವೆವು

ಡಾ. ಸಿದ್ದಲಿಂಗಯ್ಯ

ನೆರೆ ಹೊರೆ

ಹರ್ಯಾಣ : ಗುರುಗಾಂವ್ - ಮನೆಸಾರ್ ಕೈಗಾರಿಕಾ ಪ್ರದೇಶ

ಕೊಲೆಗಡುಕ ದಾಳಿ ಖಂಡಿಸಿ ಲಕ್ಷ ಕಾರ್ಮಿಕರ ಪ್ರತಿಭಟನೆ

ಕಳೆದ ಐದು ವರ್ಷಗಳ ಹಿಂದೆ ಹರ್ಯಾಣ ರಾಜ್ಯದ ಕೈಗಾರಿಕಾ ಪಟ್ಟಣ ಗುರ್‌ಗಾಂವ್ ರಾಷ್ಟ್ರವ್ಯಾಪಿ ಸುದ್ದಿಯಾಗಿತ್ತು. ಅಂದು ರಾಜ್ಯ ಸರ್ಕಾರದ ಪೊಲೀಸ್ ಪಡೆ, ತಮ್ಮ ನ್ಯಾಯಬದ್ಧವಾದ, ಕಾನೂನುಬದ್ಧವಾದ ಹಕ್ಕನ್ನು ಕೇಳಿದ ತಪ್ಪಿಗಾಗಿ ದೊಡ್ಡ ಕಾರ್ಮಿಕ ಸಮೂಹವನ್ನು ಹಿಡಿದು ಚಚ್ಚಿ ಹಣ್ಣುಗಾಯಿ ನೀರುಗಾಯಿ ಮಾಡಿ ಸದೆಬಡಿದು ಒಂದೆಡೆ ರಾಶಿ ಹಾಕಿ ತಮ್ಮ 'ಶೌರ್ಯ' ಮೆರೆದಿದ್ದರು.

ಅಂತಹ ಹೀನಾಯ ದೌರ್ಜನ್ಯವನ್ನೇ ನೆನಪಿಸುವ ಮತ್ತೊಂದು ಕ್ರೂರದಾಳಿ ಇದೇ ಗುರ್‌ಗಾಂವ್‌ನಲ್ಲಿ ನಡೆದಿದೆ. ಹಿಂದೆ ಬಂಡವಾಳಿಗರು, ಕೈಗಾರಿಕಾ ಮಾಲೀಕರ ಪರವಾಗಿ ಪೊಲೀಸರ ಹಿಂಡು ಈ ದಾಳಿ ನಡೆಸಿದ್ದರೆ ಈಗ ಇದೇ ಬಂಡವಾಳಿಗರ ಪರವಾಗಿ ಬಂಡವಾಳಿಗರ ಬಾಡಿಗೆ ಗೂಂಡಾಗಳು ಕಾರ್ಮಿಕರ ಮೇಲೆ ಹಲ್ಲೆ ಮಾಡಿದ್ದಾರೆ. ಅದೂ ಪೊಲೀಸರ ಸಮ್ಮುಖದಲ್ಲಿ, ಅವರ ಒಪ್ಪಿಗೆಯೊಂದಿಗೆ.

ಅದು 'ರೈಕೊ' ಎಂಬ ಕಾರ್ಖಾನೆ. ಕಾರ್ಮಿಕ ಇಲಾಖೆ ಮಾಲೀಕರೊಂದಿಗೆ ಶಾಮೀಲಾಗಿದೆ. ಯಾವ ಕಾರ್ಮಿಕ ಕಾನೂನು ಇಲ್ಲಿ ಜಾರಿಗೆ ಬರುವಂತಿಲ್ಲ. ಕಾರ್ಮಿಕರು ಯಾವುದೇ ಬೇಡಿಕೆ ಇಡುವಂತಿಲ್ಲ. ತೀರಾ ಸಣ್ಣ ಪುಟ್ಟ ಬೇಡಿಕೆಗಳೂ ಇಲ್ಲಿ ಇತ್ಯರ್ಥವಾಗದೇ ಅನಗತ್ಯವಾಗಿ ವರ್ಷಗಟ್ಟಲೆ ಎಳೆದಾಡಲ್ಪಡುತ್ತವೆ. ಬೇಕೆಂತಲೇ ಹಾಗೆ ಮಾಡಲಾಗುತ್ತದೆ. ಇಲ್ಲಿ ಕಾರ್ಮಿಕರು ಸಂಘ ರಚಿಸಿಕೊಳ್ಳುವುದಂತೂ ಘೋರ ಅಪರಾಧ. ಸರ್ಕಾರವು ಈ ನೀತಿಗೆ ನೀರೆರೆದು ಘೋಷಿಸುತ್ತಿದೆ. ಈಗಲೂ ಹಾಗೆ ಆಯ್ತು. ಇದು ಒಂದು ಕಾರ್ಖಾನೆಯ ಕತೆಯಲ್ಲ, ಎಲ್ಲೆಲ್ಲೂ ಇದೇ ನೀತಿ.

ರೈಕೋ ಕಾರ್ಮಿಕರು ಸಂವಿಧಾನಬದ್ಧವಾದ ಸಂಘ ರಚಿಸಿಕೊಳ್ಳುವ ಹಕ್ಕಿಗಾಗಿ ಪ್ರತಿಭಟನೆಗೆ ಇಳಿದಿದ್ದರು. ಅದು ಅಕ್ಟೋಬರ್ 18, 2009. ರೈಕೋ ಮಾಲೀಕರ ಬಾಡಿಗೆ ಗೂಂಡಾಗಳು ಕಾರ್ಖಾನೆಯ ಒಳಗೇ ಕಾರ್ಮಿಕರ ಮೇಲೆ ಎರಗಿ ಬಿದ್ದರು. ಪೊಲೀಸರು ಗೂಂಡಾಗಳ ಬೆಂಬಲಕ್ಕಿದ್ದರು. ಹಲವರ ಮೇಲೆ ಹಲ್ಲೆಯಾಯಿತು. 'ಅಜಿತ್ ಯಾದವ್' ಎಂಬ ಕಾರ್ಮಿಕನನ್ನು ಗೂಂಡಾಪಡೆ ಕೊಂದೇ ಬಿಟ್ಟಿತು.

ಇಡೀ ಗುರ್‌ಗಾಂವ್ - ಮನೆಸಾರ್ ಕೈಗಾರಿಕಾ ಪ್ರದೇಶದಲ್ಲಿ ಕಾರ್ಮಿಕರ ಪ್ರತಿಭಟನೆ ಭುಗಿಲೆದ್ದಿತ್ತು. ಅಕ್ಟೋಬರ್ 20 ರಂದು ರೈಕೋ ಕಾರ್ಖಾ ಮಾತ್ರವಲ್ಲ ಈ ಇಡೀ ಕೈಗಾರಿಕಾ ಪ್ರದೇಶ ಸಂಪೂರ್ಣ ಬಂದ್ ಆಚರಿಸಿತು. ಲಕ್ಷಾಂತ ಕಾರ್ಮಿಕರು ಕ್ರೂರ ದೌರ್ಜನ್ಯವನ್ನು ಪ್ರತಿಭ ಬೀದಿಗೆ ಬಂದರು. ಹೊಂಡಾ, ಸೋನಿ, ಬಜಾ ಮುಂತಾದ ಕೈಗಾರಿಕೆಗಳು ಸೇರಿದ ಕೈಗಾರಿಕೆಗಳೆಲ್ಲವೂ ಬಂದ್ ಆಗಿದ್ದವು. ಪ್ರತಿಭಟ ಸಭೆಗೇ ಒಂದು ಲಕ್ಷ ಜನ ಕಾರ್ಮಿಕರು ನೆರೆದಿದ್ದ ಎಂದರೆ ಕಾರ್ಮಿಕರ ಎದೆಯಲ್ಲಿ ಎಷ್ಟು ರೋ ಹರಳುಗಟ್ಟಿದೆ ಎಂದು ಅರ್ಥವಾಗುತ್ತದೆ.



ದೌರ್ಜನ್ಯವಿರೋಧಿ ಹೋರಾಟವ ಸಿಐಟಿಯು, ಎಐಟಿಯು ಹೆಚ್‌ಎಂಎಸ್ ಮತ್ತು ಸ್ವತ ಕಾರ್ಮಿಕ ಸಂಘಟನೆಗಳನ್ನೊಳಗೊ ಸಮಿತಿ ಸಂಘಟಿಸಿತ್ತು.

ಹಲ್ಲೆಯಲ್ಲಿ ಗಾಯಗೊಂ ಕಾರ್ಮಿಕರಿಗೆ ಸೂಕ್ತ ಪರಿಹಾರ, ಮ ಅಜಿತ್ ಯಾದವ್ ಕುಟುಂಬಕ್ಕ ಲಕ್ಷ ಪರಿಹಾರ ಮತ್ತು ಕುಟುಂಬ ಸದಸ್ಯರೊಬ್ಬರಿಗೆ ಉದ್ಯೋ ಕಾರ್ಮಿಕರ ವಿರುದ್ಧದ ಎಲ್ಲ ಸು ಮೊಕದ್ದಮೆಗಳ ವಾಪಸ್ಸಾ ಮುಂತಾದ ಬೇಡಿಕೆಗಳಿಗಾ ಒತ್ತಾಯಿಸಲಾಯಿತು.

ಕಾರ್ಮಿಕ ಸಂಘದ ನೋಂದಣಿ, ವಜಾಗೊಂ ಕಾರ್ಮಿಕರ ಪುನರ್‌ನೇಮಕ, ಕಾರ್ಮಿಕರ ಬೇಡಿಕೆ ಕುರಿತು ಮಾತುಕತೆ ಇತ್ಯಾದಿಗಳಿಗಾಗಿ ಸ ಒತ್ತಾಯಿಸಲಾಯಿತು.

ಈ ಕೈಗಾರಿಕಾ ಪ್ರದೇಶದಲ್ಲಿ ಪೊಲೀಸರ ಬದಲಿಯಾಗಿ 'ಮಾರ್ಷಲ್'ಗಳು 'ಕೆಲ ಮಾಡುತ್ತಾರೆ. ಕಾರ್ಮಿಕರಿಗೆ ಯಾವ ಕನಿ ಹಕ್ಕುಗಳನ್ನು ನೀಡದೆ ನಿರ್ದಯವಾಗಿ ಶೋಷಿಸುವ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡು ದುಡಿಸಿಕೊಂಡು ಬೇಡವೆನಿಸಿದಾಗ ಕಿತ್ತು ಬಿಸಾಡುವ ಇಲ್ಲಿ ಎಲ್ಲೆಲ್ಲೂ ಕಂಡುಬರುವ ವಿದ್ಯಮಾನ. ವ್ಯವಸ್ಥೆಯನ್ನು ರಕ್ಷಿಸಿಕೊಂಡು ಹೋಗುವುದು ಮಾರ್ಷಲ್‌ಗಳ 'ಕರ್ತವ್ಯ'.

ಈ 'ಮಾರ್ಷಲ್' ವ್ಯವಸ್ಥೆಯನ್ನು ಕಿತ್ತೆಸೆಯ ಕಾರ್ಮಿಕರು ಆಗ್ರಹಿಸಿದರು. ಇತ್ತೀಚೆಗೆ ತಾ ಅಧಿಕಾರಕ್ಕೇರಿದ ಕಾಂಗ್ರೆಸ್ ಸರ್ಕಾರ ಚುನಾವಣೆಯ ನೀಡಿದ ಭರವಸೆ ಮರೆತು, ನಾಚಿಕೆಯಿಲ್ಲ ಕಾರ್ಮಿಕರ ಮುಷ್ಕರವನ್ನು ಅಕ್ರಮ ಎಂ ಘೋಷಿಸಿತು.

ಚಳುವಳಿಯು ಕಾರ್ಮಿಕ ವರ್ಗದಲ್ಲಿ ಹೊ ಸಂಚಲನ ಮೂಡಿಸಿದೆ. ಸಿಪಿಐ(ಎಂ) ಪಕ್ಷ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀ ಸೌಹಾರ್ದತೆ ತೋರಿತು. ಹೋರಾಟ ನಿಲ್ಲುವುದಿ ಅಕ್ಟೋಬರ್ 21 ರಂದು ಹರ್ಯಾಣ ರಾಜ್ಯಾದ್ಯ ಪ್ರತಿಭಟನೆ ವ್ಯಕ್ತವಾಗಿದೆ. 28 ರಂದು ದೇಶದ ವಿ ಭಾಗಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಮುಂ ಚಳುವಳಿಯನ್ನು ತೀವ್ರಗೊಳಿಸಲು ನಿರ್ಧರಿಸಲಾಗಿ

ಹೃದಯಗಳ ಬೆಸುಗೆಗೆ ಜಾತಿಬಂಧ ಏಕೆ?

ಹಸಿರು ಚಪ್ಪರ, ತಳಿರು ತೋರಣಗಳಿಲ್ಲದ, ವಾದ್ಯಗಳಿಲ್ಲದ, ಶಾಸ್ತ್ರಪುರಾಣಗಳಿಲ್ಲದ, ಭರ್ಜರಿ ಊಟವಿಲ್ಲದ, ಅಲಂಕಾರದಿಂದ ಸಿಂಗರಿಸಿದ ವೈಭವಯುತ ವಸ್ತ್ರಗಳಿಲ್ಲದೆ ಯಾವುದೇ ಆಡಂಬರವಿಲ್ಲದೆ ಸರಳವಾಗಿ, ಸುಂದರವಾಗಿ ಹುಡುಗ, ಹುಡುಗಿಯ ಸಂಬಂಧಿಗಳು, ಜನ ಚಳುವಳಿ ಸಂಗಾತಿಗಳ ಸಮ್ಮುಖದಲ್ಲಿ ಮಳವಳ್ಳಿ ಪಟ್ಟಣದ ಶಾದಿ ಮಹಲ್‌ನಲ್ಲಿ ನವೆಂಬರ್ 4ರ ಬುಧುವಾರದಂದು ಡಿ.ವೈ.ಎಫ್.ಐ ನ ಸುಜಾತ ಹಾಗು ಪ್ರಾಂತ ರೈತ ಸಂಘದ ಶ್ರೀನಿವಾಸ್ ಹಾರ ಬದಲಾಯಿಸಿ ವಿವಾಹವಾದರು.

ಈ ಮದುವೆಯ ಸಂದರ್ಭದಲ್ಲಿ 'ಅಸ್ಪೃಶ್ಯತೆ ಮತ್ತು ಅಂತರಜಾತಿ ವಿವಾಹ" ಎಂಬ ವಿಷಯವಾಗಿ ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. ಸಿಪಿಐ (ಎಂ)ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್ ನಾಗರಾಜು ಮಾತನಾಡಿ ಸಮಾಜದಲ್ಲಿರುವ ಜಾತೀಯತೆ ಹೋಗಬೇಕು. ಅಂತರಜಾತಿ ವಿವಾಹಗಳು ಹೆಚ್ಚಾಗಬೇಕು. ಈ ಸರಳವಿವಾಹ, ಅಂತರಜಾತಿ ವಿವಾಹದಿಂದ ಮಾತ್ರ ಸಮಾಜದಲ್ಲಿ ಸಮಾನತೆಯನ್ನು ತರಲು ಸಹಾಯವಾಗುತ್ತದೆ. ಈ ಪರಂಪರೆ ಇಂದು ನೆನ್ನೆಯದಲ್ಲ. 12ನೇ ಶತಮಾನದಲ್ಲಿ ಸಮಾನತೆಯ ಸಮಾಜ ಕಟ್ಟಲು ಹೋರಾಟ ನಡೆಸಿದ ಬಸವಾದಿ ಶರಣರ ಕನಸು.

ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನ್ನೇನಾದರೂ ಬಲ್ಲಿರಾ?

ಎಂದ ಕನಕದಾಸರ ಪದ್ಯದಲ್ಲಿ ಅಡಗಿರುವ ಮಾನವೀಯ ಸತ್ಯವನ್ನು ಎಲ್ಲರೂ



ಅರ್ಥಮಾಡಿಕೊಂಡು ಮಾನವತೆಯ ಸಮಾಜವನ್ನು ನಿರ್ಮಾಣ ಮಾಡಬೇಕು. ಈ ನಿಟ್ಟಿನಲ್ಲಿ ಸರಳ ಮದುವೆಗಳು ಪ್ರಮುಖ ಪಾತ್ರವಹಿಸುತ್ತವೆ ಎಂದು ತಿಳಿಸಿದರು.

ಸಿಐಟಿಯು ರಾಜ್ಯ ಸಮಿತಿಯ ಕಾರ್ಯದರ್ಶಿ ಎಸ್.ವರಲಕ್ಷ್ಮಿಯವರು ಮಾತನಾಡಿ ಜಾತಿಯತೆಯನ್ನು ಧಿಕ್ಕರಿಸಿ, ಜಾತ್ಯಾತೀತ ಮೌಲ್ಯಗಳ ಆಧಾರದಲ್ಲಿ ನವ ಜೀವನಕ್ಕೆ ಕಾಲಿಟ್ಟ ಸುಜಾತ, ಶ್ರೀನಿವಾಸರವರನ್ನು ಅಭಿನಂದಿಸಿದರು.

ಸಿ.ಪಿ.ಐ (ಎಂ)ನ ಬೆಂಗಳೂರಿನ ಜಿಲ್ಲಾಕಾರ್ಯದರ್ಶಿ ಕೆ.ಪ್ರಕಾಶ್ ರವರು ಮಾತನಾಡಿ ಹಣದ ಆಧಾರದ ಮೇಲೆ ಹೊಸ ಹೊಸ ಸಂಪ್ರದಾಯಗಳು ಸೃಷ್ಠಿಯಾಗುತ್ತಿವೆ. ಬದುಕೇ ಸವಾಲಾಗಿರುವಾಗ ಕೆಲವೇ ಮಂದಿ ಶ್ರೀಮಂತರು ಕೋಟಿಗಟ್ಟಲೆ ಹಣ ಖರ್ಚುಮಾಡಿ ಮದುವೆ ಮಾಡುವುದನ್ನು ಕಾಣುತ್ತೇವೆ. ಆದರೆ ಬಹುಪಾಲು ಮಂದಿ ಕನಿಷ್ಠ ಜೀವನ ನಡೆಸಲು ಸಾಧ್ಯವಿಲ್ಲದಿರುವಾಗ ನಮ್ಮ ಪರಿಸ್ಥಿತಿಗೆ ತಕ್ಕ ಹಾಗೆ ಸರಳ ರೀತಿಯಲ್ಲಿ ಮದುವೆ ಮಾಡಿಕೊಂಡು ಬದುಕನ್ನು ರೂಪಿಸಿಕೊಳ್ಳುವುದು ಸೂಕ್ತ ಎಂದರು.

ಡಿ.ವೈ.ಎಫ್.ಐ.ನ ರಾಜ್ಯಾಧ್ಯಕ್ಷರಾದ ಕಾ.ಭರತ್‌ರಾಜ್ ಮಾತನಾಡಿ ಹೋರಾಟದ ಮುಂಚೂಣಿಯಲ್ಲಿ ಯುವಜನತೆಯ ಪಾತ್ರ ಬಹಳ ಮುಖ್ಯವಾದದ್ದು. ಸಮಾಜದಲ್ಲಿನ ಅಸಮಾನತೆಯನ್ನು ತೊಡೆದುಹಾಕಲು ಚಳುವಳಿಗಳಿಂದ ಮಾತ್ರ ಸಾಧ್ಯ. ಆ ಚಳುವಳಿಯ ನಾಯಕತ್ವವನ್ನು ಯುವಜನತೆ ನಿರ್ವಹಿಸಬೇಕು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾ.ಜಿ. ರಾಮಕೃಷ್ಣರವರು ವಹಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಸ್ವಾಗತ, ನಿರೂಪಣೆಯನ್ನು ಹೊಂಬಯ್ಯ ಮಾಡಿದರು, ವಂದನಾರ್ಪಣೆಯನ್ನು ಲಿಂಗರಾಜು ಮೂರ್ತಿ ನೆರವೇರಿಸಿದರು.

● ಕವಿತಾ ಎನ್

ಅಸಂಘಟಿತ ಕಾರ್ಮಿಕರಿಗೆ ನಿಗದಿಯಾಗಿರುವ ಕನಿಷ್ಠ ಕೂಲಿಯೇ ಕಡಿಮೆ. ಅದೂ ಕೂಡ ಜಾರಿಯಾಗುವುದಿಲ್ಲ ಎಂಬುದು ಏನನ್ನೂ ತೋರಿಸುತ್ತದೆ?

ಅಸಂಘಟಿತ ಕಾರ್ಮಿಕರು ಮತ್ತು ನಿಕೃಷ್ಟ ಕನಿಷ್ಟ ವೇತನ

ಕೆ.ಶಂಕರ್

ರ್ನಾಟಕ ರಾಜ್ಯದಲ್ಲಿ ಸುಮಾರು 1.5 ಕೋಟಿ ರ್ಮಿಕರು ಕೃಷಿ ಸಂಬಂಧಿ ಚಟುವಟಿಕೆಯಲ್ಲಿ, ೋಟಗಳಲ್ಲಿ, ಗೃಹ ಕೈಗಾರಿಕೆಗಳಲ್ಲಿ, ರ್ಖಾನೆಗಳಲ್ಲಿ, ಅಂಗಡಿ ಮತ್ತು ವಾಣಿಜ್ಯ ಂಸ್ಥೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸರಕಾರಿ ೋಜನೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ರ್ನಾಟಕದಲ್ಲಿ ಕಾರ್ಖಾನೆ ಇತ್ಯಾದಿಗಳಲ್ಲಿ ದುಡಿಯುವ ಚ್ಚಿನ ಕಾರ್ಮಿಕರಿಗೆ ನಿಗದಿ ಮಾಡಿದ ಕನಿಷ್ಠ ಕೂಲಿ ನಕ್ಕೆ ರೂ.100/ ಮಾತ್ರ, ಆದರೆ ಅದನ್ನು ಕೂಡಾ ರ್ಮಿಕರಿಗೆ ಹೆಚ್ಚಿನ ಪ್ರದೇಶಗಳಲ್ಲಿ ಕೊಡುತ್ತಿಲ್ಲ. ಲ್ಲಿ ಸಂಘಟನೆ ಮತ್ತು ಹೋರಾಟ ನಡೆದಿದೆಯೋ ಲ್ಲಿ ಮಾತ್ರ ಸಿಗುತ್ತದೆ.

ಕೇವಲ ಬದುಕುಳಿಯಲು ಎಲ್ಲಾ ಕಾರ್ಮಿಕರಿಗೆ 196 ಪಾಯಿಂಟುಗಳನ್ನು ಸರಾಸರಿ ರಾಜ್ಯ ಳಕೆದಾರರ ಬೆಲೆ ಸೂಚ್ಯಂದಲ್ಲಿ ಮಾಸಿಕ ರೂ.6,000 ದಿನಕ್ಕೆ ರೂ.231/ (ಮಹಾನಗರ ಪ್ರದೇಶದಲ್ಲಿ ೂ.10,000) ಕೊಡಬೇಕಾಗುತ್ತದೆ ಎಂಬು ಟಿಯು ಲೆಕ್ಕ ಹಾಕಿದೆ. ಇದನ್ನು ಗಳಿಸಲು ೋರಾಟವನ್ನು ಆರಂಭಿಸಿದೆ.

ಕಾರ್ಮಿಕರು ಬಹುತೇಕ ಬೀಡಿ, ಕಟ್ಟಡ, ಇಟ್ಟಿಗೆ ಯಿಸುವುದು, ಹೋಟೆಲ್, ಆಟೋ ಮೊಬೈಲ್ ಾಸಗಿ ಆಸ್ಪತ್ರೆ ಹಾಗೂ ಶುಶ್ರೂಷಾಲಯ, ಖಾಸಗಿ ಲೆಗಳು, ಅಂಗನವಾಡಿ, ಬಿಸಿಯೂಟ, ಗ್ರಾಮ ಂಚಾಯತಿ ನೌಕರರು, ಮನೆ ಕೆಲಸದವರು, ಪಿಎಂಸಿ, ಮಾರುಕಟ್ಟೆ, ಅಕ್ಕಿ, ಎಣ್ಣೆ ಗಿರಣಿಗಳಲ್ಲಿ ುಡಿಯುವ ಹಮಾಲಿ ಕಾರ್ಮಿಕರು, ಕೈಮಗ್ಗ, ೇನುಗಾರಿಕೆ, ಗೋಡಂಬಿ, ಸೇಂದಿ ತೆಗೆಯುವುದು, ಿಲ್ಲರೆ ವ್ಯಾಪಾರ ಮುಂತಾದ ಅನೇಕ ಉದ್ದಿಮೆಗಳಲ್ಲಿ ೋಟಿಗಟ್ಟಲೆ ಕಾರ್ಮಿಕರು ದುಡಿಯುತ್ತಿದ್ದಾರೆ.

ರಾಜ್ಯದ ಮತ್ತು ದೇಶದ ಯಾವುದೇ ಭಾಗಗಳಿಗೆ, ಗರ ಪ್ರದೇಶಗಳಲ್ಲಿ ಅಥವಾ ಗ್ರಾಮಾಂತರ ದೇಶಗಳನ್ನು ನೋಡಿದರೆ ಪ್ರತಿ ಮನುಷ್ಯರು ಾದರೂ ಒಂದು' ಕೆಲಸಗಳನ್ನು ಾಡುತ್ತಿರುವುದನ್ನು ನೋಡಬಹುದಾಗಿದೆ.

ರ್ಖಾನೆಗಳ ವಿಘಟನೆ

ಹಿಂದೆ ಕಾರ್ಮಿಕರು ಎಂದರೆ ಸಾಮಾನ್ಯವಾಗಿ ರ್ಖಾನೆಗಳಲ್ಲಿ ಮತ್ತು ಸಾರ್ವಜನಿಕ ಕೈಗಾರಿಕೆಗಳಲ್ಲಿ ಾತ್ರ ದುಡಿಯುವವರನ್ನು ಕಾರ್ಮಿಕರು ಎಂದು ಟ್ಟು ಪರಿಗಣಿಸುತ್ತಿದ್ದರು. ಆದರೆ ಇಂದು ಗತೀಕರಣ ಮತ್ತು ಖಾಸಗೀಕರಣ ನೀತಿಗಳ ತರ ಕೂಡಿ ಮಾಡುವ ಕೆಲಸ ಹರಿದು ಚಿಕೆಯಾಗಿದೆ. ಇಂದು ಮನೆಗಳಲ್ಲಿ ಕುಳಿತು ಕೆಲಸ ಮಾಡುವುದರೊಂದಿಗೆ ಐ.ಟಿ. ಕಂಪನಿಗಳ ದ್ಧಿಕ ಶ್ರಮದ ಕೆಲಸದಿಂದ ಹಿಡಿದು ಅಗರಬತ್ತಿ ಜ್ಜುವ ಕೆಲಸಗಳನ್ನು ಮಾಡುವವರ ಸಂಖ್ಯೆ ಚ್ಚುತ್ತಿದೆ.

ಈ ರೀತಿ ದೇಶದಲ್ಲಿ ಒಟ್ಟು ದುಡಿಯುವವರ ಷ್ಟ 40 ಕೋಟಿ ನಗರ ಪ್ರದೇಶಗಳಲ್ಲಿದ್ದಾರೆ. 12 ೋಟಿಗೂ ಅಧಿಕ ಮಹಿಳೆಯರು ಇದ್ದಾರೆ. ಘಟಿತ ಕ್ಷೇತ್ರದಲ್ಲಿನ ಉದ್ಯೋಗ ಅವಕಾಶಗಳು ಮೆಯಾಗುತ್ತಿರುವ ಕಾರಣದಿಂದ ಅಸಂಘಟಿತ ್ರದ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ.

2004, 05 ರ ಲಿಖಿತ ಸಮೀಕ್ಷೆಯೊಂದರ ಪ್ರಕಾರ ದುಡಿಯುವ ವರ್ಗದಲ್ಲಿ ಶೇ.92 ರಿಂದ ಶೇ.93 ರಷ್ಟು ಅಸಂಘಟಿತ ಕಾರ್ಮಿಕರು ಇದ್ದಾರೆ. ರಾಜ್ಯದಲ್ಲಿ 1.5 ಕೋಟಿಗಿಂತಲೂ ಹೆಚ್ಚು ಕಾರ್ಮಿಕರು ದುಡಿಯುತ್ತಿದ್ದಾರೆ.

ರಾಷ್ಟ್ರೀಯ ಉತ್ಪನ್ನದ ಪಾಲು ಶೇ.93 ಅಸಂಘಟಿತ ವಲಯದಿಂದ ಆದಾಯ ಬರುತ್ತಿದೆ. ಕೃಷಿಯೇತರ ವಲಯದಿಂದ ಶೇ.46 ರಷ್ಟು ಮೌಲ್ಯ ಕ್ರೋಢೀಕೃತವಾಗುತ್ತಿದೆ. ನಗರ ಪ್ರದೇಶದ ಆರ್ಥಿಕತೆಗೆ ಔಪಚಾರಿಕ ವಲಯದಿಂದ ಶೇ.35 ಮೌಲ್ಯ, ಕೃಷಿ ಕಟ್ಟಡ ಹಾಗೂ ವಾಣಿಜ್ಯ ವ್ಯವಹಾರಗಳಿಂದ ಇದು ಮತ್ತಷ್ಟು ಹೆಚ್ಚಿದೆ.

ಜಾರಿ ಇಲ್ಲ

ಕೇಂದ್ರ ಸರಕಾರ ಕನಿಷ್ಟ ಕೂಲಿ ಶಾಸನ, 1948 ರಲ್ಲಿ ರಚಿಸಿ 61 ವರ್ಷಗಳು ದಾಟಿವೆ. 'ಭಾರತದ ಜನತೆ ತಮಗೆ ಒಂದು ಸಂವಿಧಾನ ಕೊಟ್ಟುಕೊಂಡು' ಆ ಸಂವಿಧಾನದ 43ನೇ ಕಲಮು ಪ್ರಭುತ್ವ ಸಾಕಷ್ಟು ಜೀವನೋಪಾಯ ಹಾಗೂ ಜೀವನ ವೇತನ ಒದಗಿಸಬೇಕೆಂದು ಎಂದು ನಿರ್ದೇಶನವಿತ್ತು ಈಗ 59 ವರ್ಷಗಳಾಗಿವೆ. ಭಾರತದ ಸರಕಾರ, ಭಾರತದ ಕೈಗಾರಿಕೆಗಳ ಮಾ 'ರು ಹಾಗೂ ಕಾರ್ಮಿಕ ಸಂಘಗಳು ಒಟ್ಟಾಗಿ, 15ನೇ ಭಾರತೀಯ ಕಾರ್ಮಿಕ ಸಮ್ಮೇಳನ (ಐಎಲ್‌ಸಿ)ದಲ್ಲಿ 'ಅಗತ್ಯ ಆಧಾರಿತ ಕನಿಷ್ಟ ಕೂಲಿ' ಹೇಗಿರಬೇಕು ಎಂದು ನಿರ್ಣಯಿಸಿ 36 ವರ್ಷಗಳಾಗಿವೆ. ಆದರೆ ಇದುವರೆಗೂ ಕೆಲವೆಡೆ, ಸಂಘಟಿತ ವಲಯದ ದುಡಿಯುವ ಜನಗಳ ಕೆಲ ವಿಭಾಗಗಳನ್ನು ಬಿಟ್ಟರೆ ಬಹಳಷ್ಟು ಕಡೆ ಇದನ್ನು ಜಾರಿಗೆ ತರುವಂತೆ ಮಾಡುವಲ್ಲಿ ನಾವು ಸಫಲರಾಗಿಲ್ಲ.

ಚಾರಿತ್ರಿಕ ಒತ್ತಡಗಳು-ವೇತನ ಸಿದ್ಧಾಂತಗಳು

1948 ರ ಶಾಸನ, 1957 ರ ಅಂತರರಾಷ್ಟ್ರೀಯ ಕಾರ್ಮಿಕ (ಐಎಲ್‌ಸಿ) ನಿರ್ಣಯ ಇವುಗಳು ಕೂಡಾ ಹಲವು ಒತ್ತಡಗಳಿಂದಾಗಿ ಅಸ್ತಿತ್ವಕ್ಕೆ ಬಂದವುಗಳು. 1928 ರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಒ) ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿತ್ತು. ಅಂತರರಾಷ್ಟ್ರೀಯ ಒತ್ತಡದಿಂದಾಗಿ 1948 ರ ಶಾಸನ ಬಂತು. ಈ ಐಎಲ್‌ಒ ಕೂಡಾ ಅಕ್ಟೋಬರ್ ಕ್ರಾಂತಿಯು ವಿಶ್ವದಲ್ಲಿ ಉಂಟು ಮಾಡಿದ ಒತ್ತಡದಿಂದಾಗಿ 1919 ರಲ್ಲಿ ಹುಟ್ಟಿತು ಎಂಬುದನ್ನೂ ಗಮನಿಸಬೇಕು. 1957 ರ ಐಎಲ್‌ಸಿ ನಿರ್ಣಯ ಕೂಡಾ ಭಾರತದ ಕಾರ್ಮಿಕ ಆಂದೋಲನ ತಾನು ನೀಡಿದ ಭರವಸೆಯಿಂದ ಸತತವಾಗಿ ಜಾರಿಕೊಳ್ಳುತ್ತಾ ಸಾಗಿದ ಭಾರತ ಸರಕಾರದ ಮೇಲೆ ಹಾಕಿದ ಒತ್ತಡದಿಂದಾಗಿ ಬಂತು. 1948 ರಲ್ಲಿ ಸಂವಿಧಾನ ಸಭೆ (ಅಗಿನ್ನೂ ಈಗಿನ ಸಂಸತ್ತು ರಚನೆಗೊಂಡಿರಲಿಲ್ಲ) ಯಲ್ಲಿ ಒಂದು 'ನ್ಯಾಯಸಮ್ಮತ ವೇತನ



ಮಸೂದೆ'ಯನ್ನು ಮಂಡಿಸಲಾಯಿತು. ಸಂವಿಧಾನ ಸಭೆ ವಿಸರ್ಜನೆಗೊಂಡಾಗ ಅದು ರದ್ದಾಗಿ ಹೋಗಲು ಬಿಡುವಂತಾಯಿತು. ನ್ಯಾಯಸಮ್ಮತ ವೇತನ ಮಸೂದೆಯನ್ನು ಕೈ ಬಿಡುತ್ತಿದ್ದಂತೆ 'ಜೀವನ ವೇತನ'ದ ಘೋಷಣೆ ಬಂತು. 'ಕನಿಷ್ಟ ಕೂಲಿ' ಎಷ್ಟಿರಬೇಕು ಎಂಬ ಪ್ರಶ್ನೆ ಬಂದಾಗ ಬದುಕಿರಲು ಅವಶ್ಯವಾದ ಮಟ್ಟ ಎಂಬ ಸಿದ್ಧಾಂತ ಹಾಗೂ 1957 ರಲ್ಲಿ 'ಅಗತ್ಯ ಆಧಾರಿತ ಕನಿಷ್ಟ ಕೂಲಿ'ಯ ಪರಿಕಲ್ಪನೆ ಬಂತು.

ಕೇರಳದ ಮಾದರಿ

ಬದುಕಿರಲು ಸಾಲುವಷ್ಟೇ ಅಂದರೆ ಅತ್ಯಂತ ಕನಿಷ್ಟವಾದುದು. 'ಅಗತ್ಯ ಆಧಾರಿತ ಕನಿಷ್ಟ ಕೂಲಿ' ಕುರಿತು ಐಎಲ್‌ಸಿ ನಿರ್ಣಯದ ನಂತರ ಅದನ್ನು ಜಾರಿಗೆ ತರಲು ಕೇಂದ್ರ ಸರಕಾರ ಏನೂ ಮಾಡಿರದಿದ್ದರೂ, 1957-59 ರಲ್ಲಿ ಕೇರಳದಲ್ಲಿನ ಸರಕಾರ ಸಂಬಳ ನಿಗದಿಪಡಿಸುವಲ್ಲಿ ಅದನ್ನು ಅನ್ವಯ ಮಾಡಿತು. ದೇಶದ ಮೊದಲ ಕಮ್ಯೂನಿಸ್ಟ್ ಪಕ್ಷದ ಸರಕಾರ 15ನೇ ಐಎಲ್‌ಸಿಯ ಶಿಫಾರಸ್ಸನ್ನು ಹಂಚು ಕಾರ್ಮಿಕರ ಸಂಬಳ ನಿಗದಿಪಡಿಸುವಲ್ಲಿ ಜಾರಿಗೆ ತರಲು ಯತ್ನಿಸಿತು.

ಒಂದು ಸರಕು ಉತ್ಪಾದನೆ ಆಗಬೇಕಾದರೆ ಮಾನವನ ದೈಹಿಕ ಮತ್ತು ಬೌದ್ಧಿಕ ಶಕ್ತಿಯ ಶ್ರಮದಿಂದ ಮಾತ್ರವೇ ಸಾಧ್ಯ. ಆದರೆ ಬೆವರನ್ನು ಸುರಿಸಿ ದುಡಿದು ಸಂಪತ್ತು ಸೃಷ್ಟಿಸುವ ಜನರನ್ನು ಸರಕಾರಗಳು ಮತ್ತು ಮಾಲಕರು ನಿರಂತರವಾಗಿ ಕಡೆಗಣಿಸುತ್ತಾ ಬಂದಿದ್ದಾರೆ.


ನಿಕೃಷ್ಟ ವೇತನ

ಹಲವು ಸರಕಾರಗಳಿಂದ ಜಾರಿಯಾಗುತ್ತಿರುವ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ನೀತಿಗಳ ಪರಿಣಾಮದಿಂದಾಗಿ ದುಡಿಯುವ ಎಲ್ಲಾ ಜನ ವರ್ಗ ತನ್ನ ಮೂಲಭೂತ ಹಕ್ಕುಗಳನ್ನು ಕಳೆದುಕೊಳ್ಳುತ್ತಿದೆ. ಇಂದಿನ ನಿರುದ್ಯೋಗ ಮತ್ತು ಅಭೂತಪೂರ್ವ ನಿರಂತರ ಬೆಲೆ ಏರಿಕೆಯಿಂದಾಗಿ ದುಡಿಯುವ ಜನರಿಗೆ ಜೀವನ ನಿರ್ವಹಿಸುವುದು ತೀರಾ ಕಷ್ಟಕರವಾಗಿದೆ. ಕೆಲಸದ ಭದ್ರತೆ, ಕಾರ್ಮಿಕ ಕಾನೂನುಗಳನ್ನು ಪರಿಣಾಮಕಾರಿ ಜಾರಿ ಮಾಡುವ ಬದಲಿಗೆ ರೂ.400 ರಿಂದ 2000 ಗಳ ವವೇತನ ನೀಡಿ ಕಾರ್ಮಿಕರನ್ನು ಗುತ್ತಿಗೆ, ಬದಲಿ, ದಿನಗೂಲಿ, ಗೌರವಧನ ಹಾಗೂ ಪೀಸ್ ವರ್ಕ್ ಆಧಾರದಲ್ಲಿ ಸರಕಾರ ಹಾಗೂ ಸರಕಾರದ ನೇರ ಸಹಕಾರದಿಂದ ಮಾಲಿಕರು ದುಡಿಸುತ್ತಿದ್ದಾರೆ.

ಕಾರ್ಮಿಕರನ್ನು ಜೀತದಾಳುಗಳಂತೆ ದುಡಿಸಲಾಗುತ್ತಿದೆ. ಕೈಗಾರಿಕೆಗಳು ರೋಗಗ್ರಸ್ತ ಎಂದು ಹೇಳಿಕೊಂಡು ಇರುವ ಸೌಲಭ್ಯಗಳನ್ನು ಕೊಡಲು ನಿರಾಕರಿಸಲಾಗುತ್ತಿದೆ. ಕಾರ್ಮಿಕ ಕಾನೂನುಗಳು ನಿರ್ಜೀವವಾಗಿವೆ. ಸಾಮಾಜಿಕ ಭದ್ರತೆಯ ಸವಲತ್ತುಗಳಿಂದ ಕಾರ್ಮಿಕರು ವಂಚಿತರಾಗುತ್ತಿದ್ದಾರೆ. ಕಾರ್ಮಿಕರ ಶೋಷಣೆಯಲ್ಲಿ ಖಾಸಗಿ ಮಾಲಿಕರು ಮತ್ತು ಸರಕಾರಗಳ ನಡುವೆ ಸ್ಪರ್ಧೆ ನಡೆಯುತ್ತಿದೆ. ಸರಕಾರದ ಎಲ್ಲಾ ಇಲಾಖೆಗಳಲ್ಲಿ ಹಾಗೂ ಸರಕಾರದ ಒಡೆತನದಲ್ಲಿರುವ ಎಲ್ಲಾ ಸಂಸ್ಥೆಗಳಲ್ಲಿ ದಿನಗೂಲಿ, ಗುತ್ತಿಗೆ, ಗೌರವಧನದ ಹೆಸರಿನಲ್ಲಿ ಲಕ್ಷಾಂತರ ಕಾರ್ಮಿಕರನ್ನು ದುಡಿಸಲಾಗುತ್ತಿದೆ. ಈ ಕಾರ್ಮಿಕರಿಗೆ ನಿವೃತ್ತಿಯ ಸವಲತ್ತುಗಳಿಲ್ಲ.

ಇವೆಲ್ಲಾ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಸಿಐಟಿಯು ಸಂಘಟನೆಯು ಅಸಂಘಟಿತ ಕಾರ್ಮಿಕರ ಕನಿಷ್ಟ ವೇತನದ ಪ್ರಶ್ನೆ ಹಾಗೂ ಕಾರ್ಮಿಕ ಸೌಲಭ್ಯಗಳ ಪ್ರಶ್ನೆ ಹಾಗೂ ಕಾರ್ಮಿಕ ಕಾನೂನುಗಳ ಜಾರಿ ಪ್ರಶ್ನೆಯನ್ನು ಕೈಗೆತ್ತಿಕೊಂಡಿದೆ.

ಇದಕ್ಕೆ ರಾಜ್ಯ ಸರ್ಕಾರದ ಪ್ರತಿಕ್ರಿಯೆ ಏನು? ಲಾಠಿ ಪ್ರಹಾರ ಸುಳ್ಳು ಮೊಕದ್ದಮೆಗಳು. ಈ ದಮನ ದೌರ್ಜನ್ಯಗಳಿಂದ ಕಾರ್ಮಿಕಾಂದೋಲನವನ್ನು ಹತ್ತಿಕ್ಕಲಾಗದು. ನ್ಯಾಯಬದ್ಧ ಹೋರಾಟವನ್ನು ಮುಂದೊಯ್ಯಲು ಸಿಐಟಿಯು ತೀರ್ಮಾನಿಸಿದೆ. ಅದೊಂದೇ ಸಮಸ್ಯೆಗೆ ನಿಜವಾದ ಪರಿಹಾರ.



• ಜಯ

ಭೋಪಾಲ್ ಅನಿಲ ದುರಂತಕ್ಕೆ 25 ವರ್ಷ


ಅಪಘಾತವಲ್ಲ, ಘೋರ ಅಪರಾಧ, ಇನ್ನೂ ಇಲ್ಲ ಪರಿಹಾರ

ನಾವೀಗ ಮಾರುಕಟ್ಟೆಯಲ್ಲಿ ನೋಡುತ್ತಿರುವ 'ಎವರೆಡಿ' ಬ್ಯಾಟರಿ ತಯಾರಿಸುವ ಯೂನಿಯನ್ ಕಾರ್ಬೈಡ್ ಕಂಪನಿ ಎಂತಹ ಕೊಲೆಗಡುಕ ಬಹುರಾಷ್ಟ್ರೀಯ ಕಂಪನಿ ಎಂಬುದು ಗೊತ್ತೆ? ಭೂಪಾಲ್ ವಿಷಾನಿಲ ದುರಂತಕ್ಕೆ 25 ವರ್ಷ ತುಂಬುತ್ತಿದೆ. ಸಂತ್ರಸ್ತರಿಗೆ ಪರಿಹಾರ ಮಾತ್ರ ಇನ್ನು ಮರೀಚಿಕೆಯಾಗಿದೆ.

"ಹೃದಯಾಘಾತದಿಂದ ಮರಣ ಆದರೆ ಹೃದಯಾಘಾತಕ್ಕೆ ಕಾರಣ ಏನೆಂಬುದು ತಿಳಿಯದು" ಇವು ಭೋಪಾಲ್ ಅನಿಲ ದುರಂತದಲ್ಲಿ ಸಾವಿಗೀಡಾದ ಸಾವಿರಾರು ಮಂದಿ ನತದೃಷ್ಟರ ಎಲ್ಲ ಮರಣ ಪ್ರಮಾಣ ಪತ್ರಗಳಲ್ಲಿ ನಮೂದಿಸಲಾಗಿದ್ದ ಪದಗಳು. ಮಧ್ಯಪ್ರದೇಶ ರಾಜ್ಯದ ರಾಜಧಾನಿ ಭೋಪಾಲ್ ನಗರದಲ್ಲಿದ್ದ ಯೂನಿಯನ್ ಕಾರ್ಬೈಡ್ ಕಂಪನಿಯಿಂದ ಸೋರಿಕೆಯಾದ ವಿಷಪೂರಿತ ಅನಿಲ ಸೇವನೆಯಿಂದ ಸಾಯುತ್ತಿದ್ದ ಸಾವಿರಾರು ಮಂದಿಗೆ ಎಂತಹ ಚಿಕಿತ್ಸೆ ನೀಡಬೇಕೆಂದು ಯಾವೊಬ್ಬ ಡಾಕ್ಟರುಗಳಿಗೂ ತಿಳಿಯದೇ ಇದ್ದಂತಹ ಗಂಭೀರ ಪರಿಸ್ಥಿತಿಯದು. ಈ ಬಹುರಾಷ್ಟ್ರೀಯ ಕಂಪನಿಯು ತಾನು ಬಳಕೆ ಮಾಡುತ್ತಿದ್ದ ಕಚ್ಛಾ ವಸ್ತುಗಳು ಮತ್ತು ಉತ್ಪಾದಿಸುತ್ತಿದ್ದ ಉತ್ಪನ್ನಗಳು ಅದೆಷ್ಟು ಅಪಾಯಕಾರಿಯಾದವು, ವಿಷಕಾರಿಯಾದವು ಎಂಬುದನ್ನು ಮತ್ತು ಅವೇನಾದರೂ ಅವಘಡ ಸಂಭವಿಸಿ ವಾತಾವರಣಕ್ಕೆ ಬಿಡುಗಡೆಯಾದರೆ ಅದರ ಸೇವನೆ ಮಾಡಿದವರಿಗೆ ಯಾವ ಚಿಕಿತ್ಸೆ ನೀಡುವುದು ಎಂಬೆಲ್ಲ ಮಾಹಿತಿಯನ್ನು ಬಹಳ ರಹಸ್ಯವಾಗಿ ಮುಚ್ಚಿಟ್ಟಿದ್ದರಿಂದ ಸಾವು-ನೋವುಗಳ ಸಂಖ್ಯೆ ಮತ್ತಷ್ಟು ಹೆಚ್ಚಾಯಿತು ಎನ್ನುತ್ತಾರೆ ತಜ್ಞರು.


ಬಹುರಾಷ್ಟ್ರೀಯ ಕಂಪನಿಗಳ ಅಪರಾಧದ ಕಹಿ ನೆನಪು:

ಯೂನಿಯನ್ ಕಾರ್ಬೈಡ್ ಕಾರ್ಖಾನೆಯಿಂದ 'ಮೀಥೈಲ್ ಐಸೋ ಸಯನೈಡ್' ಎಂಬ ವಿಷಾನಿಲ ಸೋರಿಕೆಯಾದಾಕ್ಷಣ ಸುತ್ತಲಿನ ಆಗಸವೆಲ್ಲ ವಿಷಕಾರಿ ವಾತಾವರಣವಾಗಿ ಪರಿವರ್ತನೆಯಾಯಿತು. ಆಕಾಶದಿಂದ ಬೆಂಕಿ ಬಿರುಗಾಳಿ ಬೀಸಿ ಬಂದಂಥ ಅನುಭವ. ಗಾಳಿಯನ್ನು ಹೀರುತ್ತಿದ್ದರೆ, ಹಸಿರು ಮೆಣಸಿನಕಾಯಿಯನ್ನು ಮೂಗಿಗೆ ತುರುಕಿದಂತೆ, ಕಣ್ಣು, ಮೂಗು, ಕಿವಿಗಳಲ್ಲಿ ಬುಳಬುಳನೆ ನೀರು ಹರಿದು ಬರುತ್ತಿತ್ತು. ದಿಕ್ಕಾಪಾಲಾಗಿ ಓಡುತ್ತಿರುವಾಗಲೇ ಗುಂಡು ಹೊಡೆಸಿಕೊಂಡ ಯೋಧ ನೆಲಕ್ಕುರುಳುವಂತೆ ಬೀಳುತ್ತಿದ್ದ ದೇಹಗಳು. ಎತ್ತ ಓಡುವುದೆಂದು ತಿಳಿಯದ ಜನ. ಸೊಳ್ಳೆಗಳಂತೆ ಗಾಳಿ ಹೀರಿ ಸತ್ತು ಬೀಳುತ್ತಿದ್ದವರನ್ನು ರಕ್ಷಿಸಲು ತಮ್ಮ ಜೀವದ ಹಂಗು ತೊರೆದು ರೈಲು ತೆಗೆದುಕೊಂಡು ಹೋಗಿ ಒಂದಷ್ಟು ಜನರನ್ನು ರಕ್ಷಿಸಿದ ರೈಲು ಸಿಬ್ಬಂದಿ. ಸಾವು ನೋವಿನ ಭೀಕರತೆ, ಚೀತ್ಕಾರದ ಧ್ವನಿ ಎಲ್ಲ ಕಡೆ. ನದಿಯ ಪಕ್ಕ ದೊಡ್ಡದೊಂದು ಹೊಂಡ ತೋಡಿ ಎಲ್ಲ ದೇಹಗಳನ್ನು ಮುಚ್ಚಿದರು. ಹೂಳದೆ ಹಾಗೆಯೇ ಬಿಸಾಡಿದ ಅದೆಷ್ಟೋ ಹೆಣಗಳು ಕೊನೆಗೊಮ್ಮೆ ಅಸ್ತಿಪಂಜರವಾಗಿ ಸೇತುವೆಗಳ ಬಳಿ ಜ್ಯಾಮ್ ಆದವು. ಹೀಗೆ ಭೋಪಾಲ್ ವಿಷಾನಿಲ ದುರಂತದ ಭೀಕರತೆಯನ್ನು ಬಿಂಬಿಸುವಲ್ಲಿ ಸೋಲುತ್ತವೆ ಪದಗಳು.



1984ರ ಡಿಸೆಂಬರ್ 2ರಲ್ಲಿ ಸಂಭವಿಸಿದ ವಿಷಾನಿಲ ಸೋರಿಕೆ ದುರಂತದಲ್ಲಿ ತಕ್ಷಣದಲ್ಲಿ ಸತ್ತವರ ಸಂಖ್ಯೆ 3,800. ಸುಮಾರು 1.50 ಲಕ್ಷ ಜನ ಅಂಗವಿಕಲತೆಯಿಂದ, ಕ್ಯಾನ್ಸರಿನಂತಹ ಹತ್ತಲವು ರೋಗರುಜಿನಗಳಿಂದ ನರಳಿದರೆ, ಇದುವರೆಗೆ ಸತ್ತವರ ಸಂಖ್ಯೆ 22,000. ಇದೊಂದು ವಿಶ್ವ ಕಂಡ ಅತಿ ದೊಡ್ಡ ಕೈಗಾರಿಕಾ ದುರ್ಘಟನೆ.

ಅದೇನೂ ಬರೀ 25 ವರ್ಷಗಳ ಹಿಂದೆ ಒಂದು ದಿನ ಸಂಭವಿಸಿ ಮುಗಿದುಹೋದ ದುಷ್ಕೃತ್ಯವಲ್ಲ. ಅಂದು ಶುರುವಿಟ್ಟುಕೊಂಡ ವಿಷಾನಿಲ ಸೋರಿಕೆಯು ಭೋಪಾಲ್ ನಗರದ ಸುತ್ತಮುತ್ತಲೂ ಆವರಿಸಿಕೊಂಡು ಇಂದಿಗೂ ತನ್ನ ದುಷ್ಪರಿಣಾಮಗಳ ಭೀಕರತೆಯನ್ನು ಹರಿಯಬಿಟ್ಟಿದೆ. ಅಂತರ್ಜಲದಲ್ಲಿ ಒಳತೂರಿರುವ ವಿಷಾನಿಲ ಮತ್ತು ವಿಷ ತ್ಯಾಜ್ಯ ವಸ್ತುಗಳಿಂದ ಕೂಡಿದ ಜಲವನ್ನೇ ಸುಮಾರು 25,000 ದಿಂದ 30,000 ಜನತೆ ಬಳಸುತ್ತಿದ್ದಾರೆ. ಆ ಪ್ರದೇಶದ ಹಾಲುಣಿಸುವ ತಾಯಂದಿರ ಎದೆಯಲ್ಲಿ 1,3,5,ಟ್ರೈಕ್ಲೋರೋ ಬೆಂಜೀನ್, ಡೈಕ್ಲೋರೋ ಮೀಥೇನ್, ಕ್ಲೋರೋಫಾರಂ, ಸೀಸ ಮತ್ತು ಪಾದರಸಗಳಂಥಹ ವಿಷ ಬರುತ್ತಿದೆ. ಇಂತಹ ವಿಷಕಾರಿ ರಸಾಯನಿಕಗಳು ಅಲ್ಲಿನ ಮಣ್ಣು ಮತ್ತು



ಅಂತರ್ಜಲಗಳಲ್ಲಿ ಸುಮಾರು 60 ಲಕ್ಷ ಪಟ್ಟು ಇದೆ. ವಿಷಾನಿಲದಿಂದ ಸಂಕಷ್ಟಕ್ಕೆ ಒಳಗಾದ ಪ್ರದೇಶದಲ್ಲಿ ಬದುಕುಳಿದವರಿಗೆ ಗುಣಮಟ್ಟದ ನೀರು, ಪರ್ಯಾಯ ಬದುಕು ಮತ್ತು ಉದ್ಯೋಗ ಕಟ್ಟಿಕೊಡುವಲ್ಲಿ ಬಹುರಾಷ್ಟ್ರೀಯ ಕಂಪನಿಯು ಯೂನಿಯನ್ ಕಾರ್ಬೈಡ್ ಆಗಲಿ, ಅಥವಾ ನಮ್ಮ ಸರ್ಕಾರವಾಗಲೀ ಯಾವುದೇ ಕಾಳಜಿ ಹೊಂದಿಲ್ಲ ಎಂಬುದಕ್ಕೆ 25 ವರ್ಷದಿಂದ ಪರಿಹಾರಕ್ಕಾಗಿ ಹೋರಾಡುತ್ತಿರುವ ಭೋಪಾಲ್ ಸಂತ್ರಸ್ತರೇ ಸಾಕ್ಷಿ.

ಅವಘಡ ಸಂಭವಿಸಿ ಮುಚ್ಚಿಹೋಗಿದ್ದ ಯೂನಿಯನ್ ಕಾರ್ಬೈಡ್ ಕಂಪನಿಯನ್ನು 2001 ರಲ್ಲಿ ಕೊಂಡುಕೊಂಡ ಅಮೇರಿಕಾದ ಬಲಾಢ್ಯ ಕಂಪನಿ 'ಡೋ ಕೆಮಿಕಲ್' ಕೂಡ ಯಾವುದೇ ಪರಿಹಾರ ನೀಡಲು, ವಿಷಯುಕ್ತ ರಸಾಯನಿಕಗಳಿಂದ ಮಲಿನಗೊಂಡಿರುವ ಪ್ರದೇಶವನ್ನು ಶುಚಿಗೊಳಿಸಲು, ಅಲ್ಲಿ ನರಳುತ್ತಿರುವ ಜನತೆಗೆ ವೈದ್ಯಕೀಯ ಸೇವೆ, ಆರೋಗ್ಯ ಮುತುವರ್ಜಿ ವಹಿಸಲು ಮತ್ತು ಸಂತ್ರಸ್ತ ಕುಟುಂಬದವರಿಗೆ ಉದ್ಯೋಗ ಒದಗಿಸಲು ಎಲ್ಲಕ್ಕಿಂತ ಮುಖ್ಯವಾಗಿ ಭೋಪಾಲ್‌ನ ಪ್ರಧಾನ ನ್ಯಾಯಾಧೀಶರ ಮುಂದೆ ಕಟಕಟೆ ಏರಲು ನಿರಾಕರಿಸಿದೆ.

ಸಂತ್ರಸ್ತರಿಗೆ ಇವೆಲ್ಲ ಸೌಲಭ್ಯಗಳನ ಒದಗಿಸಬೇಕೆಂದು ಕೋರ್ಟಿನ ಕಟಕಟೆಯಲ್ಲಿ ವ್ಯಾಜ ನಡೆಯಲಾರಂಭಿಸಿದಾಗ ಅದನ್ನೆದುರಿಸದೆ ದೇಶ ಬಿಟ್ ಪರಾರಿಯಾಗಿ ಅಮೇರಿಕಾದಲ್ಲಿ ಅವಿತುಕೊಂಡಿರು ಯೂನಿಯನ್ ಕಾರ್ಬೈಡ್ ಮುಖ್ಯಸ್ಥನನ ಇದುವರೆಗೂ ನಮ್ಮ ಸರ್ಕಾರಗಳು ಬಂಧಿಸಿಲ್ಲ.

ಅವಘಡವೇ ಅಥವಾ ಕಂಪನಿಯ ದುಷ್ಕೃತ್ಯವೇ?

ಅಪಾಯಕಾರಿ ವಿಷಾನಿಲಗಳನ್ನು ಬಳಸು ಕಂಪನಿಯೊಂದು ತಾನು ಬಳಸುವ ಕಚ್ಛಾವಸ್ತುಗಳ ಮತ್ತು ಉತ್ಪನ್ನಗಳ ಅಪಾಯಗಳ ಕುರಿತು ಕಂಪನಿಯ ಎಲ್ಲ ನೌಕರರಿಗೂ ಮಾಹಿ ನೀಡಬೇಕಾಗುತ್ತದೆ. ಅಪಘಾ ಸಂಭವಿಸದಂತೆ ಅಗತ್ಯ ಸುರಕ್ಷಾ ಕ್ರಮಗಳನ ಅತ್ಯುತ್ತಮ ತಂತ್ರಜ್ಞಾನವನ್ನು ಅದ ಅಳವಡಿಸಿಕೊಂಡಿರಬೇಕು ಅಪಘಾತವೇನಾದರೂ ಸಂಭವಿಸಿ ಪಕ್ಷದಲ್ಲಿ ಕೈಗೊಳ್ಳಬೇಕಾದ ತುರ್ತು ಕ್ರಮಗ ಕುರಿತು ಈ ಮೊದಲೇ ಯೋಜನೆ ರೂಪಿ ವೈದ್ಯಕೀಯ ಸಿಬ್ಬಂದಿ, ಔಷಧಿಗಳನ ಸಂಗ್ರಹಿಸಿಟ್ಟುಕೊಳ್ಳಬೇಕು. ಆದರ ಕಂಪನಿಯು ಇವೆಲ್ಲ ಮುಂಜಾಗ್ರತ ಕ್ರಮಗಳನ್ನು ವಹಿಸದಿರುವುದನ್ನು ನೋಡಿದರೆ ಇದ ಕಂಪನಿಯು ಎಸಗಿರುವ ಅಪರಾಧವಲ್ಲದೇ ಬೇರೇನು ಅಲ್ಲ. ಕಂಪನಿಯ ಆಂತರಿಕ ದಾಖಲೆಗಳ ಪ್ರಕಾರ ಅಗತ್ಯ ಸುರಕ್ಷಾ ಕ್ರಮಗಳನ್ನು ಅಳವಡಿಸಿಕೊಳ್ಳ ಒಬಿರಾಯನ ತಂತ್ರಜ್ಞಾನ ಬಳಸುತ್ತಾ, 3 ಸಿಬ್ಬಂದಿಯನ್ನು ಕೆಲಸದಿಂದ ತೆಗೆದು ಅವರ ಮೇಲ ವೆಚ್ಚವೂ ಸೇರಿದಂತೆ ವಾರ್ಷಿಕ ರೂ. 5.5ಕೋ ಹಣ ಉಳಿತಾಯ ಮಾಡುತ್ತಿತ್ತು. ಕಂಪನಿಯಲ್ಲಿ ಅಪಘಾತಗಳು ಸಂಭವಿಸುವುದಿದ್ದು, ಅವುಗಳಲ್ಲಿ ದೊಡ್ಡ ಅಪಘಾತಗಳಾದರೆ, ಉಳಿದವು ಸ ಅಪಾಯಗಳು ಎಂದು ಸುರಕ್ಷಾ ಆಡಿಟ ತಿಳಿಸಿದ್ದಾಗ್ಯೂ ಕಂಪನಿಯು ಇವೆಲ್ಲ ಮುನ್ಸೂಚನೆಗಳ ಕಡೆಗಣಿಸಿತ್ತು.

ಯೂನಿಯನ್ ಕಾರ್ಬೈಡ್ ಕಂಪನಿಯ ಹೊ ಮಾಲೀಕ 'ಡೋ ಕೆಮಿಕಲ್' ಕಂಪನಿಯ ಅಮೇರಿಕಾದ ದೈತ್ಯ ಕಂಪನಿಗಳಲ್ಲಿ ಒಂದು ಕಾರ್ಖಾನೆಯ ಪ್ರದೇಶದಲ್ಲಿ ಸಂಸ್ಕರಣೆ ಮಾಡ ಹಾಗೆಯೇ ಬಿದ್ದಿರುವ ಅಗಾಧ ವಿಷಕಾ ರಸಾಯನಿಕಗಳು ಮತ್ತು ತ್ಯಾಜ್ಯಗಳನ್ನು ಸಂಸ್ಕರಿಸಲ 25 ವರ್ಷಗಳಿಂದೀಚೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಹೊಸ ಮಾಲೀಕ ಕಂಪನಿಯೂ ಕೂ ಅದಕ್ಕೆ ತಗಲುವ ವೆಚ್ಚ ಭರಿಸಲು ಸಿದ್ಧವಿಲ್ಲ. ಹಿನ್ನೆಲೆಯಲ್ಲಿ ಭೋಪಾಲ್ ವಿಷಾನಿಲ ಸೋ

ಪುಟ 1



ಅನೈತಿಕ ತೇಪೆ ಮತ್ತು ಅದರಲ್ಲಿ ಹರಕು


ಬಿಜೆಪಿ ದರ್ಬಾರ್

ಗಣಿ ಲೂಟಿಕೋರರ ಬಂಡಾಯಕ್ಕೆ ತೇಪೆ ಬಿದ್ದಿದೆ. ರೆಡ್ಡಿ ಬಳಗದ ಹಲವು 'ಬೇಡಿಕೆ'ಗಳ ಈಡೇರಿಕೆ ಆರಂಭವಾಗಿದೆ. ಸಚಿವೆ ಶೋಭಾ ಕರಂದ್ಲಾಜೆ ರಾಜಿನಾಮೆ, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಬಿ.ಪಿ.ಒಳಿಗಾರ್ ವರ್ಗಾವಣೆ, ವರ್ಗವಾಗಿದ್ದ ಬಳ್ಳಾರಿ ಜಿಲ್ಲಾಧಿಕಾರಿ ವಾಪಸ್ಸಾತಿ ...ಮ್ಯಾದಿ ಇತ್ಯಾದಿಗಳು ನಡೆಯುತ್ತಿವೆ. ಇವೆಲ್ಲಾ ಹೊರಗೆ ಕಾಣುವ ಚಿತ್ರಣ. ಒಳಗಿಂದೊಳಗೆ ರಾಜ್ಯಕ್ಕೆ, ದೇಶಕ್ಕೆ, ಜನತೆಗೆ ದ್ರೋಹ ...ಗೆಯುವಂತಹ ಯಾವ ಯಾವ 'ಡೀಲ್'ಗಳು ನಡೆದಿವೆಯೋ ಇನ್ನೂ ಬಯಲಾಗಬೇಕಿದೆ.

ದೆಹಲಿಯಲ್ಲಿ ಸುಶ್ಮಾಸ್ವರಾಜ್ ಸಮ್ಮುಖದಲ್ಲಿ ರಾಜಿ ಪಂಚಾಯ್ತಿ ನಡೆದಾಗ ಮುಖ್ಯಮಂತ್ರಿ ಯಡಿಯೂರಪ್ಪ, ಗಣಿ ಲೂಟಿಕೋರ ಜನಾರ್ಧನ ರೆಡ್ಡಿ ಪರಸ್ಪರ ಕೈ ಕೈ ಹಿಡಿದೆತ್ತಿ, ಸಿಹಿ ತಿನ್ನಿಸಿ ಪತ್ರಿಕೆ ಟಿ.ವಿ.ಗಳಿಗೆ ಷೋ ಕೊಟ್ಟಿದ್ದಾಯ್ತು. ಕನ್ನಂಬಾಡಿಯಲ್ಲಿ ಕಂಬಳಿ ಕಿತ್ತುಕೊಂಡರೆ ಹಾಸನಕ್ಕೆ ಬಂದು ಹಲ್ಲು ಕಚ್ಚಿದರು ಎಂಬಂತೆ ಮುಖ್ಯಮಂತ್ರಿಗಳ ಮೈ ಪರಚಿಕೊಳ್ಳುವುದು ನಂತರ ಆರಂಭವಾಗಿದೆ.

ದೆಹಲಿಯಲ್ಲಿ ಮುಖ್ಯಮಂತ್ರಿಗಳು ವೈಷ್ಣವಿ ದೇವಿ ದೇವಾಲಯಕ್ಕೆ ಭೇಟಿ ನೀಡಿದ್ದಾರೆ. ಅಲ್ಲಿ 'ಹಣಬಲ, ತೋಳ್ಬಲವುಳ್ಳವರಿಗೆ ಮಣಿಯಲಾರದಂತೆ ತನಗೆ ಶಕ್ತಿ ಕೊಡು ದೇವಿ' ಎಂದು ಪ್ರಾರ್ಥಿಸಿದಂತೆ ಅದನ್ನು ಅವರೇ ಹೇಳಿಕೊಂಡಿದ್ದಾರೆ.

ಬೆಂಗಳೂರಿನಲ್ಲಿ ಅರಣ್ಯ ಇಲಾಖೆಯ ಸಮಾರಂಭವೊಂದರಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾ 'ಕರ್ನಾಟಕದಲ್ಲಿ ಯಾವ ರೀತಿ ಅರಣ್ಯ ಸಂಪತ್ತು, ನಿಸರ್ಗ ಸಂಪತ್ತು ಲೂಟಿಯಾಗುತ್ತಿದೆ ನಿಮಗೆ ಗೊತ್ತಿದೆ. ನೀವು ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕ್ರಮ ವಹಿಸಿ, ನಾನು ಅಸಹಾಯಕ. ಹೆಚ್ಚಿಗೆ ಏನನ್ನು ಹೇಳುವ ಸ್ಥಿತಿಯಲ್ಲಿಲ್ಲ' ಎಂದಿದ್ದಾರೆ.



ಮತ್ತೊಂದು ಕಡೆ ಮಾತನಾಡಿ 'ನನ್ನನ್ನು ನಂಬಿದವರಿಗೆ ನ್ಯಾಯ ಕೊಡಿಸಲಾಗಲಿಲ್ಲ. ನನ್ನನ್ನು ದೇವರು ಕ್ಷಮಿಸಲಾರ' ಎಂದು ಅಲವತ್ತುಕೊಂಡಿದ್ದಾರೆ. ಮೈಸೂರಿನಲ್ಲಿ ಹೋಮ ನಡೆಸಿ 'ಪೂರ್ಣಾಹುತಿ' ಸಲ್ಲಿಸಿ ಏನೇನೋ ಇಂತಹ ಅಸಹಾಯಕ ಅಲಾಪಗೈದಿದ್ದಾರೆ.

ಯಡಿಯೂರಪ್ಪ ತಾನು ಮಾತ್ರ ಮಹಾ ಸಾಚಾ, ರೆಡ್ಡಿ ಬಳಗ, ಹಣವಂತರು, ಲೂಟಿಕೋರರರು ಎಂದು ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಇವೆಲ್ಲಾ ನಯ ವಂಚನೆ, ಮೊಸಳೆ ಕಣ್ಣೀರು ಮಾತ್ರ. ತಿಕ್ಕಾಟ ಇರುವುದು ರೆಡ್ಡಿ ಬಳಗ ಹೆಚ್ಚು ಲೂಟಿ ಮಾಡಬೇಕೋ, ಅಥವಾ ಲೂಟಿಯ ಅವಕಾಶ ಹೆಚ್ಚು ಯಡಿಯೂರಪ್ಪ ಅಂಡ್ ಕಂಪನಿಗೆ ಸಿಗಬೇಕೋ ಎಂಬುದಷ್ಟೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಅಶೋಕ್, ಶೋಭಾ ಕರಂದ್ಲಾಜೆ ಮಾಲೂರಿನ ಕೃಷ್ಣಯ್ಯಶೆಟ್ಟಿ, ಸ್ವತಃ ಸಿಎಂ ರ ಪುತ್ರ ರಾಘವೇಂದ್ರ ರಾಯರ ಮಹಿಮೆಯನ್ನು ಬಲ್ಲವರ ಮುಂದೆ ಯಡಿಯೂರಪ್ಪನವರ ಕಣ್ಣೀರು ಏನೂ ಕೆಲಸ ಮಾಡುವುದಿಲ್ಲ.

ತೇಪೆ ಮತ್ತೆ ಹರಕು

ಯಡಿಯೂರಪ್ಪ, ಜನಾರ್ಧನ ರೆಡ್ಡಿ ಬಾಯಿ ಬಾಯಿ ಎಂದಾದ ಮೇಲೆ ಸಚಿವ ಸಂಪುಟದ ಸಭೆಯಲ್ಲಿ ಮತ್ತೆ ತೋಳೇರಿಸಿದ 'ಗರಂ' ಸುದ್ದಿ ಬಂದಿದೆ. ಸಚಿವ ಸಂಪುಟದಲ್ಲಿ ಯಡಿಯೂರಪ್ಪ ಶಿವಮೊಗ್ಗದಲ್ಲಿ ಸ್ಥಾಪನೆ ಮಾಡಲು ಉದ್ದೇಶಿಸಿರುವ ಜವಳಿ ಪಾರ್ಕ್ ಬಗೆಗೆ ಚರ್ಚೆಗೆ ಪ್ರಸ್ತಾಪಿಸಿದರಂತೆ, ಜವಳಿ ಸಚಿವ ಗೂಳಿಹಟ್ಟಿ ಚಂದ್ರಶೇಖರ್ (ರೆಡ್ಡಿ ಬಣ) ಅವರಿಗೆ ವಿಷಯವೇ ಗೊತ್ತಿಲ್ಲ. ಈಗ ಬೇಡ ಅಂದರಂತೆ ರೆಡ್ಡಿ. 'ತದಡಿ ಬಂದರು ಅಭಿವೃದ್ಧಿ' ವಿಷಯವನ್ನು ಜನಾರ್ಧನ ರೆಡ್ಡಿ ಪ್ರಸ್ತಾಪಿಸಿದಾಗ ಯಡಿಯೂರಪ್ಪ ವಿಷಯ ಮುಂದಕ್ಕೆ ಹಾಕಿಸಿದರಂತೆ. ಈ ಸಂಬಂಧ ಸ್ವಲ್ಪ 'ನುಡಿ-ಕಿಡಿ' ಹಾರಿತು ಅಂತ ಸುದ್ದಿ. ಇವೆಲ್ಲಾ ಅವತಾರ ನೋಡಿದರೆ ಈ ತೇಪೆ ಎಷ್ಟು ದಿನ ಉಳಿದೀತು ಎಂಬ ಸಂಶಯ ಬರುವುದು ಮಾತ್ರವಲ್ಲ ಇದು ಎಷ್ಟು ಅನೈತಿಕ ಎಂಬುದನ್ನು ಸಹ ಬಯಲಾಗುತ್ತಿದೆ.

ಗಣಿ ಮಾಫಿಯಾ ಬ್ಲಾಕ್‌ಮೇಲ್ .....

...ಟ 3 ರಿಂದ

...ನದ್ರೋಹಿಗಳು

ನೆರೆಹಾವಳಿಯಲ್ಲಿ ನಲುಗುತ್ತಿರುವ ಜನತೆಯನ್ನು ...ಲ್ಲಿಯೇ ನರಳುವಂತೆ ಮಾಡಿ ಹೈದ್ರಾಬಾದ್, ...ೕವಾಗಳಲ್ಲಿ ಮಜಾ ಮಾಡಿ ರಾಜಕೀಯ ...ಧೆಯಲ್ಲಿ ನಿರತರಾಗಿದ್ದ ಶಾಸಕ ಮಹೋದಯರು ...ಕ್ಷಮ್ಯ ಕ್ರಿಮಿನಲ್ ಅಪರಾದವೆಸಗಿದ್ದಾರೆ. ಜನತೆ ...ದ್ದ ನಂಬಿಕೆ, ನಿರೀಕ್ಷೆಗಳಿಗೆ ದ್ರೋಹವೆಸಗಿ, ಅವರ ...ಬಲವನ್ನೇ ರಾಜಕೀಯ ದಂಧೆಗಾಗಿ ಹರಾಜಿಗಿಟ್ಟು ...ಪಮಾನವೆಸಗಿದ್ದಾರೆ. ಇಂತಹ ಜನದ್ರೋಹಿಗಳು ...ಭಿವೃದ್ಧಿ ಅಧ್ಯಯನ ಮಾಡಲು ತೆರಳಿದ್ದೇವೆಂದು ...ಳುವ ಮಟ್ಟಕ್ಕೆ ತಲುಪಿರುವುದು ಭಂಡತನದ ...ರಮಾವಧಿ. ಇಂತಹವರಿಗೆ ಜನತೆ ಬುದ್ದಿ ...ಸಬಾರದೇ?

...ದಗೆಟ್ಟ ಕಾನೂನು

ರಾಜ್ಯದಲ್ಲಿ ಕಾನೂನು ಸುವ್ಯಸ್ಥೆಯ ವೈಫಲ್ಯ ...ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಅಪರಾಧಿಗಳೇ ...ಧಿಕಾರ ನಡೆಸುವಂತಾದರೆ, ಮಾಫಿಯಾಗಳ ...ಟಿಸ್ತಿಕೆಯ ಊರುಗೋಲಿನಲ್ಲಿ ಸರ್ಕಾರ ನಡೆದರೆ, ...ತ ರಾಜಕೀಯ ವರ್ಗಾವಣೆ ದಂಧೆ ಮುಂತಾದ ...ುಗಳಿಂದ ಆಡಳಿತ ಯಂತ್ರದ ಸ್ಥೈರ್ಯವನ್ನೇ ...ಯುವಂತೆ ಮಾಡಿದರೆ, ಇನ್ನೆಂತಹ ಪರಿಣಾಮ ...ರಿತು. ಬೆಂಗಳೂರಿನಂತಹ ಮಹಾನಗರದಲ್ಲಿ ...ಷ್ಟಾ ಕೊಲೆ, ಮನೆಗಳ್ಳತನ, ದರೋಡೆ ಮುಂತಾದ ...ಗಳು ನಡೆಯುತ್ತಲೇ ಇವೆ. ಉಳಿದೆಡೆಯೂ ...ಕೆಯುತ್ತಿವೆ. ಕರಾವಳಿಯಲ್ಲಿ ಕೋಮುವಾದಿ ...ಮಿನಲ್ ಗ್ಯಾಂಗ್‌ಗಳ ಧಾಳಿಗಳಿಗೆ ನಿಯಂತ್ರಣವೇ ...ಇಲ್ಲಿ ಕಾನೂನು ಪರಿಸ್ಥಿತಿಯನ್ನು ಯಾರು ನಿಯಂತ್ರಿಸುತ್ತಾರೆ? ಅರಾಜಕ ಸ್ಥಿತಿ ಸಾರ್ವಜನಿಕವಾಗಿ ಹುಟ್ಟಿಸಲಾಗುತ್ತಿದೆ. ಜನರ ಜೀವನ, ಜೀವನ ರಕ್ಷಣೆ ಸರ್ಕಾರ ತನ್ನ ಹೊಣೆಯಲ್ಲವೆಂದೇ ಭಾವಿಸಿದಂತಿದೆ. ಬೆಲೆ ಏರಿಕೆ ರೇಷನ್ ಸಮಸ್ಯೆ, ಕೂಲಿ ಪ್ರಶ್ನೆಗಳು ಸರ್ಕಾರದ ಅಜೆಂಡದಲ್ಲೇ ಇಲ್ಲ. ಅಸಂಘಟಿತ ಕಾರ್ಮಿಕರ ಸಮಸ್ಯೆಗಳಿಗೆ ಪರಿಹಾರ ನೀಡುವ ದಿಶೆಯಲ್ಲಿ ಸಭೆ ನಡೆಸಲು ನೆರೆಹಾವಳಿ ಕಾರಣ ಹೇಳಿದವರು ಇದೀಗ ರಾಜಕೀಯ ದಂಧೆ ಮಾಡಲು ಅದು ಪ್ರಶ್ನೆಯಾಗುವುದಿಲ್ಲ. ಜನರ ಗೋಳು ಕೇಳದ ಈ ಸರ್ಕಾರ ಇರುವುದಾದರೂ ಯಾಕೆ? ಒಡೆದ ಮಡಕೆಯಾಗಿ ಹೋಗಿರುವಾಗ ?

ಸಚಿವ ಸ್ಥಾನ ತೆರವು ಮಾಡಿದ ಶೋಭಕ್ಕನಿಗೆ ಹುತಾತ್ಮಪಟ್ಟ ಕಟ್ಟಲು ಮಾಧ್ಯಮಗಳೂ ಸೇರಿದಂತೆ ಹಲವರು ನಿರತರಾಗಿದ್ದಾಗ. ಸರ್ಕಾರದ, ಪಕ್ಷದ ಇಂತಹ ಅಕ್ರಮಗಳನ್ನು ಏನೊಂದೂ ಪ್ರಶ್ನಿಸದೇ ಸಮರ್ಥಿಸಿಕೊಂಡು ಬಂದುದನ್ನು ಅವರೇ ಮರೆತುಬಿಟ್ಟಾರೆ ಹೇಗೆ? ಈ ಸರ್ಕಾರ ಅಸ್ತಿತ್ವಕ್ಕೆ ಬಂದಲಾಗಾಯ್ತು ಮತ್ತು ನಂತರದ ದಿನಗಳಲ್ಲಿ ಸರ್ಕಾರದ ಎಲ್ಲಾ ನಿರ್ಧಾರ, ಅಕ್ರಮ, ಆಪರೇಷನ್‌ಗಳಲ್ಲಿ ಭಾಗಿದಾರಳಾಗಿದ್ದು, ಶಾಂತಿ, ಸುವ್ಯವಸ್ಥೆ ಕಾನೂನು ಮೇಲೆ ಕೋಮುಧಾಳಿ ನಡೆದಾಗ 'ನಿಷ್ಠ ಸ್ವಯಂ ಸೇವಕಿ'ಯಾಗಿ ಸಮರ್ಥಿಸಿಕೊಂಡು ಹರಿವ ನೀರಿನಲ್ಲಿ ತೇಲಿದ್ದು ಮರೆಯಾಯಿತೇ. ಇಂತಹ ಸಂದರ್ಭದಲ್ಲಿ ಬೇರೆಡೆ ಜನತೆಯ ಪ್ರಜಾಸತ್ತಾತ್ಮಕ ಆಂದೋಲನ.

ಸರ್ಕಾರದ ಜುಟ್ಟು ಫ್ಯಾಸಿಸ್ಟ್ ಸಂಸ್ಥೆಯ ಕೈಗೆ

ಬಿಜೆಪಿಯೊಳಗಿನ ಆಂತರಿಕ ಸ್ಥಿತಿಯನ್ನೇ ಬಳಸಿ ಅದರ ಮೇಲೆ ತನ್ನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಲು ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪ್ರಯತ್ನಿಸುತ್ತಿದೆ. ಈಗಾಗಲೇ ಅದರ ಸರಸಂಚಾಲಕ ಭಾಗ್ವತ್ ಬಿಜೆಪಿಯ ಇಂದಿನ ನಾಯಕತ್ವದ ನಿರ್ಗಮನಕ್ಕೆ ಅಧ್ಯಕ್ಷರಾಗಿ ಹೊಸಬರನ್ನು ನೇಮಿಸಲು ಪ್ರಕ್ರಿಯೆ ಆರಂಭಿಸಿದ್ದಾರೆ. ಇದೇ ಹೊತ್ತಿನಲ್ಲಿ ಕರ್ನಾಟಕದ ಮುಖ್ಯವಾಗಿ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಲು ಇಂದಿನ ಬಿಕ್ಕಟ್ಟನ್ನೇ ಬಳಸಿದ್ದಾರೆ. ಯಡಿಯೂರಪ್ಪ ಮತ್ತು ಸರ್ಕಾರದ ಮೇಲೆ ನಿಗಾವಹಿಸಲು ನೇಮಿಸಲಾಗಿರುವ ಸಮಿತಿಯ ನೇತೃತ್ವವನ್ನು ಸುಷ್ಮಾ ಸ್ವರಾಜ್ ವಹಿಸಲಿದ್ದಾರೆ. ಸದಾನಂದಗೌಡ, ಅನಂತಕುಮಾರ್, ರೆಡ್ಡಿ ಸಹೋದರರ ಪೈಕಿ ಒಬ್ಬರು, ಈಶ್ವರಪ್ಪ, ಸಂಪುಟ ಸೇರಿದರೆ ಶೆಟ್ಟರ್ ಅಲ್ಲಿ ಇರುತ್ತಾರೆ. ಇವರು ಪಕ್ಷದ ಅಥವಾ ಚುನಾಯಿತ ಸದಸ್ಯರು ಎಂದಿಟ್ಟುಕೊಂಡರೂ ಬಹುತೇಕರು ಸಂಘ ನಿಷ್ಠರು. ಆದರೆ ಅಖಿಲ ಭಾರತ ಆರ್.ಎಸ್‌ಎಸ್. ಕೇಂದ್ರದಿಂದ ವಿ.ಸಂತೋಷ್ ಹಾಗೂ ರಾಜ್ಯದಿಂದ ಸಂತೋಷ್ ಎಂಬಿಬ್ಬರು ಸರ್ಕಾರ ಹಾಗೂ ಪಕ್ಷಕ್ಕೆ ಏನೊಂದೂ ಸಂಬಂಧವೇ ಇಲ್ಲದ, ಉತ್ತರದಾಯಿತ್ವವೇ ಇಲ್ಲದ ಪಕ್ಕಾ ಚಡ್ಡಿಗಳನ್ನು ಸೇರಿಸಲಾಗಿದೆ. ಅಲ್ಲದೆ ರಾಷ್ಟ್ರ ಮುಖಂಡ ರಾಮಲಾಲ್ ಎಂಬ ಇನ್ನೊಂದು ಚಡ್ಡಿ ಆಡಳಿತದ ಮೇಲೆ ಸತತ ಕಣ್ಗಾವಲು ಇಡಲಿದೆ. ಅಂದರೆ ಪೂರ್ಣವಾದ ನಿಯಂತ್ರಣ, ನಿರ್ದೇಶನಮವನ್ನು ಫ್ಯಾಸಿಸ್ಟ್ ಸಂಘ ವಹಿಸಲಿದೆ. ಅಂದರೆ ಜನತೆಯ ಪರಿಮಾಧಿಕಾರಕ್ಕೆ ಜನ ಹಾಗೂ ಸಂವಿಧಾನ ನಿಷ್ಠೆ ಎಂಬುದು ಎಲ್ಲಿ?

ಈಗಾಗಲೇ ರಾಜ್ಯ ಸರ್ಕಾರದ ಪ್ರತಿ ಸಚಿವರ ಜೊತೆ ಒಬ್ಬ ಸ್ವಯಂ ಸೇವಕನನ್ನು ನೇಮಿಸಲಾಗಿದೆ. ಇಲಾಖೆ ಮತ್ತು ಸರಘದ ನಡುವೆ ಸಮನ್ವಯ ಯಜಮಾನಿಕೆ ಮಾಡುತ್ತಿದೆ. ಸಂಘದ ಬೈಠಕ್‌ಗಳಲ್ಲಿ ಮುಖ್ಯಮಂತ್ರಿ, ಸಚಿವರು ಪಾಲ್ಗೊಳ್ಳುತ್ತಾರೆ ಹಾಗೂ ನಿರಂತರ ಸಮಾಲೋಚನೆಗಳು ಕೇಶದ ಶಿಲ್ಪದಲ್ಲಿ ನಡೆಯುತ್ತವೆ. ಮೈಸೂರಿನಲ್ಲಿ ವಿಶೇಷವಾದ ಕಾರ್ಯಾಗಾರ ನಡೆಸಿ ಮೋದಿ ಪಾಠ ನಡೆಸಿದೆ ಒಂದು ದೀರ್ಘಾವಧಿ ಕಾರ್ಯತಂತ್ರ ರೂಪುಗೊಂಡಿದೆ.

ಒಂದೆಡೆ ಜನರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಾ, ಇನ್ನೊಂದೆಡೆ ಕೋಮುವಾದದ ಅಜೆಂಡಾ ಬೆಂಬಲಿಸಿ ಜಾರಿಗೊಳಿಸುತ್ತಾ ಬಿಜೆಪಿ ಬಂದಿತ್ತು. ಒಟ್ಟಾರೆ ಹೆಚ್ಚು ವಿಶಾಲವಾದ ಕೆಲವು ಪ್ರಶ್ನೆಗಳೊಂದಿಗೆ ವಿವಿಧ ರಾಜಕೀಯ, ಸಾಮಾಜಿ, ಆರ್ಥಿಕ ಕಾರಣಗಳಿಂದಾಗಿ, ನಾಡಿನ ಜನತೆ ಬಿಜೆಪಿಯನ್ನು ಅಧಿಕಾರಕ್ಕಿರಿಸಿದ ಬೆಂಬಲವನ್ನು ನೀಡಿದ ಅಧಿಕಾರವನ್ನು ಸಂಘ ಪರಿವಾರ ತನ್ನ ಕೋಮುವಾದ ಅಜೆಂಡಾಕ್ಕೆ, ಸೌಹಾರ್ದತೆ, ಶಾಂತಿಯ ಕರ್ನಾಟಕವನ್ನು ಹತ್ಯಾಕಾಂಡದ ಗುಜರಾತನ್ನಾಗಿಸಲು ಪರಿವರ್ತಿಸಲು ಕಸರತ್ತು ನಡೆಸಿದೆ. ಇದು ರಾಜ್ಯದ, ದೇಶದ ಹಿತಕ್ಕೆ ಆಪತ್ತು ತರುವ ಸಿದ್ಧತೆಯಾಗಿದೆ.

ಜಗದಗಲ

ಶರತ್‌ಚಂದ್ರ

ಲಾಭ V/s ಆರೋಗ್ಯ - ಸುಧಾರಣೆಗಳ ಬಗ್ಗೆ ವಿವಾದ

ಅಧ್ಯಕ್ಷ ಒಬಾಮಾ ಅಮೆರಿಕದ ರೋಗಗ್ರಸ್ತ ಆರೋಗ್ಯ ಸೇವೆಯಲ್ಲಿ ಕೆಲವು ಸುಧಾರಣೆಗಳನ್ನು ತರುವ ಕರಡು ಮಸೂದೆ ತಂದಿದ್ದು, ಆ ಬಗ್ಗೆ ವಿರೋಧಿ ರಿಪಬ್ಲಿಕನ್ ಪಕ್ಷ ತೀವ್ರ ವಿವಾದ ಎಬ್ಬಿಸಿದೆ. 'ಆರೋಗ್ಯ ಸೇವೆಯನ್ನು ರಾಷ್ಟ್ರೀಕರಿಸಲಾಗುತ್ತಿದೆ', 'ಒಬಾಮಾ ಹಿಟ್ಲರ್ ತರಹ ಆಡುತ್ತಿದ್ದಾರೆ', 'ಒಬಾಮಾ ಸೋಶಲಿಸ್ಟ್ ತರಹ ಆಡುತ್ತಿದ್ದಾರೆ' ? ಇದು ರಿಪಬ್ಲಿಕನ್ನರ ಕೆಲವು ಆಪಾದನೆಗಳು. ಹೌದು ! 'ರಾಷ್ಟ್ರೀಕರಣ', 'ಸೋಶಲಿಸ್ಟ್' ಎನ್ನುವುದು ಅಮೆರಿಕದ ರಿಪಬ್ಲಿಕನ್ನರಿಗೆ 'ಹಿಟ್ಲರ್' ನಷ್ಟೇ ಕೆಟ್ಟ ಬೈಗಳುಗಳು! ಯಾವುದೇ ರೀತಿಯ ಆರೋಗ್ಯ ಸೇವೆಯಿಂದ ವಂಚಿತರಾದ ಬಡವರಿಗೆ ಅದನ್ನು ಒದಗಿಸುವುದು ಮತ್ತು ಆರೋಗ್ಯ ಸೇವೆಯ ಏರುತ್ತಿರುವ ಬೆಲೆಗಳಿಗೆ ಕಡಿವಾಣ ಹಾಕುವುದು? ಒಬಾಮಾರ ಪ್ರಮುಖ ಚುನಾವಣಾ ಆಶ್ವಾಸನೆಗಳಲ್ಲಿ ಒಂದಾಗಿತ್ತು. ಅದರ ಪರವಾಗಿ ಅವರಿಗೆ ಭಾರೀ ಜನಾದೇಶ ಸಿಕ್ಕಿದೆ ಕೂಡಾ.

ಭರವಸೆ ಜಾರಿಗೆ ವಿರೋಧ

ಆದರೆ ಆ ಆಶ್ವಾಸನೆ ಜಾರಿ ಮಾಡುವುದನ್ನು ರಿಪಬ್ಲಿಕನ್ ಪಕ್ಷ ತೀವ್ರವಾಗಿ ವಿರೋಧಿಸುತ್ತಿದೆ. ಆರೋಗ್ಯ ಸೇವೆ ಸುಧಾರಣೆಗಳ ಕರಡು ಮಸೂದೆ ವಿರುದ್ಧ ರಿಪಬ್ಲಿಕನ್ ಪಕ್ಷ ಸಂಘಟಿಸಿದ ಪ್ರತಿಭಟನಾ ಸಮಾವೇಶದಲ್ಲಿ ಒಂದು ವಿಚಿತ್ರ ಕಟೌಟ್ ಪ್ರದರ್ಶಿಸಲಾಯಿತು. ದಚಾವು ಎಂಬ (ಎರಡನೇ ಮಹಾಯುದ್ಧ ಕಾಲದ) ಕುಖ್ಯಾತ ನಾಜಿ ಜರ್ಮನಿಯ ನರಮೇಧದ ಹೆಣಗಳ ರಾಶಿಯ ಮೇಲೆ 'ನ್ಯಾಶನಲ್ ಸೋಶಲಿಸ್ಟ್ ಆರೋಗ್ಯ ಸೇವೆ' ಎಂಬ ತಲೆಬರಹ ಇತ್ತು ! ರಿಪಬ್ಲಿಕನ್ ಪಕ್ಷ ಒಬಾಮಾ ಸುಧಾರಣೆಗಳ ಬಗ್ಗೆ ಇಂತಹ ಹಲವು ಅರ್ಥಹೀನ, ಹಸಿ ಹಸಿ ಸುಳ್ಳುಗಳ ಕ್ಷುಲ್ಲಕ ಪ್ರಚಾರ ಕೈಗೊಂಡಿದೆ. ಒಬಾಮಾ ಸುಧಾರಣೆಗಳಿಂದ ಗರ್ಭಪಾತ ಹೆಚ್ಚುತ್ತವೆ. ಶಿಶುಗಳ ಮತ್ತು ಕೈಲಾಗದ ವೃದ್ಧ, ವೃದ್ಧೆಯರ ಹತ್ಯೆಗಳು ನಡೆಯುತ್ತವೆ ಎಂಬುದು ರಿಪಬ್ಲಿಕನ್ ಅಪಪ್ರಚಾರ.

ರೋಗಗ್ರಸ್ತ ವಿಮೆ ವ್ಯವಸ್ಥೆ

ಅಮೆರಿಕದ ಆರೋಗ್ಯ ಸೇವೆ ಇತರ ಹೆಚ್ಚಿನ ಅಭಿವೃದ್ಧಿ ಹೊಂದಿದ ದೇಶಗಳಂತೆ ಜನರ ಹೆಚ್ಚಿನ ಆರೋಗ್ಯ ಸೇವೆಯನ್ನು ಕಡಿಮೆ ವೆಚ್ಚದಲ್ಲಿ ಒದಗಿಸುವ ಸಾರ್ವತ್ರಿಕ ವ್ಯವಸ್ಥೆ ಎಂದೂ ಆಗಿರಲಿಲ್ಲ. ಈಗಲೂ ಅಲ್ಲ. ಅದು ವಾರ್ಷಿಕ ಆರೋಗ್ಯ ವಿಮೆ ಆಧಾರಿತ ವ್ಯವಸ್ಥೆ. ಆರೋಗ್ಯ ವಿಮೆಯಲ್ಲಿ ಸರ್ಕಾರದ ಪಾತ್ರ ಅಥವಾ ಸಬ್ಸಿಡಿ ಅಂತ ಏನೂ ಇಲ್ಲ. ಆರೋಗ್ಯ ವಿಮೆ ಬೆರಳೆಣಿಕೆಯ ದೈತ್ಯ ಖಾಸಗಿ ಕಂಪನಿಗಳು ನಡೆಸುವ ದೊಡ್ಡ ಉದ್ಯಮ. ಅಮೆರಿಕದ ಒಟ್ಟು ಆರ್ಥಿಕ ವಹಿವಾಟಿನ ಆರನೇ ಒಂದು ಭಾಗ ಈ ಆರೋಗ್ಯ ವಿಮೆ ಉದ್ಯಮ ಎಂದರೆ ಈ ಕಂಪನಿಗಳ ಬಲ ತಿಳಿಯುತ್ತದೆ. 50 ರಾಜ್ಯಗಳಲ್ಲಿ 35 ರಾಜ್ಯಗಳಲ್ಲಿ ಆರೋಗ್ಯ ವಿಮೆ ಉದ್ಯಮದ ಮುಕ್ಕಾಲು ಭಾಗ ಐದು ಅಥವಾ ಅದಕ್ಕಿಂತ ಕಡಿಮೆ ಕಂಪನಿಗಳು ನಿಯಂತ್ರಿಸುತ್ತವೆ. ರಿಪಬ್ಲಿಕನ್ ಪಕ್ಷದ ಈ ದಾಂಧಲೆಗಳ ಹಿಂದಿರುವುದು ಈ ಕಂಪನಿಗಳ ಬಲ.

ಕಳೆದ 10 ವರ್ಷಗಳಲ್ಲಿ ಕುಟುಂಬದ ಆರೋಗ್ಯ ವಿಮೆ ವೆಚ್ಚ ಇಮ್ಮಡಿಗಿಂತ ಹೆಚ್ಚಾಗಿದೆ. ಈ ವೆಚ್ಚ ಕಾರ್ಮಿಕರ ಇದೇ ಅವಧಿಯಲ್ಲಿ ವೇತನದ ಏರಿಕೆಯ ದರದ ಮೂರರಷ್ಟು ದರದಲ್ಲಿ ಏರಿದೆ. ಇತರ ಅಭಿವೃದ್ಧಿ ಹೊಂದಿದ ದೇಶಗಳ ಜನರ ಆರೋಗ್ಯ ವೆಚ್ಚದ ಇಮ್ಮಡಿಯಷ್ಟು ಅಮೆರಿಕನ್ನರು ಮಾಡಬೇಕಾಗುತ್ತದೆ. ಅಮೆರಿಕದ ಕಾಲು ಭಾಗದಷ್ಟು (ಸುಮಾರು 4.6 ಕೋಟಿ) ಜನರಿಗೆ ಯಾವುದೇ ರೀತಿಯ ಆರೋಗ್ಯ ವಿಮೆ ಇಲ್ಲ. ಅಂದರೆ ಯಾವುದೇ ರೀತಿಯ ಆರೋಗ್ಯ ಸೇವೆ ಇಲ್ಲ. ಯಾಕೆಂದರೆ ಆರೋಗ್ಯ ವಿಮೆ ಇಲ್ಲದೆ ಅಮೆರಿಕದ ಯಾವುದೇ ಡಾಕ್ಟರ್ ಅಥವಾ ಆಸ್ಪತ್ರೆ ಆರೋಗ್ಯ ಸೇವೆ ಕೊಡುವುದಿಲ್ಲ. ಅಲ್ಲದೆ ಸರಿಯಾದ ಆದಾಯ ಅಥವಾ ಉದ್ಯೋಗ ಇಲ್ಲದಿದ್ದರೆ ಕಂಪನಿಗಳು ಆರೋಗ್ಯ ವಿಮೆ ಕೊಡುವುದೂ ಇಲ್ಲ. ಸದ್ಯದ ಮಹಾ ಕುಸಿತದ ಪರಿಣಾಮವಾಗಿ ಹಲವರು ನಿರುದ್ಯೋಗಿಗಳಾಗುತ್ತಿದ್ದು, ಕಳೆದ ಒಂದು ವರ್ಷದಲ್ಲೇ ಆರೋಗ್ಯ ವಿಮೆ ಇಲ್ಲದವರ ಸಂಖ್ಯೆ 80 ಲಕ್ಷದಷ್ಟು ಹೆಚ್ಚಿದೆ.


ಲಾಭಕೋರತನ

ವಿಮೆ ಕಂಪನಿಗಳು, ಡಾಕ್ಟರುಗಳು, ಆಸ್ಪತ್ರೆಗಳು ಮತ್ತು ಔಷಧಿ ಕಂಪನಿಗಳು ಸೇರಿದ ಅಮೆರಿಕದ ಆರೋಗ್ಯ ವ್ಯವಸ್ಥೆ ಲಾಭಕೋರತನದಲ್ಲಿ ಮುಳುಗಿ ಹೋಗಿದೆ. ಅತ್ಯಂತ ಹೆಚ್ಚು ವಿಮೆ ವಸೂಲಿ ಮಾಡುವುದು. ಅತ್ಯಂತ ಕಡಿಮೆ ಬಿಲ್ ಪಾವತಿ ಮಾಡುವುದು ಅದರ ತಂತ್ರ. ಇದು ವಿಮೆ ಮಾಡುವ ಮೊದಲೇ ಇದ್ದ ರೋಗ. ಇದರ ವೆಚ್ಚ ಬಿಲ್ ಪಾವತಿ ಸಾಧ್ಯವಿಲ್ಲ. ವಿಮೆ ದಾಖಲೆಯಲ್ಲಿ (ಸಣ್ಣ ಅಕ್ಷರಗಳಲ್ಲಿ ಬರೆದ ಹಲವಲ್ಲಿ ಒಂದು) ಈ ರೋಗ ಸೇರಿಲ್ಲ. ಇವು ಕೆಲವು ಮಾಮೂಲಿ ತಂತ್ರಗಳು. ಇಂತಹ ತಂತ್ರ ಬಳಸಿ ವಿಮೆ ಕಂಪನಿಗಳು ಒಂದು ಕಾಲು ಕೋಟಿ ಬಿಲ್‌ಗಳ ಪಾವತಿ ತಿರಸ್ಕರಿಸಿವೆಯಂತೆ. ಸ್ವಾಭಾವಿಕವಾಗಿಯೇ ಇಂತಹ ವಿಮೆ ಕಂಪನಿಗಳ ಅಟ್ಟಹಾಸದಿಂದ ಜನ ರೋಸಿ ಹೋಗಿದ್ದಾರೆ.

ಒಬಾಮಾ ಸುಧಾರಣೆಗಳು

ಇಂತಹ ರೋಗಗ್ರಸ್ತ ಆರೋಗ್ಯ ವ್ಯವಸ್ಥೆ ಸುಧಾರಣೆ ಮಾಡದಿದ್ದರೆ ಸಾಮಾಜಿಕ ಆಸ್ಫೋಟ ಆದೀತು. ಜನ ಇಡೀ ವ್ಯವಸ್ಥೆ ವಿರುದ್ಧ ದಂಗೆ ಎದ್ದಾರೂ ಎಂಬ ಅತಂಕ ಅಮೆರಿಕದ ಆಳುವ ವರ್ಗಗಳ ಒಂದು ವಿಭಾಗಕ್ಕೆ. ಒಬಾಮಾ ಆ ವಿಭಾಗದ ಪ್ರತಿನಿಧಿ. ಒಬಾಮಾ ಪ್ರಸ್ತಾವ ಮಾಡಿರುವ ಸುಧಾರಣೆಗಳು ತೀವ್ರವಾದುವೇನಲ್ಲ. ಸೋಶಲಿಸ್ಟ್ ಖಂಡಿತ ಅಲ್ಲ. ಈಗಿನ ಸಂದರ್ಭದಲ್ಲಿ ಕನಿಷ್ಠ ಆಗಲೇ ಬೇಕಾಗಿರುವ ಸುಧಾರಣೆಗಳು. ಕರಡು ಮಸೂದೆಯಲ್ಲಿರುವ ಆರೋಗ್ಯ ಸೇವೆಯ ಪ್ರಮುಖ ಸುಧಾರಣೆಗಳೆಂದರೆ:

- ಎಲ್ಲಾ ನಾಗರಿಕರಿಗೆ ಆರೋಗ್ಯ ವಿಮೆ ದೊರೆಯುವಂತೆ ಮಾಡುವುದು
- ಆರೋಗ್ಯ ವಿಮೆಗೆ ಖಾಸಗಿ ಕಂಪನಿಗಳಲ್ಲದೆ ಸಾರ್ವಜನಿಕ ಕ್ಷೇತ್ರದ ಕಂಪನಿಯ ಒಂದು ಬದಲಿ ಆಯ್ಕೆ ಇರುವಂತೆ ನೋಡಿಕೊಳ್ಳುವುದು
- ವಿಮೆ ಕಂಪನಿಗಳು ಶೇ. 15 ಕ್ಕಿಂತ ಹೆಚ್ಚು ಲಾಭ ಮಾಡದಂತೆ ನಿರ್ಬಂಧ
- ಈಗಾಗಲೇ ಇದ್ದ ರೋಗ ಎಂಬ ನೆಪದಲ್ಲಿ ಆರೋಗ್ಯ ಸೇವೆ ವೆಚ್ಚದ ಪಾವತಿ ತಿರಸ್ಕರಿಸುವುದರ ಮೇಲೆ ನಿರ್ಬಂಧ .
- ಸಾಮಯಿಕ ಆರೋಗ್ಯ ತಪಾಸಣೆ ಮತ್ತು ರೋಗ ತಡೆಗಟ್ಟುವ ವೆಚ್ಚದ ಪಾವತಿಯನ್ನು ಆರೋಗ್ಯ ವಿಮೆಯಲ್ಲಿ ಸೇರಿಸುವುದು.



ಆರೋಗ್ಯದಂತಹ ಅತ್ಯವಶ್ಯಕ ಸೇವೆಗೆ ಸರ್ಕಾರ ಜವಾಬ್ದಾರಿ ವಹಿಸುವುದರ ಕುರಿತು ಅಮೆರಿಕಾದ ಮಾಧ್ಯಮಗಳಲ್ಲಿ ಇಂತಹ ಕೆಟ್ಟ ಪ್ರಚಾರ ನಡೆದಿದೆ

ಮೊದ ಮೊದಲು ತಮ್ಮ ಪ್ರಸ್ತಾವಕ್ಕೆ ಉಭಯ ಪಕ್ಷಗಳ ಸಹ ಸಮ್ಮತಿಗೆ ಪ್ರಯತ್ನಿಸಿ ಸೋತ ಒಬಾಮಾ ರಿಪಬ್ಲಿಕನ್ ಪಕ್ಷದ ಪ್ರತಿರೋಧವನ್ನು ಎದುರಿಸಲು ನಿರ್ಧರಿಸಿದರು. ರಿಪಬ್ಲಿಕನ್ನರ ಅಪಪ್ರಚಾರ ಎದುರಿಸಲು ಸ್ವತಃ ಕಣಕ್ಕೆ ಇಳಿದರು. ಒಬಾಮಾರ ಅಧ್ಯಕ್ಷೀಯ ಪ್ರಚಾರ ಯಂತ್ರ ಪುನಃ ಕಣಕ್ಕೆ ಇಳಿಯಿತು. ದೇಶದಾದ್ಯಂತ 12 ಸಾವಿರ ಸಭೆಗಳನ್ನು ಸಂಘಟಿಸಲಾಯಿತು. 64 ಸಾವಿರ ಸ್ವಯಂ ಸೇವಕರು ಆ ಪ್ರದೇಶದ ಶಾಸಕರ ಭೇಟಿ ಮಾಡಿ ಮಸೂದೆಯ ಮಾಹಿತಿ ನೀಡಿದರು. ಒಬಾಮಾ ಸ್ವತಃ ಭಾಗವಹಿಸಿದ ಹಲವು ' ಟೌನ್ ಹಾಲ್ ಮೀಟಿಂಗ್' ಗಳಲ್ಲಿ ರಿಪಬ್ಲಿಕನ್ನರು ದಾಂಧಲೆ ಮಾಡಿದರು. ಮಾಧ್ಯಮಗಳೂ ಆರೋಗ್ಯ ವಿಮೆ ಉದ್ಯಮದ ಸೇವೆಯಲ್ಲಿ ಇಳಿದವು. ರಿಪಬ್ಲಿಕ
ಅಪಪ್ರಚಾರ, ದಾಂಧಲೆ ದೊಡ್ಡದಾ
ವರದಿಯಾಯಿತು. ಸುಧಾರಣೆಗಳ ಪರ ವಾ
ಸಭೆಗಳ ವರದಿ ಕಾಣದಾಯಿತು. ಫಾಕ್ಸ್
ಒಬಾಮಾ ಸಭೆಗಳಲ್ಲಿ ದಾಂಧಲೆ ಮಾಡಲು
ಬಂಟರನ್ನು ಕಳಿಸುವ ವರೆಗೆ ಹೋಯಿತು.
ಆರೋಗ್ಯ ಸುಧಾರಣೆಗಳ ವಿರುದ್ಧ ಇದ್ದಾ
ಒಬಾಮಾರ ಅಧ್ಯಕ್ಷೀಯ ಬೆಂಬಲ ಅದರಿ
ಕುಸಿಯುತ್ತಾ ಇದೆ ಅಂತ ವಾಲ್ ಸ್ಟ್ರೀಟ್ ಜರ್ನ
(ಅಮೆರಿಕದ ದೈತ್ಯ ಕಂಪನಿಗಳ ಮುಖವಾಣಿ) ಹ
ಸಮೀಕ್ಷೆಗಳನ್ನು ಪ್ರಕಟಿಸಿತು.

ಲಾಭ V/s ಆರೋ
ಹೋರಾಟ


ಈಗ ಕರಡು ಮಸ
ಅಮೆರಿಕದ ಕಾಂಗ್ರೆಸ್
ಸದನ) ನ. ಮುಂದೆ
ಅದಕ್ಕೆ ಬೆಂಬಲ ಪಡೆಯ
ಅಧ್ಯಕ್ಷ ಒಬಾಮಾ ತಮ್ಮ
ಪ್ರಭಾವ ಬಳಸುತ್ತಿದ್ದಾ
ಆದರೆ ವಿಮೆ ಉದ್ಯಮ ಅ
ಡೆಮೊಕ್ರಾಟಿಕ್ ಪಕ್ಷದ ಹ
ಕಾಂಗ್ರೆಸ್ ಸದಸ್ಯರನ್ನು ಖ
ಮಾಡಿ ಮಸೂದೆಯ
ಸೋಲಿಸಲು ಪ್ರಯತ್ನಿಸುತ
ಬ್ಯಾಂಕ್ ಬೇಲ್ ಔಟ್
ಕೋಟ್ಯಾಂತರ ಡಾಲರುಗ
ರಾತ್ರೋ ರಾತ್ರಿ ಮಂಜೂರು ಮಾಡಿದ ಕಾಂಗ್ರ
ಬಡವರ ಮಧ್ಯಮ ವರ್ಗದವರ ಅಳಿವು-ಉಳ
ಪ್ರಶ್ನೆ ಆಗಿರುವ ಆರೋಗ್ಯ ಸೇವೆಯಲ್ಲಿ
ಸುಧಾರಣೆಗಳಿಗೆ ಹಣ ಎಲ್ಲಿ ಅಂತ ಚರ್ಚಿ
ತೊಡಗಿದೆ. ಅದಕ್ಕೆ 10 ವರ್ಷಗಳ ಕಾಲ ಬೇ
ಹಣ, ಬುಶ್ ಅಧ್ಯಕ್ಷರಾಗಿ ಆಯ್ಕೆಯಾದ ಕೂಡ
ಕೊಟ್ಟ ತೆರಿಗೆ ವಿನಾಯ್ತಿಗಿಂತ ವ
ಅಫ್ಘನಿಸ್ತಾನ-ಇರಾಕ್ ಯುದ್ಧಕ್ಕೆ ಮಾಡಿದ ಖರ್ಚ
ಕಡಿಮೆ ಎಂದು ಒಬಾಮಾ ಮಾರ್ಮಿಕವ
ಹೇಳಿದ್ದಾರೆ. ಒಬಾಮಾರಿಗೆ ಅಫ್ಘನಿಸ್ತಾನ-ಇರ
ಪಡೆಗಳನ್ನು ವಾಪಸು ಕರೆಸುವ, ಬ್ಯಾಂಕ್- ಕ
ಕೈಗಾರಿಕೆ ಬೇಲ್ ಔಟ್ ವಿಷಯಗಳಲ್ಲಿ ದೈತ್ಯ ಕ
ಲಾಬಿಗೆ ಮಣಿದ ಒಬಾಮಾಗೆ ತಾವು ನಿಜವಾಗಿ
'ಬದಲಾವಣೆ' ತರಬಲ್ಲ ಅಧ್ಯಕ್ಷ ಎಂದು ತೋರಿ
ಇದು ಬಹುಶಃ ಕೊನೆಯ ಅವಕ
ಬಂಡವಾಳಶಾಹಿ ಲಾಭ ಅಥವಾ ಜನತ
ಆರೋಗ್ಯ-ಕಲ್ಯಾಣದ ನಡುವಿನ ಈ ಹೋರಾ
ಬಂಡವಾಳಶಾಹಿ ವ್ಯವಸ್ಥೆಯ ನಿಜಸ್ವರೂಪದ
ಅಮೆರಿಕದ ಜನತೆಯ ಕಣ್ಣು ತೆರೆಸುವಲ್ಲಿ ಪ್ರಮ
ಪಾತ್ರ ವಹಿಸುತ್ತದೆ ಎಂದು ಆಶಿಸಬೇಕಾಗಿದೆ.

ಹಲವು ಹೋರಾಟಗಳ ಧೀಮಂತ ನಾಯಕ

ಅಗಲಿದ ಹಿರಿಯ ಸಂಗಾತಿ ಸಿ.ಕಾಳಪ್ಪ ಶೆಟ್ಟಿ

ಉಡುಪಿ ಜಿಲ್ಲೆಯ ಅತ್ಯಂತ ಹಿರಿಯ ...ನಿಸ್ಟ್ ನಾಯಕ ರೈತ ಕಾರ್ಮಿಕರ ನೆಚ್ಚಿನ ...ದಾಳು ಆಗಿದ್ದ ಕಾಮ್ರೇಡ್ ಸಿ.ಕಾಳಪ್ಪ ಶೆಟ್ಟಿ ...1.2009 ರಂದು ಅಲ್ಪಕಾಲದ ಅಸೌಖ್ಯದ ...ಕ ನಿಧನರಾಗಿದ್ದಾರೆ.

...ಮೂಲತ: ಕೊಕ್ಕರ್ಣೆ ಬಳಿಯ ...ಬೆಟ್ಟಿನವರಾಗಿದ್ದ ಸಂಗಾತಿ ಕಾಳಪ್ಪ ಶೆಟ್ಟರು ... ವರ್ಷದ ಬಾಲಕನಾಗಿದ್ದಾಗಲೇ ಅವರ ...ು ತಮ್ಮ ಕುಟುಂಬದ ಆಸ್ತಿಯ ಪಾಲಿನಿಂದ ...ತಿಸಲ್ಪಟ್ಟು ಮಗನೊಂದಿಗೆ ಉಡುಪಿಗೆ ...ು ದೊಡ್ಡನಗುಡ್ಡೆಯಲ್ಲಿ ವಾಸ ...ಡಿಕೊಂಡಿದ್ದರು. ವಿದ್ಯಾಭ್ಯಾಸಕ್ಕೆ ...ಕೂಲವಿಲ್ಲದ ಕಾರಣ ಸಂಗಾತಿ ಕಾಳಪ್ಪ ... ಚಿಕ್ಕವಯಸ್ಸಿನಲ್ಲೇ ಬೀಡಿಗೆ ನೂಲು ...ುವುದನ್ನು ಕಲಿತು ಬೀಡಿ ಕಾರ್ಮಿಕನಾಗಿ ...ಯಬೇಕಾಯಿತು. ಕೆಲ ಕಾಲ ಅವರು ಬೀಡಿ ...ರ್ಮಿಕರನ್ನು ಸಂಘಟಿಸಿ ಹೋರಾಟ ...ದ್ದರು. ಅವರು ಉಡುಪಿ ತಾಲ್ಲೂಕು ...ರಲ್ ವರ್ಕರ್ಸ್ ಯೂನಿಯನ್ನಿನ ಸ್ಥಾಪಕ ...ಕ್ಷರೂ ಆಗಿದ್ದರು. ಹಾಗಿದ್ದರೂ ...ಟಕರಾಗಿ, ಹೋರಾಟಗಾರರಾಗಿ ಸಂಗಾತಿ ...ಪ್ಪ ಶೆಟ್ಟರ ಪ್ರಮುಖ ಕ್ಷೇತ್ರ ರೈತಸಂಘವೇ ...ತ್ತು. ಕರ್ನಾಟಕ ಪ್ರಾಂತ ರೈತ ಸಂಘದ ಉಡುಪಿ ತಾಲ್ಲೂಕು ಅಧ್ಯಕ್ಷರಾಗಿ ಅವರು ಅನೇಕ ಹೋರಾಟಗಳಿಗೆ ಧೀಮಂತ ನಾಯಕತ್ವ ನೀಡಿದ್ದಾರೆ. ಉಡುಪಿ ತಾಲೂಕಿನ ಕಕ್ಕುಂಟೆ,



ಶಿವಳ್ಳಿ, ಉಪ್ಪೂರು ಮುಂತಾದ ಕಡೆ ಬಡ ಗೇಣಿದಾರರ ಪರವಾಗಿ, ಭೂಮಾಲಕರ ದೌರ್ಜನ್ಯದ ವಿರುದ್ಧ ಅವರು ಸ್ಮರಣೀಯ ಹೋರಾಟ ನಡೆಸಿ ಮುಖಂಡತ್ವ ನೀಡಿದ್ದಾರೆ.

ಕಕ್ಕುಂಟೆ ಎಂಬಲ್ಲಿ ನ್ಯಾಯಾಧೀಶರೊಬ್ಬರ ಮಡದಿ ಲಲಿತಾ ರೈ ಎಂಬವರ ಭೂಮಿಯ ವಿವಾದದಲ್ಲಿ ಭೂಮಾಲಕರ ಗೂಂಡಾಗಳು ಮತ್ತು ಬಡಗೇಣಿದಾರರ ನಡುವೆ ಮಾರಾಮಾರಿ ಮತ್ತು ಹೊಡೆದಾಟ ನಡೆದಾಗಲೂ ಪೈಲ್ವಾನರಂತೆ ಕಟ್ಟುಮಸ್ತಾದ ಮೈಕಟ್ಟು ಹೊಂದಿದ್ದ ಸಂಗಾತಿ ಶೆಟ್ಟರು ಮುನ್ನುಗ್ಗಿ ಹೋರಾಟ ಮುನ್ನಡೆಸಿದ್ದಾರೆ. ಭೂಮಾಲಕರು ಏನೇನೋ ಸಂಚು ನಡೆಸಿ ಬಡಗೇಣಿದಾರರು ಸಾಗುವಳಿ ಮಾಡುತ್ತಿದ್ದ ಗದ್ದೆಯಲ್ಲಿ ತಮ್ಮ ಮಗನ ಮದುವೆಗಾಗಿ ಚಪ್ಪರ ಹಾಕಿಸಿದಾಗ ಸಂಗಾತಿ ಕಾಳಪ್ಪ ಶೆಟ್ಟರು ಆ ಚಪ್ಪರದ ಮುಂದುಗಡೆಯೇ ಕಂಬಾವುಟ ಏರಿಸಿ ಗೇಣಿದಾರರಿಂದ ಪ್ರತಿಭಟನೆ ನಡೆಸಿದರು. ಕೊನೆಗೂ ಇದರಿಂದಾಗಿ ಭೂಮಾಲಕರು ಹಿಮ್ಮೆಟ್ಟಲೇಬೇಕಾಯಿತು. ಉಡುಪಿ ಗುಂಡಿಬೈಲಿನಲ್ಲಿ ರಸ್ತೆಯ ಬಳಿ ಇದ್ದ ಕಾಳಪ್ಪ ಶೆಟ್ಟರ ಬೀಡಾಬೀಡಿ ಅಂಗಡಿ ನೆಪಮಾತ್ರಕ್ಕೆ ಅಂಗಡಿಯಾಗಿತ್ತೇ ಹೊರತು ವಾಸ್ತವವಾಗಿ ಅದು ರೈತ ಸಂಘದ ಕಚೇರಿಯೇ ಆಗಿತ್ತು. ಗೇಣಿ ಒಕ್ಕಲು ತಕರಾರುಗಳು, ಭೂಮಾಲಕ ರೊಂದಿಗಿನ ವಿವಾದ ಇವೆಲ್ಲ ಪರಿಹಾರವಾಗುತ್ತಿದ್ದುದು ಕಾಳಪ್ಪ ಶೆಟ್ಟರ ಅಂಗಡಿಯಲ್ಲೇ. ಕೌಟುಂಬಿಕ ಜಗಳಗಳು, ಮನಸ್ತಾಪ ಇತ್ಯಾದಿಗಳನ್ನು ಸೌಹಾರ್ದಯುತವಾಗಿ ಬಗೆಹರಿಸುವುದರಲ್ಲಿ ಅವರು ನಿಪುಣರಾಗಿದ್ದರು. ಪಕ್ಷ ಬೇಧವಿಲ್ಲದೆ ಪ್ರದೇಶದ ಎಲ್ಲ ಜನರ ಪಾಲಿಗೆ ಅವರೊಬ್ಬ ಹಿರಿಯಣ್ಣನಂತಿದ್ದರು. ಈ ಅಪಾರ ಜನಪ್ರಿಯತೆಯಿಂದಾಗಿಯೇ ಅವರು ಮೂರು ಅವಧಿಗೆ ಉಡುಪಿ ನಗರ ಸಭೆಯ ಕೌನ್ಸಿಲರ್ ಆಗಿ ಚುನಾಯಿತರಾಗಿದ್ದರು. ನಗರಸಭಾ ಸದಸ್ಯರಾಗಿ ಅವರು ತನ್ನ ಗುಂಡಿಬೈಲು ವಾರ್ಡಿನ ಪ್ರಗತಿಗಾಗಿ ಅಪಾರ ಶ್ರಮ ವಹಿಸಿ ದುಡಿದಿದ್ದಾರೆ.

1973 ರಲ್ಲಿ ಕರ್ನಾಟಕ ಭೂಸುಧಾರಣಾ ಕಾನೂನು ಜ್ಯಾರಿಗೆ ಬಂದಾಗ ಅವರು ನೂರಾರು ಗೇಣಿ ಒಕ್ಕಲುಗಳಿಗೆ ಡಿಕ್ಲರೇಶನ್ ನೀಡುವಂತೆ ಪ್ರೋತ್ಸಾಹಿಸಿ, ನೆರವು ನೀಡಿ ಅವರಿಗೆಲ್ಲ ಭೂ ಒಡೆತನ ದೊರಕಿಸಿಕೊಡುವುದರಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ವಿದ್ಯಾವಂತರು ಯುವಜನರು ಸಿಪಿಐ(ಎಂ) ಪಕ್ಷ ಸೇರಿ ಅದರ ಚಟುವಟಿಕೆಗಳಲ್ಲಿ ತಮ್ಮನ್ನು ಹೆಚ್ಚುಹೆಚ್ಚಾಗಿ ತೊಡಗಿಸಿಕೊಳ್ಳಬೇಕೆಂದು ಅವರು ಹಂಬಲಿಸುತ್ತಿದ್ದರು. ತನ್ನ 84 ರ ಹರೆಯದಲ್ಲಿ ನಿಧನರಾಗುವವರೆಗೂ ಅವರು ಪಕ್ಷದ ಬಗ್ಗೆ ನಿಷ್ಠೆ ಮತ್ತು ಅಭಿಮಾನ ಹೊಂದಿದ್ದರು.

ಸಂಗಾತಿ ಶೆಟ್ಟರು ಇಬ್ಬರು ಪುತ್ರರು ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ.

ಸಂಗಾತಿ ಚೆಗ್ರಿಬೆಟ್ಟು ಕಾಳಪ್ಪ ಶೆಟ್ಟರ ನೆನಪಿಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಉಡುಪಿ ಜಿಲ್ಲಾಸಮಿತಿ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿತು ಮತ್ತು ಅವರ ಮಕ್ಕಳಿಗೆ ತನ್ನ ಗಾಢ ಸಂತಾಪ ಸಲ್ಲಿಸಿತು.

ವರದಿ : ಎ.ಎಸ್. ಆಚಾರ್ಯ

...ೋಪಾಲ್ ಅನಿಲ ದುರಂತಕ್ಕೆ 25 ವರ್ಷ....

12 ರಿಂದ

...ಣವು ಎಲ್ಲ ರೀತಿಯಲ್ಲೂ 'ಕಾರ್ಪೋರೇಟ್ ...ಗೆ ಒಂದು ಉತ್ತಮ ಉದಾಹರಣೆಯಾಗಿದೆ.

...ು ಎಲ್ಲಿದೆ?

...ಷಾನಿಲ ಸೋರಿಕೆ ದುರಂತ ಸಂಭವಿಸಿದ ...ದರಲ್ಲಿ, ಅಪಾಯಕ್ಕೆ ಸಿಲುಕಿದ ಸಂತ್ರಸ್ತರ ...ವಾಗಿ ತಾನು ವ್ಯಾಜ್ಯ ಹೂಡುವುದಾಗಿ ಭಾರತ ...ರ ಜವಾಬ್ದಾರಿ ವಹಿಸಿಕೊಂಡು ಯೂನಿಯನ್ ...ಬೈಡ್ ಕಂಪನಿಯ ವಿರುದ್ಧ ಅಮೇರಿಕಾದ ...ರ್ಟಿನಲ್ಲಿ ಕಂಪನಿಯಿಂದ ರೂ. 13,500 ಕೋಟಿ ...ಹಾರ ಕೇಳಿ ದಾವೆ ಹೂಡಿತು. ಆದರೆ, ...ನಿಯನ್ ಕಾರ್ಬೈಡ್ ಕಂಪನಿಯು ತಾನು ಈ ...ಕದ್ದಮೆಯನ್ನು ಭಾರತೀಯ ಕೋರ್ಟಿನಲ್ಲಿಯೇ ...ಸಲು ಒಪ್ಪಿಕೊಂಡಿತು. ನಂತರದಲ್ಲಿ, ...ಹಾರವನ್ನು ಕೊಡದೆ ತಪ್ಪಿಸಿಕೊಳ್ಳಲು, ಅದು ...ಂದು ಬಹುರಾಷ್ಟ್ರೀಯ ಕಂಪನಿಯೇ ಅಲ್ಲ ... ವಾದಿಸಿತು. ತನ್ನ ಕಾರ್ಖಾನೆಯಿಂದ ...ಸೂಸಿದ ಅನಿಲವು ವಿಷಕಾರಿಯೇ ಅಲ್ಲವೆಂದು ...ಿತು. ಕೊನೆಗೆ ತಾನು ರೂ. 500 ಕೋಟಿ ...ಹಾರ ಕೊಡುತ್ತೇನೆಂದು ಹೇಳಿತು. ಕಂಪನಿಯು ...ಹಾರ ವಿಮೆಯ ಅರ್ಧ ಭಾಗಕ್ಕಿಂತಲೂ ಕಡಿಮೆ ಮೊತ್ತವಿದು. ಮತ್ತೊಂದೆಡೆ, 1989ರ ಹೊತ್ತಿಗೆ ಕಂಪನಿಯು ವ್ಯಾಜ್ಯವಾಡಲು ರೂ. 225 ಕೋಟಿ ಖರ್ಚು ಮಾಡಿತ್ತು.

ನಂತರ 1989ರಲ್ಲಿ ಭಾರತ ಸರ್ಕಾರ ಮತ್ತು ಕಾರ್ಬೈಡ್ ಕಂಪನಿಯು ಮಾಡಿಕೊಂಡ ರಾಜಿಯ ಪ್ರಕಾರ ಕಂಪನಿಯು ಪ್ರತಿ ಸಂತ್ರಸ್ತರಿಗೆ ತಲಾ ರೂ. 22,500/- ನ್ನು ಪರಿಹಾರವಾಗಿ ನೀಡುವುದು, ಅದಕ್ಕೆ ಪ್ರತಿಯಾಗಿ ಭಾರತವು ತಾನು ಕಂಪನಿಯ ವಿರುದ್ಧ ಹೂಡಿದ್ದ ಅಪರಾಧ ಮೊಕದ್ದಮೆಗಳನ್ನೆಲ್ಲ ಹಿಂತೆಗೆದುಕೊಳ್ಳುವಂತೆ ಮಾತುಕತೆಯಾಯಿತು. ಈ ಪರಿಹಾರವು ವಿಶ್ವ ಇನ್ನಾವುದೇ ಮೂಲೆಯಲ್ಲೂ ಕೇಳರಿಲಕ್ಕೂ ಸಾಧ್ಯವಿಲ್ಲದಷ್ಟು ಕಳಪೆಯದು. ಕೊನೆಗೆ ಬೇಸತ್ತ ಸಂತ್ರಸ್ತರು ಸುಪ್ರೀಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿ ನ್ಯಾಯಯುತ ಪರಿಹಾರ ನೀಡುವಂತೆ ಕೋರಿದರು. ಸುಪ್ರೀಂ ಕೋರ್ಟ್ 1991ರಲ್ಲಿ ಕಾರ್ಬೈಡ್ ಕಂಪನಿಯ ಮುಖ್ಯಸ್ಥ ವಾರೆನ್ ಆಂಡರ್‌ಸನ್ ರವರನ್ನು ನ್ಯಾಯಾಲಯದಲ್ಲಿ ಹಾಜರಾಗಲು ತಿಳಿಸಿತು. ಹಾಜರಾಗಲು ವಿಫಲರಾದ ಆಂಡರ್‌ಸನ್‌ನ್ನು ಕೊನೆಗೆ ಬಂಧಿಸಲು ಆಜ್ಞಾಪಿಸಿತು. ಇಷ್ಟಾದರೂ ನಮ್ಮ ಪೊಲೀಸ್ ವ್ಯವಸ್ಥೆ ಆ ಅಪರಾಧಿಯನ್ನು ಬಂಧಿಸುವಲ್ಲಿ ವಿಫಲವಾಗಿದೆ. ಸುಪ್ರೀಂಕೋರ್ಟಿನ ದೃಷ್ಟಿಯಲ್ಲಿ ವಾರೆನ್



ಆಂಡರ್‌ಸನ್ ಇಂದಿಗೂ 'ನಾಪತ್ತೆಯಾದ ವ್ಯಕ್ತಿ'ಯಾಗಿಯೇ ಉಳಿದಿದ್ದಾನೆ. ಆದರೆ, ಅಮೇರಿಕಾದ ನಗರವೊಂದರಲ್ಲಿ ಐಷಾರಾಮಿ ಜೀವನ ನಡೆಸುತ್ತಿರುವುದನ್ನು ಸಂಘ ಸಂಸ್ಥೆಯೊಂದು ಪತ್ತೆ ಹಚ್ಚಿತ್ತು.

ಭಾರತ-ಅಮೇರಿಕಾ ಪರಮಾಣು ಪರಿಹಾರ ಒಪ್ಪಂದ:

ಇಂದು ಭಾರತ-ಅಮೇರಿಕಾ ನಡುವೆ ಪರಮಾಣು ಪರಿಹಾರ ಒಪ್ಪಂದ ಮಾಡಿಕೊಳ್ಳಲು ತಯಾರಿ ನಡೆಯುತ್ತಿದೆ. ಈ ಒಪ್ಪಂದವನ್ನು ಡಿಸೆಂಬರ್ 3ಕ್ಕೆ 25 ವರ್ಷ ತುಂಬುವ ಭೋಪಾಲ್ ವಿಷಾನಿಲ ದುರಂತದ ಹಿನ್ನೆಲೆಯಲ್ಲಿ ನೋಡಬೇಕಿದೆ. ಅಮೇರಿಕಾದ ಬಹುರಾಷ್ಟ್ರೀಯ ಕಂಪನಿಗಳು ಅಪಘಾತ ಸಂದರ್ಭದಲ್ಲಿ ಪರಿಹಾರ ನೀಡದೆ ತಲೆತಪ್ಪಿಸಿಕೊಂಡು ಹೋಗುವುದಕ್ಕೆ ಈ ಒಪ್ಪಂದವು ಪೂರ್ಣ ಅವಕಾಶ ಮಾಡಿಕೊಡುತ್ತದೆ. ಅಮೇರಿಕಾದ ಕಂಪನಿಗಳು ಸರಬರಾಜು ಮಾಡುವ ಪರಮಾಣು ಸ್ಥಾವರಗಳು ಅಪಘಾತಕ್ಕೀನಾದರೂ ಈಡಾದಲ್ಲಿ ಅದರಿಂದ ಉಂಟಾಗುವ ಹಾನಿಗೆ ಮತ್ತು ಸಂತ್ರಸ್ತರಿಗೆ ಎಲ್ಲ ಪರಿಹಾರವನ್ನು ಭಾರತವೇ ಭರಿಸುವ ಮತ್ತು ಇದರಿಂದ ಸಂಪೂರ್ಣವಾಗಿ ಬಹುರಾಷ್ಟ್ರೀಯ ಕಂಪನಿಗಳು ಕೈತೊಳೆದುಕೊಂಡು ಹೋಗುವ ಎಲ್ಲ ಅವಕಾಶಗಳನ್ನು ಈ ಒಪ್ಪಂದದಲ್ಲಿ ಅಳವಡಿಸಲಾಗಿದೆ. ಇಂಥಹ ಜನವಿರೋಧಿ ಒಪ್ಪಂದದಿಂದ ಭಾರತ ಸರ್ಕಾರ ಹಿಂದೆ ಸರಿಯುವಂತೆ ಮಾಡಲು ಜನ ಚಳುವಳಿ ರೂಪಿಸಬೇಕಿದೆ.

JANASHAKTHI KANNADA VARA PATRIKE NOV. 22, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

'ಮನುಷ್ಯತ್ವದ ಬರ ನೀಗಬೇಕಿದೆ'

ಹಸಿವು ಮತ್ತು ಲಾಭ

ಸಾಂಸ್ಕೃತಿಕ ಸ್ಪಂದನೆ

ಲಾಭ, ಲಾಭಕೋರತನ ಹಾಗೂ ಹಸಿವಿಗೂ ನೇರಾನೇರ ಸಂಬಂಧ. ಬಹುರಾಷ್ಟ್ರೀಯ ಕಂಪನಿಗಳು, ಅಂತರರಾಷ್ಟ್ರೀಯ ಹಣಕಾಸು ಬಂಡವಾಳದ ಜೂಜುಕೋರತನಗಳು ಜಗತ್ತಿನಲ್ಲಿ ಹಸಿವಿನ ತೀವ್ರತೆ ಹೆಚ್ಚಿಸುತ್ತಾ ನಡೆದಿವೆ. ಬೆಲೆಯೇರಿಕೆಯ ಬಿಸಿ, ಹಸಿವಿನ ಸಂಕಟಗಳ ಕಾವು ಸಾಂಸ್ಕೃತಿಕ ಲೋಕವನ್ನು ತಟ್ಟದಿರುವುದು ಸಾಧ್ಯವೇ? ಸಾಧ್ಯವೇ ಇಲ್ಲ. ಹೀಗಾಗಿ 'ಸಮುದಾಯ'ವು ಹಸಿವು ಮತ್ತು ಲಾಭದ ಕುರಿತು ಒಂದು 'ಸಾಂಸ್ಕೃತಿಕ ಸ್ಪಂದನೆ'ಯಾಗಿ ನವೆಂಬರ್ 5 ರಂದು ಬೆಂಗಳೂರಿನ ಸೆನೆಟ್ ಹಾಲ್ ಸಭಾಂಗಣದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ ಕವಿಗೋಷ್ಠಿ, ಪುಸ್ತಕ ಬಿಡುಗಡೆ ಮುಂತಾದವುಗಳನ್ನು ಹಮ್ಮಿಕೊಂಡಿತ್ತು.

ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯ ಹೈಕೋರ್ಟ್‌ನ ನ್ಯಾಯಮೂರ್ತಿ ಶ್ರೀ ಎಚ್.ಎನ್.ನಾಗಮೋಹನ್ ದಾಸ್‌ರವರು ಉದ್ಘಾಟಿಸಿದರು. 'ಆಹಾರ ಬಿಕ್ಕಟ್ಟು' ಎಂಬ ಕುರಿತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ಕೇಂದ್ರದ ಪ್ರಾಧ್ಯಾಪಕರಾದ ಡಾ. ಟಿ.ಆರ್.ಚಂದ್ರಶೇಖರ್ ವಿಷಯ ಮಂಡಿಸಿದರು. ಇದೇ ಗೋಷ್ಠಿಯಲ್ಲಿ 'ಹಸಿವು ಸಾಂಸ್ಕೃತಿಕ ಆಯಾಮಗಳು' ಎಂಬ ಬಗ್ಗೆ ನಾಟಕಕಾರರು ಅಂಕಣಕಾರರೂ ಆದ ಪ್ರೊ. ಲಿಂಗದೇವರು ಹಳೆಮನೆ ಮಾತನಾಡಿದರು.

ಕರ್ನಾಟಕ ರಾಜ್ಯ ಸಮುದಾಯ ಸಮನ್ವಯ ಸಮಿತಿ ಅಧ್ಯಕ್ಷರಾದ ಆರ್.ಕೆ.ಹುಡುಗಿಯವರು ಅಧ್ಯಕ್ಷತೆ ವಹಿಸಿದ್ದರು.

ಹಸಿವಿನ ಸಂಕಟಕ್ಕೆ ಸಾಹಿತ್ಯ ಸ್ಪಂದನೆಯಾಗಿ ಹಲವು ಕನ್ನಡದ ಕವಿಗಳು ಹಸಿವನ್ನು ಕುರಿತು ಬರೆದ ಕವನಗಳ ಸಂಗ್ರಹವಾದ 'ಒಡಲ ಬೆಂಕಿ' ಹಾಗೂ ಪಿ.ಸಾಯಿನಾಥ್‌ರವರ ಲೇಖನಗಳ ಅನುವಾದಿತ ಕೃತಿ 'ಬಿತ್ತಿದ್ದೀರಿ ಅದಕ್ಕೆ ಅಳುತ್ತೀರಿ' (ಅನುವಾದ : ಟಿ.ಎಲ್.ಕೃಷ್ಣೇಗೌಡ) ಯನ್ನು ನ್ಯಾಯಮೂರ್ತಿಗಳು ಬಿಡುಗಡೆ ಮಾಡಿದರು.



ವೇದಿಕೆಯಲ್ಲಿ ಸುರೇಂದ್ರ, ಟಿ.ಆರ್.ಚಂದ್ರಶೇಖರ್, ಆರ್.ಕೆ.ಹುಡುಗಿ, ನಾಗಮೋಹನದಾಸ್



ಪಿ.ಸಾಯಿನಾಥ್‌ರ ಕೃತಿಯ ಕುರಿತು ಪತ್ರಕರ್ತ ಕವಿ ಜಿ.ಎನ್.ಮೋಹನ್ ಮಾತನಾಡಿದರು.

ಸಮಾರಂಭದ ಆರಂಭದಿಂದ ಕೊನೆಯವರೆಗೆ ನಡುನಡುವೆ ಹಸಿವನ್ನು ವಸ್ತುವಾಗುಳ್ಳ ತಮ್ಮ ಕವನಗಳನ್ನು ಹಲವು ಕವಿಗಳು ಓದಿದರು.

ಕೊನೆಯಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಬೆಂಗಳೂರು ಸಮುದಾಯ ಅಧ್ಯಕ್ಷರೂ ಆದ ಜಿ.ಎಸ್.ಸಿದ್ಧರಾಮಯ್ಯ ಅವರು ವಂದನೆ ಸಲ್ಲಿಸಿದರು. ಸಮುದಾಯದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಸುರೇಂದ್ರ ರಾವ್ ಆರಂಭದಲ್ಲಿ ಪ್ರಾಸ್ತಾವಿಕ ಮಾತನ್ನಾಡಿದರು. ರಾಜ್ಯದ ವಿವಿಧ ಜಿಲ್ಲೆಗಳ ಹಾಗೂ 'ಸಮುದಾಯ' ವಿವಿಧದ ಘಟಕಗಳಿಂದ ಬಂದ ಸದಸ್ಯರು ಸಾಂಸ್ಕೃತಿಕ, ಸಾಹಿತ್ಯ ಲೋಕದ ಗಣ್ಯರು, ನಾಗರೀಕರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಮನುಷ್ಯತ್ವದ ಬರ

"ನಮ್ಮ ಸಮಾಜದಲ್ಲಿ ಅನ್ನದ ಬರ, ನೀರಿನ ಬರ, ಮಾತ್ರವಲ್ಲ ಮನುಷ್ಯತ್ವಕ್ಕೂ ಸಹ ಬರ ಇದೆ. ಇದು ತುಂಬಾ ಅಪಾಯಕಾರಿಯಾದ ಸ್ಥಿತಿ. ಇಂತಹ ಸನ್ನಿವೇಶದಲ್ಲಿ ಮನುಷ್ಯದ ಮೊಳಕೆ ಬರಿಸಲು ಸಮುದಾಯ ಸಂಘಟನೆ ಶ್ರಮಿಸುತ್ತಿದೆ."

ಪ್ರೊ.ಆರ್.ಕೆ.ಹುಡಗಿ
ರಾಜ್ಯ ಅಧ್ಯಕ್ಷರು 'ಸಮುದಾಯ'

ಯಾರು ಏನು ಹೇಳಿದರು

ಆಹಾರ, ಶಿಕ್ಷಣಕ್ಕಿಲ್ಲದ ಬಂಡವಾಳ 'ಕೊಲ್ಲುವ ತಂತ್ರಜ್ಞಾನಕ್ಕೆ'

"ಹಸಿವು, ಬಡತನ, ನಿರುದ್ಯೋಗಕ್ಕೂ ಅಪರಾಧಗಳಿಗೆ ನೇರ ಸಂಬಂಧವಿದೆ. ಅದೇ ರೀತಿ ನಿರುದ್ಯೋಗ, ಬಡತನ ಹಸಿವಿಗೂ ಕೋಮುವಾದ' ಭಯೋತ್ಪಾದನೆ, ಪ್ರಾಂತಿಯತೆಗೂ ನೇರ ಸಂಬಂಧವಿದೆ.

ಶಿಕ್ಷಣಕ್ಕೆ, ಆಹಾರಕ್ಕೆ ಇಲ್ಲದ ಬಂಡವಾಳ ಶಸ್ತ್ರಾಸ್ತ್ರಗಳ ತಯಾರಿಕೆಗೆ ದೊರೆಯುತ್ತಿದೆ. ಕೊಲ್ಲುವ ತಂತ್ರಜ್ಞಾನಕ್ಕೆ ದೊರೆಯುತ್ತಿದೆ. ಬಿಪಿಎಲ್ ಕಾರ್ಡ್ ಪಡೆಯಲು ಲಂಚ ಕೊಡಬೇಕಾದ ಪರಿಸ್ಥಿತಿಯಿದೆ. ದೇಶದ ಕೃಷಿ ಬಿಕ್ಕಟ್ಟು ಪರಿಹಾರವಾಗದೇ ಹಸಿವಿನ ಸಮಸ್ಯೆ ಬಗೆಹರಿಯದು."

ನ್ಯಾ. ನಾಗಮೋಹನ್ ದಾಸ್. ಹೆಚ್.ಎನ್.

★

ಆತ್ಮಹತ್ಯೆ ಸುದ್ಧಿಯಲ್ಲ....

"ಸಚಿವ ಕರುಣಾಕರ ರೆಡ್ಡಿ ಮನೆಗೆ ಹಾವು ಬಂದಿರುವುದನ್ನು ಟಿ.ವಿ.ಗಳಲ್ಲಿ ಗಂಟೆಗಟ್ಟಲೆ ತೋರಿಸುತ್ತಾರೆ. ಆದರೆ ರೈತರ ಆತ್ಮಹತ್ಯೆಗಳ ಬಗ್ಗೆ ಟಿ.ವಿ.ಯಲ್ಲಿ ತೋರಿಸುವುದಿಲ್ಲ. ಅಥವಾ ಕೆಲವೇ ನಿಮಿಷ ತೋರಿಸುತ್ತಾರೆ. ಮುಖ್ಯವಾಗಿ ಆತ್ಮಹತ್ಯೆಯಾದ ನಂತರ ಕುಟುಂಬದವರ ಪರಿಸ್ಥಿತಿ ಏನಾಗಿದೆ? ಏನು ಎಂಬ ಬಗ್ಗೆ ಏನೊಂದೂ ತೋರಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಕಮಲಾಪುರದಲ್ಲಿ ದಲಿತರ ಶವವನ್ನು ಹೇಗೆ ಮೆರವಣಿಗೆ ಮಾಡುತ್ತೀರಿ? ಎಂದು ಜಮೀನುದಾರ ತಕರಾರು ಮಾಡಿ ಹಲವಾರು ದಿನಗಳ ಕಾಲ ಹೆಣವು ಅನಾಥವಾಗಿ ಬಿದ್ದಿದ್ದ ಘಟನೆ ನಡೆದಿತ್ತು. ಟ್ರಾಕ್ಟರ್‌ಗಳು ಹೆಚ್ಚಾದ ಮೇಲೆ ಕೆಲಸ ಸಿಗದ ಬಡಗಿಯ ಸಾವು ಸಂಭವಿಸಿತು. ನಮ್ಮ ಸುತ್ತ ಮುತ್ತ ನಡೆಯುವ, ನಮಗೇ ಗೊತ್ತಿಲ್ಲದ ಇಂತಹ ಎಷ್ಟೋ ಪ್ರಕರಣಗಳನ್ನು ಪಿ.ಸಾಯಿನಾಥ್ ದೆಹಲಿಯಲ್ಲಿದ್ದು ಕಂಡುಕೊಳ್ಳುತ್ತಾರೆ. ಅಲ್ಲಿಗೆ ಧಾವಿಸುತ್ತಾರೆ. ಸಾಯಿನಾಥ್‌ರ ಬರಹಗಳನ್ನು ಓದಿದವರು ಪ್ರಶ್ನೆ ಮಾಡುವುದನ್ನು ಆರಂಭಿಸುತ್ತಾರೆ. ಸಮಾಜವನ್ನು ನೋಡುವ ದೃಷ್ಟಿ ಬದಲಾಗುತ್ತದೆ."

ಪತ್ರಕರ್ತ, ಕವಿ **ಜಿ.ಎನ್.ಮೋಹನ್**
ಸಾಯಿನಾಥ್ ಕೃತಿ ಕುರಿತು ಮಾತನಾಡುತ್ತಾ

★

ದೇಶದ ಆಹಾರ ಭದ್ರತೆ ಸಾಧಿಸಿದ್ದೇವೆ.... ಜನರ ಆಹಾರ ಭದ್ರತೆ ಸಾಧಿಸಿಲ್ಲ...

"ಆಹಾರ ಬಿಕ್ಕಟ್ಟಿಗೆ ಜನಸಂಖ್ಯೆಯೇ ಕಾರಣ.... ಅದು ಮಿತಿ ಮಿರಿದೆ ಎನ್ನುತ್ತಾರೆ. ಕಾರಣ ಅದಲ್ಲ. ಬಹುತೇಕ ದೇಶದ ಆಹಾರ ಭದ್ರತೆ ಸಾಧಿಸಿದ್ದೇವೆ. ಆದರೆ ಜನರ ಆಹಾರ ಭದ್ರತೆ ಸಾಧಿಸಿಲ್ಲ. ಹಸಿವು ಎಂಬುದು ಆಹಾರ ಇಲ್ಲದ್ದರಿಂದ ಉಂಟಾಗಿರುವುದಲ್ಲ. ಆಹಾರ ಸಿಗದ್ದರಿಂದ ಉಂಟಾಗಿರುವುದು ಎಂದಿದ್ದಾರೆ ನೊಬೆಲ್ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮಾರ್ತ್ಯಸೇನ್.

ಅಂದರೆ ಆಹಾರ ಇದೆ. ಅದು ಎಲ್ಲ ಜನರಿಗೂ ದೊರಕುತ್ತಿಲ್ಲ. ಕರ್ನಾಟಕದಲ್ಲಿ 65 ಲಕ್ಷ ಜನ ಕೂಲಿಕಾರರು ಇದ್ದಾರೆ. ಇವರು ಆಹಾರದ ಅಭದ್ರತೆಗೆ ಗುರಿಯಾಗಿದ್ದಾರೆ. ಅಭಿವೃದ್ಧಿ ಎಂದರೆ ಜನರಿಗೆ ಆಹಾರವನ್ನು ದಕ್ಕಿಸಿಕೊಳ್ಳುವ ಶಕ್ತಿ ಕೊಡುವುದು. ಅವಕಾಶ ಸೃಷ್ಟಿಸುವುದು. ಜನರನ್ನು 'ಅಭಿವೃದ್ಧಿ'ಯ ಮುಖ್ಯ ದಾತುವನ್ನಾಗಿಸುವ ಕಣ್ಣೋಟ ಬೇಕು."

ಪ್ರೊ. ಟಿ.ಆರ್.ಚಂದ್ರಶೇಖರ್,
ಪ್ರಾಧ್ಯಾಪಕರು, ಹಂಪಿ ಕನ್ನಡ ವಿ.ವಿ.

★

'ದೇಶದಲ್ಲಿ ದಿನಕ್ಕೆ 7000 ಹಸಿವಿನ ಸಾವು.

"ನಮ್ಮ ದೇಶದಲ್ಲಿ ಪ್ರತಿದಿನ 7000 ಜನ ಹಸಿವಿನಿಂದ ಸಾಯುತ್ತಾರೆ. ದಲಿತರು, ಮಹಿಳೆಯರು. ಅದರಲ್ಲೂ ವಿಧವೆ ಮಹಿಳೆಯರು ಹಸಿವಿನ ಸಂಕಟಕ್ಕೆ ಹೆಚ್ಚಾಗಿ ಗುರಿಯಾಗಿದ್ದಾರೆ.

ಜಲಪ್ರಳಯ ಆಗಿ ಇತರ ಪ್ರಾಣಿ ಪಕ್ಷಿಗಳು



ನೀರಿನಲ್ಲಿ ಮುಳುಗುತ್ತಿರುವಾಗ ಜಲಪಕ್ಷಿಗಳು ಕೇಕೇ ಹಾಕುತ್ತವೆ. ನಮ್ಮ ರಾಜ್ಯದಲ್ಲಿ ಭೀಕರ ಪ್ರವಾಹ ಬಂದಿರುವಾಗ ಅಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಬಂಗಾಳದಲ್ಲಿ 40 ರ ದಶಕದಲ್ಲಿ ಲಕ್ಷಾಂತರ ಜನರನ್ನು ಬಲಿ ತೆಗೆದುಕೊಂಡ ಭೀಕರ ಬರ ಕೃತಕ ಬರ.

ಪ್ರೊ. ಲಿಂಗದೇವರು ಹಳೆಮನೆ
ಸಾಹಿತಿಗಳು, ಅಂಕಣಕಾರರು

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ ಫೈಲ್.